ಜೂನ್ 22, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1990

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## 'ಓಯೋ ರೂಮ್ಸ್' ಕಾಮಕಾಂಡ!

## ಓಯೆ...ಓಯೆ... ಹಾಡು ಹಾಡ್ತಾ ಗೃಹಿಣಿ ಹತ್ಯೆ!



ಭಗ್ನಪ್ರೇಮಿ ಕುಕೃತ್ಯ!



## ಪತ್ನಿಯ ರುಂಡ-ಮುಂಡ ಬೇರ್ಪಡಿಸಿ ಠಾಣೆಗೆ ತಂದ!

## ಸುಹಾಸ್ ಶೆಟ್ಟಿ ಕೇಸ್ ಎನ್‌ಐಎ ಹೆಗಲಿಗೆ!



## ಬಟ್ಟೆ ವ್ಯಾಪಾರಿಗೆ ಹನಿ ಖೆಡ್ಡಾ!



## ಸಿಂಗರ್ ಮಂಗ್ಲಿ ಗಾಂಜಾ ಕಿಕ್?!

# ಪುನರ್ ಜಾತಿ ಗಣತಿ ಶುರು!

# ಹತ್ತು ವರ್ಷದಿಂದ ಮಾಡಿದ್ದ ಜಾತಿ ಜನಗಣತಿಗೆ ಎಳ್ಳು ನೀರು! ಬೋಳಿಸಿಕೊಂಡು ಹೋಯ್ತು ಪ್ರಜೆಗಳ 185 ಕೋಟಿ ರೂ!!

**ಹತ್ತು ವರ್ಷಗಳ ಹಿಂದೆ ಆರಂಭವಾದ ಸಿಎಂ ಸಿದ್ದರಾಮಯ್ಯ ನವರ ಜಾತಿ ಜನಗಣತಿ ಕಾರ್ಯ ಪುಟ್ಟಕ್ಕನ ಮಕ್ಕಳು ಮೆಗಾ ಸೀರಿಯಲ್‌ನಂತೆ ಇನ್ನೂ ಮುಂದುವರೆಯುತ್ತಲೇ ಇದೆ! ಕುರ್ಚಿಗೆ ಕಂಟಕ ಬಂದಾಗಲೆಲ್ಲ ಜಾತಿ ಜನಗಣತಿಯ ಕಾರ್ಡ್ ಬಳಸಿ ಪರಿಶಿಷ್ಟ ಜಾತಿ, ಇತರೆ ಹಿಂದುಳಿದ ಸಮುದಾಯಗಳಿಗೆ ಯಾಕೆ ಅಪಮಾನ ಮಾಡುತ್ತೀರಿ ಮುಖ್ಯಮಂತ್ರಿಗಳೇ? ಎಂದು ಹಿಂದುಳಿದ ಜನರೇ ಛೀಮಾರಿ ಹಾಕುತ್ತಿದ್ದಾರೆ! ರಾಷ್ಟ್ರೀಯ 'ದಶವಾರ್ಷಿಕ' ಜನಗಣತಿಯಲ್ಲಿ ಈ ಜಾತಿ ಗಣತಿಯನ್ನೂ ಸೇರಿಸಲು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರ್ಕಾರ ಈಗಾಗಲೇ ನಿರ್ಧಾರ ಮಾಡಿದೆಯಲ್ಲ, ಇದರ ನಡುವೆ ನೀವೇಕೆ ಮತ್ತೊಮ್ಮೆ ಸರ್ವೇ ಮಾಡಿಸಲು ತುದಿಗಾಲಲ್ಲಿ ನಿಂತಿದ್ದೀರಿ? ಪ್ರಜೆಗಳ ಬೆವರಿನ ತೆರಿಗೆ ಹಣವನ್ನ ವಿನಾಕಾರಣ ದುಂದುವೆಚ್ಚ ಮಾಡಬೇಡಿ... ಎಂಬುದಾಗಿ ನಾಡಿನ ಪ್ರಜ್ಞಾವಂತರೂ ಕೂಡ ಸಿಎಂ ಸಿದ್ದು ಅವರಿಗೆ ತಿಳಿ ಹೇಳಿದ್ದಾರೆ!! ಆದಾಗ್ಯೂ ಕಾಂಗ್ರೆಸ್ ಪ್ರಿನ್ಸ್ ರಾಹುಲ್ ಗಾಂಧಿಯವರ ಮಾತು ಕೇಳಿಕೊಂಡು ಸಿದ್ದರಾಮಯ್ಯ, ಡಿಕೆಶಿ ಯವರು ಹತ್ತು ವರ್ಷದಲ್ಲಿ ನೆಟ್ಟಗೆ ಆಗದನ್ನು ಮೂರೇ ಮೂರು ತಿಂಗಳಲ್ಲಿ ಮುಗಿಸಿ ಬಿಡುತ್ತೇವೆ ಅಂತ ಹೊರಟಿದ್ದಾರೆ...!!!!**

ಇಸವಿ 2015ರಲ್ಲಿ ಸಿಎಂ ಸಿದ್ದರಾಮಯ್ಯ ಜಾತಿ ಜನಗಣತಿ ಕಾರ್ಯಕ್ಕೆ ಆದೇಶ ನೀಡಿದ್ದು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್. ಕಾಂತರಾಜು ಅವರ ನೇತೃತ್ವದಲ್ಲಿ ಗಣತಿ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಈ ಕಾರ್ಯಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಹಣ ಬರೋಬ್ಬರಿ 185 ಕೋಟಿ ರೂ.! ಹೆಚ್. ಕಾಂತರಾಜು ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಹಾಲಿ ಜನಸಂಖ್ಯೆಯನ್ನು



6.35 ಕೋಟಿ ಎಂದು ಅಂದಾಜಿಸಿದ್ದು, ಆಯೋಗವು ಏಪ್ರಿಲ್ 11, 2015 ರಿಂದ ಮೇ 30, 2015 ರ ನಡುವೆ 5,98,13,165 (99.88%) ಜನರನ್ನು ಒಳಗೊಂಡ ಸಮೀಕ್ಷೆಯನ್ನು ನಡೆಸಿದೆ ಎನ್ನಲಾಗಿದ್ದು, 6.35 ಕೋಟಿ ಜನರ ಸಮೀಕ್ಷೆಯಲ್ಲಿ ಸುಮಾರು 37 ಲಕ್ಷ ಜನರನ್ನು (5.83%)ಜಾತಿ ನಮೂದಿಸದ ಕಾರಣ ಸಮೀಕ್ಷೆಯಿಂದ ಹೊರಗಿಡಲಾಗಿದೆ! ಈ ಸಮೀಕ್ಷೆಯು ರಾಜ್ಯದಲ್ಲಿ 5,98,14,942 ಜನರನ್ನು ಒಳಗೊಂಡಿದ್ದು,ನಗರ ಪ್ರದೇಶದಲ್ಲಿ; 2,04,02,006 ಮತ್ತು ಗ್ರಾಮೀಣ ಭಾಗದಲ್ಲಿ; 3,94,12,936.

### ಮುಸಲ್ಮಾನರು ಅತಿದೊಡ್ಡ ಸಮುದಾಯ!

ಕಾಂಗ್ರೆಸ್ ಶಾಸಕರೊಬ್ಬರು ಗಣತಿ ದತ್ತಾಂಶವನ್ನು 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ದಿನ ಪತ್ರಿಕೆಗೆ ಹಂಚಿಕೊಂಡಿದ್ದ ಸಾಮಾಜಿಕ ಮತ್ತು ಆರ್ಥಿಕ ಶೈಕ್ಷಣಿಕ ಸಮೀಕ್ಷೆ(SES) - 2015 ಜಾತಿ ದತ್ತಾಂಶವನ್ನು ನೋಡುವುದಾದರೆ, ಕರ್ನಾಟಕದಲ್ಲಿ ಮುಸಲ್ಮಾನರು ಅತಿದೊಡ್ಡ ಸಮುದಾಯವಾಗಿ ಹೊರಹೊಮ್ಮಿದ್ದು 76,76,247 (12.83%) ಜನಸಂಖ್ಯೆಯನ್ನು ಹೊಂದಿದ್ದಾರೆಂದು ಹೇಳಲಾಗಿದೆ! ಈ ವರದಿಯು ಕೆಲವು ಪ್ರಮುಖ ಸಮುದಾಯಗಳ 'ವಿವಾದಾತ್ಮಕ' ವಿಭಜನೆಯನ್ನು ಒಳಗೊಂಡಿದೆ ಎಂದೂ ಹೇಳಲಾಗಿದೆ. ಈ ನಡುವೆ ಜಾತಿ ಗಣತಿ ದಾಖಲೆ ಕಳುವಾಗಿದೆ ಎಂಬ ಸುದ್ದಿ ಹಬ್ಬಿದ್ದು,ಸರ್ಕಾರ ಯಾವುದೊ ಟೆಕ್ನಿಕ್ ಬಳಸಿ ದತ್ತಾಂಶವನ್ನು ಕ್ರೂಢಿಕರಿಸಿದೆ ಎನ್ನಲಾಗಿದೆ! ಇನ್ನೂ ಅಧಿಕೃತವಾಗಿ ದೃಢೀಕರಿಸದ ಆ ದತ್ತಾಂಶವು ಮುಸ್ಲಿಮರನ್ನು



ಅತಿದೊಡ್ಡ ಸಮುದಾಯವೆಂದು ತೋರಿಸಿತ್ತು! ನಂತರ, ಹತ್ತು ಹಲವು ಜಾತಿಗಳನ್ನು ಸಂಯೋಜನೆ ಮಾಡಿದ 'ಪರಿಶಿಷ್ಟ ಜಾತಿ' ಏಕೈಕ ಅತಿದೊಡ್ಡ ಸಮುದಾಯವೆಂದು ತೋರಿಸಿತ್ತು!

ಮುಖ್ಯಮಂತ್ರಿ ಸಿದ್ದರಾಮಯ್ಯ ಏಪ್ರಿಲ್ 17 ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಸಿದ್ದು ಅವತ್ತೇ ಈ ವರದಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಈ ಕೆಲಸವಾಗಲಿಲ್ಲ, ಈ ನಡುವೆ ಕಾಂಗ್ರೆಸ್ ಶಾಸಕ ರೊಬ್ಬರು ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಸದರಿ ದತ್ತಾಂಶವನ್ನು ನೀಡಿದ್ದು, ಅದರ ಮೂಲಕ ಮಾಹಿತಿ ವೈರಲ್ ಆಗಿತ್ತು.

ಒಕ್ಕಲಿಗರು, ಲಿಂಗಾಯತರು, ವೀರಶೈವರು, ಹಿಂದುಳಿದ ಈಡಿಗರು, ಬಿಲ್ಲವರು, ಎಸ್‌ಸಿ ಎಡ ಮತ್ತು ಬಲ, ಭೋವಿ, ಲಂಬಾಣಿ, ಎಸ್‌ಟಿ ವಾಲ್ಮೀಕಿ ನಾಯಕರು ಮತ್ತು ಪರಿಶಿಷ್ಟ ಜನಾಂಗದ ಇತರ ಜನಸಂಖ್ಯೆಯನ್ನು ಉಪಪಂಗಡಗಳು ಮತ್ತು ಜಾತಿಗಳ ಪ್ರಕಾರ ವಿಂಗಡಿಸಲಾಗಿತ್ತು ಎಂದು ಮಾನವ ಶಾಸ್ತ್ರಜ್ಞ ಮತ್ತು ಕಾಂಗ್ರೆಸ್ ಬೆಂಬಲಿಗರೊಬ್ಬರು ಹೇಳಿಕೊಂಡಿದ್ದರು.



ಹಳೆಯ ಮೈಸೂರು ಭಾಗದಲ್ಲಿ ಪ್ರಧಾನವಾಗಿರುವ ಒಕ್ಕಲಿಗ ಸಮುದಾಯವು ಜನಸಂಖ್ಯಾ ಪಟ್ಟಿಯಲ್ಲಿ 50,65,642 (8.47%) ದೊಂದಿಗೆ ಎರಡನೇ ಸ್ಥಾನದಲ್ಲಿದೆ, ಕುರುಬರು 44,11,758 (7.38%), ಎಸ್ಸಿ ಎಡ 35,99,895 (6.02%), ಎಸ್ಸಿ ಬಲ 34,98,188 (5.85%) ಮತ್ತು ಎಸ್ಟಿ ವಾಲ್ಮೀಕಿ-ನಾಯಕ 30,31,656 (5.07%) ದೊಂದಿಗೆ ನಂತರದ ಸ್ಥಾನದಲ್ಲಿದೆ. ರಾಜ್ಯದ ಪ್ರಬಲ ಲಿಂಗಾಯತ ಸಮುದಾಯ 30,14,696 (5.04%), ನಂತರ ಎಸ್‌ಸಿ (ಇತರರು) 19,82,011 (3.31%) ಮತ್ತು ವೀರಶೈವ-ಲಿಂಗಾಯತರು 17,88,279 (2.99%) ಇದ್ದಾರೆ.

ಕುರುಹಿನಶೆಟ್ಟಿ ಲಿಂಗಾಯತ ಸಮುದಾಯ 8,325 (0.01%), ಗಾಣಿಗ ಲಿಂಗಾಯತರು 23,483 (0.04%), ಬೇಡ ಜಂಗಮ ಲಿಂಗಾಯತರು 24,127 (0.04%), ಲಾಲಗೊಂಡ ಲಿಂಗಾಯತರು 29,280 (0.05%) (0.05%), 890 ರೆಡ್ಡಿಗಳು ಜಂಗಮ ಲಿಂಗಾಯತರು 94,282 (0.16%), ನೊಣಬ ಲಿಂಗಾಯತರು 1,61,168 (0.27%), ಸದರ್ ಲಿಂಗಾಯತರು 2,55,456 (0.43%) ಮತ್ತು ಪಂಚಮಸಾಲಿ ಲಿಂಗಾಯತರು 10,71,302 (1.79%) ಪ್ರತ್ಯೇಕವಾಗಿ ಕಾಣಿಸಿಕೊಂಡಿದ್ದಾರೆ.



ಮರಸು ಒಕ್ಕಲಿಗರು 5,794 (0.01%), ದಾಸ ಒಕ್ಕಲಿಗರು 17,961 (0.03%), ರೆಡ್ಡಿ ಒಕ್ಕಲಿಗರು 24,059 (0.04%), ಹಳ್ಳಿಕಾರ್ ಒಕ್ಕಲಿಗರು 30,265 (0.05%), ಕುಂಚಿಟಿಗ ಒಕ್ಕಲಿಗರು (0.290%), 73,977 (0.12%), ಎಸ್ಸಿ ಲಂಬಾಣಿಗಳು 13,96,909 (2.34%), ಎಸ್ಸಿ ಭೋವಿಗಳು 12,12,530 (2.03%), ಎಸ್ಟಿ (ಇತರರು) 7,92,808 (1.33%), ಬಿಲ್ಲವರು 6,23,547% (4,49,447) ಮತ್ತು 1. (0.80%) ಹೊಂದಿವೆ ಪ್ರತ್ಯೇಕವಾಗಿ ಪ್ರತಿಬಿಂಬಿಸಲಾಗಿದೆ.

### ಬ್ರಾಹ್ಮಣರೇ ಕಡಿಮೆ

ಜಾತಿ ಶ್ರೇಣಿಯಲ್ಲಿ ಸಾಂಪ್ರದಾಯಿಕವಾಗಿ ಅಗ್ರಸ್ಥಾನದಲ್ಲಿರುವ ಬ್ರಾಹ್ಮಣರ ಜನಸಂಖ್ಯೆಯು 17,83,427 (2.98%) ಆಗಿದ್ದು, ಕರ್ನಾಟಕದಲ್ಲಿ ಸಮೀಕ್ಷೆ ನಡೆಸಲಾದ 167 ಜಾತಿಗಳಲ್ಲಿ 10ನೇ ಸ್ಥಾನದಲ್ಲಿದೆ, ಇದರಲ್ಲಿ ಬಡಗರು 32 ಸದಸ್ಯರೊಂದಿಗೆ ಕೊನೆಯವರಾಗಿದ್ದಾರೆ. 3,32,098 ಜನರು (0.56%) 'ಯಾವುದೇ ಜಾತಿಯನ್ನು' ಹೊಂದಿಲ್ಲ, ಇನ್ನುಳಿದಂತೆ, ತಿಗಳರು 3,28,902 (0.55%), ಬೆಸ್ತರು 12,70,044 (2.12%), ವಿಶ್ವಕರ್ಮರು 10,88,385 (1.82%), ಗೊಲ್ಲರು 9,76,641 (1.63%), ಕ್ಷತ್ರಿಯರು 4,12,690%), ಗೌಡರು 4,12,690% (0.71,690%) (0.34%), ಬಂಟ್ಸ್ 3,25,718 (0.54%), ಕುಂಬಾರರು



4,43,492 (0.74%), ಆರ್ಯ ವೈಶ್ಯರು 4,66,769 (0.78%), ಮರಾಠರು 16,15,667 (2.70%), ಉಪ್ಪಾರರು 81564815, (1.33%), ರೆಡ್ಡಿಗಳು 7,11,377 (1.19%), ಗಾಣಿಗ 7,02,379 (1.17%), ಮಡಿವಾಳರು 6,58,887 (1.10%), ಒಬಿಸಿ (ಇತರರು) 17,68,688 (2.96%), ಮತ್ತು ದೇವಾಂಗರು 6,30,691 (1.05%). ಜೈನರು 4,19,375 (0.70%) ಮತ್ತು ಕ್ರಿಶ್ಚಿಯನ್ನರು 8,61,416 (1.44%) ಇದ್ದಾರೆ.

ಹೆಚ್. ಕಾಂತರಾಜು ನೇತೃತ್ವದ ಆಯೋಗವು ಏಪ್ರಿಲ್ 11, 2015 ರಿಂದ ಮೇ 30, 2015 ರ ನಡುವೆ 5,98,13,165 (99.88%) ಜನರನ್ನು ಒಳಗೊಂಡ ಸಮೀಕ್ಷೆಯನ್ನು ನಡೆಸಿತು. 6.35 ಕೋಟಿ ಜನರ ಸಮೀಕ್ಷೆಯಲ್ಲಿ ಸುಮಾರು 37 ಲಕ್ಷ ಜನರನ್ನು (5.83%) ಜಾತಿ ನಮೂದಿಸದ ಕಾರಣ ಸಮೀಕ್ಷೆಯಿಂದ ಹೊರಗಿಡಲಾಗಿದೆ. ಈ ಸಮೀಕ್ಷೆಯು ರಾಜ್ಯದಲ್ಲಿ 5,98,14,942 ಜನರನ್ನು ಒಳಗೊಂಡಿತ್ತು ಎನ್ನಲಾಗಿದ್ದು, ನಗರ ಪ್ರದೇಶದಲ್ಲಿ 2,04,02,006 ಮತ್ತು ಗ್ರಾಮೀಣ ಭಾಗದಲ್ಲಿ





3,94,12,936.

**ಪರಿಶಿಷ್ಟ ಜಾತಿಗಳು:** 1,09,29,347 (18.27%), ನಗರ: 28,47,232, ಗ್ರಾಮೀಣ: 80,82,115. ಮುಸ್ಲಿಮರು: 76,99,425 (12.87%), ನಗರ: 44,63,030, ಗ್ರಾಮೀಣ: 32,36,395.

**ವೀರಶೈವ ಲಿಂಗಾಯತರು:** 66,35,233 (11.09%), ನಗರ: 16,61862, ಗ್ರಾಮೀಣ: 4973371.


**ಒಕ್ಕಲಿಗರು:** 61,68,652 (10.31%), ನಗರ: 16,95,514, ಗ್ರಾಮೀಣ: 44,73,138.

**ಕುರುಬರು:** 43,72,847 (7.31%), ನಗರ: 7,72,641, ಗ್ರಾಮೀಣ: 36,00,206.

**ಪರಿಶಿಷ್ಟ ಪಂಗಡಗಳು:** 42,81,289 (7.1%), ನಗರ: 6,60,209, ಗ್ರಾಮೀಣ:

☞ 4

# ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಳು ಸುಪನಾತಿ!



# ರುಂಡ-ಮುಂಡ ಬೇರ್ಪಡಿಸಿ ಪೊಲೀಸ್ ಠಾಣೆಗೆ ಬಂದ್ನಲ್ಲಾ ಗಂಡ!!



ಆರೋಪಿ ಶಂಕರ್

**ಅತ್ತಿಬೆಲೆ ಹೊಸೂರು ಹೈವೇನಲ್ಲಿ ನೈಟ್ ಬೀಟ್ ಡ್ಯೂಟಿಯಲ್ಲಿದ್ದ ಪೊಲೀಸರಿಗೆ, ಹೀಲಲಿಗೆ ಕಡೆಯಿಂದ ಚಂದಾಪುರ ಸರ್ಕಲ್‌ಗೆ ಬಂದ ಆಕ್ಸೆಸ್ ಸ್ಕೂಟರ್ ನೋಡಿ ಬೆಚ್ಚಿ ಬೀಳಬೇಕಾಯ್ತು! ಐನಾತಿ ಗಾಡಿ ಸವಾರ ತನ್ನ ಕಾಲುಗಳ ಬಳಿ ಮಹಿಳೆಯ ಮುಂಡವನ್ನು ಇರಿಸಿಕೊಂಡು ಯಾವುದೇ ಅಳುಕಿಲ್ಲದೆ ಸವಾರಿ ಮಾಡಿಕೊಂಡು ಬಂದು ಪೊಲೀಸ್ ಮುಂದೆಯೇ ನಿಲ್ಲಿಸಿದ್ದ! ಆ ಭಯಂಕರ ದೃಶ್ಯವನ್ನು ನೋಡಿದ ಬೀಟ್ ಪೊಲೀಸ್ ಇಬ್ಬರು, ಏನಯ್ಯ ಇದೂ? ಯಾರಯ್ಯ ನೀನೂ? ಎಂದು ಪ್ರಶ್ನಿಸಿದಾಗ...**

ದಿನಾಂಕ 07-06-2025 ಶನಿವಾರ ತಡ ರಾತ್ರಿ ಸುಮಾರು 12.30ರಲ್ಲಿ ಸೂರ್ಯನಗರ ಪೊಲೀಸ್ ಠಾಣೆಯ ಎಎಸ್‌ಐ ಆನಂದ್‌ಕುಮಾರ್ ಮತ್ತೊಬ್ಬ ಸಿಬ್ಬಂದಿ ಅತ್ತಿಬೆಲೆ ಹೊಸೂರು ಹೈವೇನಲ್ಲಿ ಚಂದಾಪುರ ಸರ್ಕಲ್‌ನಲ್ಲಿ ನೈಟ್ ಡ್ಯೂಟಿ ಮಾಡುತ್ತ ನಿಂತಿದ್ದರು. ಅಲ್ಲಿ ಸುತ್ತಮುತ್ತಲ ಹತ್ತಾರು ಗ್ರಾಮಗಳನ್ನು ಸಂಪರ್ಕಿಸಲು ಮೂರ್‍ನಾಲ್ಕು ರಸ್ತೆಗಳನ್ನು ನಿರ್ಮಿಸಲಾಗಿದೆ. ಕೆಲವೇ ದಿನಗಳ ಹಿಂದೆಯಷ್ಟೇ ಈ ಭಾಗದಲ್ಲಿ ಬಿಹಾರಿ ಯುವತಿಯೊಬ್ಬಳನ್ನ ಕೊಲೆ ಮಾಡಿ ಸೂಟ್‌ಕೇಸ್‌ನಲ್ಲಿ ತುಂಬಿಸಿ ರೈಲ್ವೆ ಬ್ರಿಡ್ಜ್ ಕೆಳಗಡೆ ಬಿಸಾಕಲಾಗಿತ್ತು. ಈ ಘಟನೆಯ ಬಳಿಕ ಸೂರ್ಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೆಚ್ಚಿನ ನಿಗಾವಹಿಸಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತಿದೆ.

ಅಂದು ಕೂಡ ದಕ್ಷ ಎಎಸ್‌ಐ ಆನಂದಮೂರ್ತಿ ತಮ್ಮ ಸಿಬ್ಬಂದಿಯೋರ್ವನೊಡನೆ ಚಂದಾಪುರ ಸರ್ಕಲ್ ನಲ್ಲಿ ಗಸ್ತು ತಿರುಗುತ್ತಿದ್ದರು.



ಕೊಲೆಯಾದ ಮಾನಸ

ತಡರಾತ್ರಿ ಸುಮಾರು 12.30ರ ವೇಳೆಗೆ ಹೀಲಲಿಗೆ ರಸ್ತೆ ಕಡೆಯಿಂದ ಅಲ್ಲಿಗೆ ಆಕ್ಸೆಸ್ ಸ್ಕೂಟರ್ ಒಂದು ಬಂದಿತ್ತು. ಅದರ ಸವಾರ ತಲೆಗೆ ಹೆಲ್ಮೆಟ್ ಹಾಕಿರಲಿಲ್ಲ, ಹಾಗೂ ಅವನ ಮುಖ ನೋಡಿದಾಗ ಆತ ಕುಡಿದು ಚಿತ್ ಆಗಿರುವಂತೆ ಕಾಣಿಸುತ್ತಿತ್ತು. ಮೈಮೇಲೆ ಕೆಂಪು ಬಣ್ಣದ ಕಲೆ ಬೇರೆ ಇತ್ತು. ಗಾಡಿ ನಿಲ್ಲಿಸಿ ವಿಚಾರಿಸಲು ಮುಂದಾದಾಗ, ಅವರ ಕಣ್ಣಿಗೆ ಭೀಕರ ದೃಶ್ಯವೊಂದು ರಾಚಿತ್ತು.



ಅವನ ಕಾಲುಗಳ ಬಳಿ ರಕ್ತಸಿಕ್ತವಾದ ಮಹಿಳೆಯ ರುಂಡವೊಂದು ಬಿದ್ದಿತ್ತು!

**ಸ್ಟೇಷನ್‌ಗೇ ಬರ್ತಿದ್ದೆ ಸಾರ್**

ಆ ದೃಶ್ಯವನ್ನು ನೋಡಿ ಬೆಚ್ಚಿ ಬಿದ್ದ ಖಾಕಿ ದಾರಿಗಳು ಆತನನ್ನು ಸುತ್ತುವರಿದು, ಯಾರಯ್ಯ ನೀನೂ? ಏನಯ್ಯ ಇದೂ? ಎಂಬಿತ್ಯಾದಿಯಾಗಿ ಪ್ರಶ್ನಿಸಿದ್ದಾರೆ. ಅವಾಗ ಆ ವ್ಯಕ್ತಿ ತನ್ನ ಹೆಸರು ಶಂಕರ್ ಎಂದು ತಿಳಿಸಿ, ಆ ತಲೆ ತನ್ನ ಪತ್ನಿಯದ್ದು... ಮೋಸ ಮಾಡಿಬಿಟ್ಲು, ಕಡಿದುಬಿಟ್ಟೆ, ನಾನೇ ಪೊಲೀಸ್ ಸ್ಟೇಷನ್ ಕಡೆಗೆ ಬರುತ್ತಿದ್ದೆ... ನಡೀರಿ ಹೋಗೋಣ ಎಂದು ತಿಳಿಸಿದ್ದಾನೆ! ಎಎಸ್‌ಐ ಆನಂದ ಮೂರ್ತಿಗಳು ಕೂಡಲೇ ತಮ್ಮ ಮೇಲಧಿಕಾರಿಗಳಿಗೆ ಈ ಮಾಹಿತಿ ಕೊಟ್ಟು, ಆರೋಪಿ ಶಂಕರ್‌ನನ್ನು ಪೊಲೀಸ್ ಹುಷಾರಾಗಿ ಠಾಣೆಗೆ ಕರ'ದೊಯ್ದು ಲಾಕ್ ಮಾಡಿ ಮಾತು ಮುಂದುವರೆಸಿದ್ದಾರೆ. ಆತ ಮುಂದುವರೆದು, ಇವಳು ಮಾನಸ ಅಂತ ಸಾರ್... ಹೆಬ್ಬಗೋಡಿ ಕಡೆಯವಳು. ಎಸ್‌ಎಸ್‌ಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡ್ತಿದ್ಲು, ನಾನು ಕೋರಮಂಗಲದಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೆ. ಇಲ್ಲೇ ಕಾಚನಾಯಕನ ಹಳ್ಳಿಯಲ್ಲಿ ನಮ್ಮಮ್ಮ ಇದ್ದಾರೆ. ನನ್ನ ಪುಟಾಣಿ ಮಗಳು ಕೂಡ ಅಮ್ಮನ ಬಳಿಯೇ ಇದ್ದಾಳೆ. ಐದು ವರ್ಷಗಳ ಕಾಲ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿ ಇವಳನ್ನು ಮದುವೆಯಾಗಿದ್ದೆ ಸಾರ್.



ಎಸ್ಪಿ ಸಿ.ಕೆ. ಬಾಬಾ



ಅಡಿಷನಲ್ ಎಸ್ಪಿ ನಾಗೇಶ್‌ಕುಮಾರ್



ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್

ಇಂಟರ್ ಕ್ಯಾಸ್ಟ್ ಮ್ಯಾರೇಜ್. ಇಲ್ಲೇ ಹೀಲಲಿಗೆಯಲ್ಲಿ ರವಿ ಬಿಲ್ಡಿಂಗ್‌ನಲ್ಲಿ ಬಾಡಿಗೆ ಮನೆ ಮಾಡಿಕೊಂಡು ಸಂಸಾರ ಹೂಡಿದ್ವಿ... ಮೋಸಗಾತಿ ನನ್ನ ಕಣ್ಣು ತಪ್ಪಿಸಿ ಮುಗಿಲನ್ ಎಂಬುವನ ಜೊತೆ ಅಕ್ರಮ ಸಂಬಂಧ ಇಟ್ಕೊಂಡಿದ್ಲು!



**ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ರು**

ಅವತ್ತೊಂದಿನ ನಂಗೆ ನೈಟ್ ಶಿಫ್ಟ್ ಇತ್ತು. ರಾತ್ರಿ ಹುಷಾರಾಗಿ ಮಲಿಕೋ ಅಂತೇಳಿ ಡ್ಯೂಟಿಗೆ ಹೋಗಿದ್ದೆ. ಅಂದು ಅವಳ ನಡೆ ನುಡಿ ಒಂಥರಾ ಇತ್ತು. ಹಾಗಾಗಿ, ರಾತ್ರಿ 1 ಗಂಟೆಯ ಹೊತ್ತಿಗೆ ರಜೆ ಕೇಳಿಕೊಂಡು ಮನೆಗೆ ಬಂದಿದ್ದೆ. ಮನೆ ಬಾಗಿಲಲ್ಲಿ ಬೈಕ್ ನಿಂತಿತ್ತು. ಒಳಗಡೆ ಏನೋ ಸೌಂಡ್ ಬರ್‍ತಿತ್ತು. ಸದ್ದು ಮಾಡದೇ ಮನೆಯ ಮೇಲೇರಿ ಇಣುಕಿ ನೋಡಿದೆ. ಇವಳು ಮುಗಿಲನ್ ಜೊತೆ... ನೋಡಿ ಕೋಪಕ್ಕಿಂತ ಹೆಚ್ಚಾಗಿ ಕಣ್ಣೀರು ಬಂತು! ಪ್ರೀತಿಸಿ ಮದುವೆ ಯಾದವಳು, ತುಂಬಾ ನಂಬಿದ್ದವಳು ಈ ಥರಾ ಮೋಸ ಮಾಡಿಬಿಟ್ಟಳಲ್ಲ...

ಬಾಗಿಲು ತೆರೆಸಿ ಅವನಿಗೆ ಎರಡು ಭಾರಿಸಿದೆ. ಬಡ್ಡಿ ಮಗ ಹೇಗೋ ತಪ್ಪಿಸಿಕೊಂಡು ಓಡಿಬಿಟ್ಟ. ಇವಳಿಗೂ ಎರಡು ಭಾರಿಸಿದ್ದೆ. ಇವಳೂ ಕೂಡ ಕೈ ಕಿತ್ತುಕೊಂಡು ಕತ್ತಲಲ್ಲಿ ಓಡಿ ಹೋದಳು. ಇನ್ನಿವಳ ಸಹವಾಸವೇ ಬೇಡ ಎಂದು ತೀರ್ಮಾನಿಸಿ ಅತ್ತು ಗೋಳಾಡಿಕೊಂಡು ಸುಮ್ಮನಿದ್ದುಬಿಟ್ಟೆ.

**ಮನೆ ಬಳಿ ಬಂದು ಕಿರಿಕ್**

ನನ್ನ ಮಗಳು ಅಂದ್ರೆ, ನಂಗೆ ಪ್ರಾಣ. ಹಾಗಾಗಿ, ಅವಳನ್ನು ನನ್ನ ತಾಯಿ ಬಳಿ ಬಿಟ್ಟು ನನ್ನ ಪಾಡಿಗೆ ನಾನು ದುಡಿಯುತ್ತ ಹೇಗೋ ಬದುಕುತ್ತಿದ್ದೆ. ಆ ರಾತ್ರಿ ಓಡಿ ಹೋದ ಮಾನಗೇಡಿ ಮಾನಸ ಎಲ್ಲೋ ಪಿಜಿ ಯಲ್ಲಿದ್ದು, ಮತ್ತೆ ನನ್ನ ಬಳಿಗೆ ಬಂದು ಸಾರಿ ಕೇಳಿದಳು! ಇಂಥ ಮೋಸಗಾತಿಯನ್ನು ಮತ್ತೆ ಮನೆಗೆ ಸೇರಿಸಬಾರದು ಅಂದುಕೊಂಡು, ಅವನ ಹತ್ರಾನೇ ಹೋಗಿರು... ಎಂದು ಬೈದು ಕಳುಹಿಸಿಬಿಟ್ಟೆ. ವಾಪಸ್ ಹೋದಳು ಆದರೆ, ಮತ್ತೆ ಮತ್ತೆ ಮನೆಗೆ ಬಂದು ಕಿರಿಕ್ ಮಾಡತೊಡಗಿದಳು! ತಾನೇ ತಪ್ಪು ಮಾಡಿ ನನಗೇ ಬೈದು ಹಾಗೆ ಮಾಡಿಸ್ತೀನಿ ಹೀಗೆ ಮಾಡಿಸ್ತೀನಿ ಅಂತೆಲ್ಲ ರೋಪ್ ಹಾಕುತ್ತಿದ್ದಳು!

**ಜುಟ್ಟು ಹಿಡಿದು ತಲೆ ಕಾಡಿದೆ**

ಇವತ್ತು ಅದೇ ರೀತಿ ಕಿರಿಕ್ ಮಾಡಿದಳು. ಮೊದಲೇ

☞ 10

# ಅನೈತಿಕ ಸಂಬಂಧಗಳೆಂಬ ಸಾವಿನ ಹೆದ್ದಾರಿ...



ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸಮಾಜದಲ್ಲಿ ಆಗುತ್ತಿರುವ ಕೆಟ್ಟ ಮತ್ತು ಅಪಾಯಕಾರಿ ಬದಲಾವಣೆ ಎಂದರೆ ಅದು ಅನೈತಿಕ ಮತ್ತು ಅಕ್ರಮ ಸಂಬಂಧಗಳು ಮತ್ತು ಅದರಿಂದಾಗಿ ನಡೆಯುತ್ತಿರುವ ಭೀಕರ ಕೊಲೆಗಳು...

ಮನುಷ್ಯ ಸಂಬಂಧಗಳು, ನಂಬಿಕೆಗಳು, ಕೌಟುಂಬಿಕ ವ್ಯವಸ್ಥೆಗಳು, ಪ್ರೀತಿ ಪ್ರೇಮ ಪ್ರಣಯದ ಪಾವಿತ್ರ್ಯತೆ, ಕಾನೂನು ಸುವ್ಯವಸ್ಥೆ ಒಟ್ಟಾರೆ ಸಾಮಾಜಿಕ ವ್ಯವಸ್ಥೆಯೇ ಕುಸಿದು ಬೀಳುವ ಹಂತಕ್ಕೆ ತಲುಪಬಹುದು ಎಂಬಷ್ಟು ವೇಗವಾಗಿ ಮತ್ತು ತೀವ್ರವಾಗಿ ವ್ಯಾಪಿಸುತ್ತಿದೆ.

ಬಹಳ ಹಿಂದೆ ಕಡಿಮೆ ಜನಸಂಖ್ಯೆ, ಸಂಪರ್ಕ ಮಾಧ್ಯಮಗಳ ಕೊರತೆ, ಕೌಟುಂಬಿಕ ಮೌಲ್ಯಗಳ ಗಾಢತೆ, ಹೆಣ್ಣು ಗಂಡು ಸಂಬಂಧಗಳ ಗೌಪ್ಯತೆ, ಆರ್ಥಿಕ ಅಸಮಾನತೆ, ಪುರುಷ ಕೇಂದ್ರಿತ ಸಮಾಜ ಮುಂತಾದ ಕಾರಣಗಳಿಂದ ಅಕ್ರಮ ಸಂಬಂಧಗಳು ಕಡಿಮೆ ಇದ್ದವು. ಹೆಚ್ಚು ಹೊರಗೆ ಬರುತ್ತಿರಲಿಲ್ಲ ಮತ್ತು ಅದಕ್ಕೆ ಬಹುತೇಕ ಪುರುಷರೇ ಹೆಚ್ಚು ಹೊಣೆಗಾರರಾಗಿದ್ದರು.

ಆದರೆ ಮಹಿಳಾ ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆ, ಉದ್ಯೋಗ, ನಗರೀಕರಣ, ಸಮೂಹ ಸಂಪರ್ಕ ಮಾಧ್ಯಮಗಳ ಕ್ರಾಂತಿ, ಸಣ್ಣ ಕುಟುಂಬಗಳ ಅನಿವಾರ್ಯತೆ, ವಲಸೆ, ದೂರ ಪ್ರದೇಶಗಳಲ್ಲಿ ವಾಸ, ಹಣ ಕೇಂದ್ರೀತ ಸಮಾಜ, ಮೌಲ್ಯಗಳ ಕುಸಿತ, ಪುರುಷ ದೌರ್ಜನ್ಯದ ವಿರುದ್ಧ ಮಹಿಳಾ ಜಾಗೃತಿ, ಕಾನೂನಿನ ಬೆಂಬಲ, ಟಿವಿ, ಸಿನಿಮಾ, ಧಾರಾವಾಹಿಗಳ ಪ್ರಭಾವ, ಅಜ್ಞಾನ, ಅಹಂಕಾರ, ಬದುಕಲು ದೊರೆತ ಅಸಂಖ್ಯ ಅವಕಾಶಗಳು, ವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿ ಹಲವಾರು ಕಾರಣಗಳಿಂದ ಮಹಿಳೆ ಮತ್ತು ಪುರುಷರಿಬ್ಬರ ಕಡೆಯಿಂದಲೂ ಅನೈತಿಕ ಚಟುವಟಿಕೆಗಳು ಹೆಚ್ಚಾದವು.

ಈಗ ಅವು ನಿಯಂತ್ರಣ ಮೀರಿ ದುಷ್ಕೃತ್ಯಗಳು ನಡೆಯುತ್ತಿವೆ. ಟಿವಿ, ಪತ್ರಿಕೆ, ಸಾಮಾಜಿಕ ಮಾಧ್ಯಮಗಳಲ್ಲಿ ಇವು ನಿರಂತರವಾಗಿ ಪ್ರಸಾರವಾಗುತ್ತಿವೆ. ಅನಾರೋಗ್ಯ, ಆತ್ಮಹತ್ಯೆ ಮತ್ತು ಅಪಘಾತದಿಂದ ಉಂಟಾಗುತ್ತಿರುವ ಸಾವುನೋವಿನ ಜೊತೆಗೆ ಭಾರತೀಯ ಸಮಾಜವನ್ನು ಕಾಡುತ್ತಿರುವ ಮತ್ತೊಂದು ಬಹುಮುಖ್ಯ ಸಮಸ್ಯೆಯಾಗಿ ಅನೈತಿಕ ಸಂಬಂಧಗಳು ಮತ್ತು ಕೊಲೆಗಳು ನಮ್ಮ ಜೀವನದಲ್ಲಿ ಭಾರಿ ಬದಲಾವಣೆಗೂ ಕಾರಣವಾಗಿದೆ.

ಅನೈತಿಕತೆ ಎಂಬುದು ಅನೇಕ ಆಯಾಮಗಳನ್ನು ಹೊಂದಿದೆ. ಆದರೆ ಹೆಣ್ಣು ಗಂಡಿನ ಲೈಂಗಿಕತೆಗೆ ಸಂಬಂಧಿಸಿದ ಅನೈತಿಕತೆ ಇತ್ತೀಚೆಗೆ ಅತ್ಯಂತ ಕಳವಳಕಾರಿ ಹಂತ ತಲುಪಿದೆ. ಅದರಲ್ಲೂ ಮದುವೆಯಾದ ಗಂಡು ಅಥವಾ ಹೆಣ್ಣು ಇನ್ನೊಬ್ಬ ಪುರುಷ ಅಥವಾ ಮಹಿಳೆಯೊಂದಿಗೆ ಸಂಬಂಧ ಹೊಂದುವುದು ಸಧ್ಯದ ಗಂಭೀರ ವಿಷಯ. ಇದು ತೀರಾ ಖಾಸಗಿ ವಿಷಯವಾದರೂ ಸಾಮಾಜಿಕ ಜಾಲತಾಣಗಳ ಸಂಪರ್ಕ ಕ್ರಾಂತಿಯಿಂದಾಗಿ ನಾವೆಲ್ಲಾ ಇದರಲ್ಲಿ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಅಥವಾ ಮಾನಸಿಕ ಅನುಮಾನಕ್ಕೋ ಅಥವಾ ವೈಯಕ್ತಿಕ ವೇದನೆಗೋ ಕಾರಣವಾಗುತ್ತಿದ್ದೇವೆ.

ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಕೆಲವೊಮ್ಮೆ ನಮಗರಿವಿಲ್ಲದೇ, ಮತ್ತೆ ಕೆಲವೊಮ್ಮೆ ಆಕಸ್ಮಿಕವಾಗಿ ನಾವು ಇದರ ಒಳಸುಳಿಗೆ ಸಿಲುಕುವ ಸಾಧ್ಯತೆಗಳೂ ಇದೆ. ಈ ಸಂದರ್ಭದಲ್ಲಿ ನಾವೆಲ್ಲಾ ಪರಿಚಿತ ಮತ್ತು ಅಪರಿಚಿತ ಗೆಳೆಯರು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಏಕೆಂದರೆ ಈ ಸಂಬಂಧಗಳು ಬೇರೆ ಎಲ್ಲೋ ಏರ್ಪಡುವುದಿಲ್ಲ. ಅದು ನಮ್ಮ ಸುತ್ತಮುತ್ತಲ ಸ್ನೇಹಿತರ ನಡುವೆಯೇ ಸಂಭವಿಸುತ್ತದೆ.

ಹೇಗೆ ಅರ್ಥೈಸುವುದು ಈ ಸಂಬಂಧಗಳನ್ನು, ಒಂದುಕಡೆ ವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ನನ್ನ ದೇಹ ನನ್ನ ಆಯ್ಕೆ ಎಂಬ ಧೋರಣೆ, ಮತ್ತೊಂದು ಕಡೆ ಬಲವಂತವಲ್ಲದ, ಕಾನೂನಿನ ಪ್ರಕಾರ ವಯಸ್ಸಿನ ಗಡಿ ದಾಟಿದ ಎಲ್ಲಾ ಒಪ್ಪಿತ ಸಂಬಂಧಗಳು ನೈತಿಕವೇ ಎಂಬ ವಾದ, ಮದುವೆಯಾದ ಮಾತ್ರಕ್ಕೇ ನಾವೇನು ಯಾರಿಗೂ ಮಾರಾಟವಾಗುವುದಿಲ್ಲ ಮತ್ತು ಹಾಗೆ ಬಹಿರಂಗವಾಗಿ ಹೇಳದಿದ್ದರೂ ತಮ್ಮ ಸಂಪರ್ಕಗಳಿಂದ ಆಕರ್ಷಣೆಗೆ ಒಳಗಾಗಿ ಈ ರೀತಿಯ ಸಂಬಂಧವನ್ನು ಮುಂದುವರಿಸುತ್ತಿರುವವರು ಅನೇಕರಿದ್ದಾರೆ.



ಇನ್ನೊಂದೆಡೆ ಗಂಡು ಹೆಣ್ಣು ಇಬ್ಬರೂ ಮದುವೆಯಾದ ತಕ್ಷಣ ತಮ್ಮ ದೇಹದ ಮೇಲೆ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾರೆ, ಅದು ಇಬ್ಬರಿಗೂ ಹಂಚಿಕೆಯಾಗುತ್ತದೆ, ಸಾಯುವವರೆಗೂ ಅಥವಾ ಅಧೀಕೃತವಾಗಿ ವಿಚ್ಛೇದನ ಆಗುವವರೆಗೂ ಬೇರೆ ಯಾರೊಂದಿಗೂ ಸೇರುವಂತಿಲ್ಲ ಅದು ಅನೈತಿಕ ಎಂದೂ ವಾದ ಮಾಡಲಾಗುತ್ತದೆ.

ಬಹಳಷ್ಟು ಘಟನೆಗಳಲ್ಲಿ ಹೆಣ್ಣನ್ನೇ ಮುಖ್ಯ ಗುರಿಯಾಗಿಸಲಾಗುತ್ತದೆ ಮತ್ತು ಸಧ್ಯದ ನಮ್ಮ ಮನಸ್ಥಿತಿಯಲ್ಲಿ ಹೆಣ್ಣು ಖಾಸಗಿ ಆಸ್ತಿ ಎಂದೇ ಭಾವಿಸಲಾಗಿದೆ. ಆಕೆ ಇನ್ನೊಬ್ಬರ ಸಂಬಂಧ ಬೆಳೆಸಿದಲ್ಲಿ ಆ ಇಬ್ಬರನ್ನೂ ಕೊಲ್ಲದೆ ಆ ವ್ಯಕ್ತಿಗೆ ಬದುಕಲು ಸಾಧ್ಯವೇ ಆಗದ ಮಾನಸಿಕ ಸ್ಥಿತಿ ಏರ್ಪಟ್ಟಿದೆ. ಇದಂತೂ ಭಯಂಕರ ವಾತಾವರಣ. ಚರ್ಚೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ, ಉಪನ್ಯಾಸಗಳಲ್ಲಿ ಪುಂಖಾನುಪುಂಖವಾಗಿ ಮಾತನಾಡಬಹುದು. ಆದರೆ ವಾಸ್ತವ ಮಾತ್ರ ಘನಘೋರ. ಮಹಿಳೆಯರು ಸಹ ಇದಕ್ಕಾಗಿ ಕೊಲೆ ಮಾಡುವ ಮಾತು ಮಾಡಿಸುವ ಹಂತ ತಲುಪಿದ್ದಾರೆ.

ಸ್ನೇಹಿತರೇ, ಎಲ್ಲರಲ್ಲೂ ನನ್ನದೊಂದು ಕಳಕಳಿಯ ಮನವಿ...

ನೈತಿಕತೆ - ಸ್ವಾತಂತ್ರ್ಯ - ಕಾನೂನು - ವಾಸ್ತವ - ಭಾವನೆ - ಸತ್ಯ ಹೀಗೆ ಏನಾದರೂ ಇರಲಿ ಆದರೆ ಸಧ್ಯದ ಸ್ಥಿತಿಯಲ್ಲಿ ಅನೈತಿಕ ಸಂಬಂಧ ಆತ್ಮಹತ್ಯೆಗಿಂತಲೂ ಭೀಕರ. ಅದು ಸಾವಿನ ನಂತರವೂ ನಮ್ಮ ಕುಟುಂಬಗಳನ್ನು ಕಾಡುತ್ತದೆ. ಈ ಆಕರ್ಷಣೆಯನ್ನು ನಿಯಂತ್ರಿಸಿಕೊಳ್ಳಿ ಅಥವಾ ಕಾನೂನಿನ ಮುಖಾಂತರ ಅಧೀಕೃತ ಪರಿಹಾರ ಕಂಡುಕೊಳ್ಳಿ ಅಥವಾ ಕನಿಷ್ಠ ನಾಗರಿಕ ಪರಿಹಾರ ಹುಡುಕಿಕೊಳ್ಳಿ. ಈ ರೀತಿಯ ಸಂಬಂಧ ಸೃಷ್ಟಿಸಿಕೊಳ್ಳುವ ಮೊದಲು ಸಾವಿರ ಸಲ ಯೋಚಿಸಿ. ಮಾನವ ಜನ್ಮ ಸಿಗುವುದೇ ಪುಣ್ಯ ಅಂತಾರೆ! ಈ ಕೊಲೆ, ಜೈಲು, ಮಕ್ಕಳ ಹಾಗೂ ಬಂದು ಬಳಗದ ಕಣ್ಣೀರು... ಇವೆಲ್ಲಾ ಯಾಕೆ ಬೇಕು ಅಲ್ವೇ... ☯



# ಹತ್ತು ವರ್ಷದಿಂದ ಮಾಡಿದ್ದ ಜಾತಿ ಜನಗಣತಿಗೆ ಎಳ್ಳು ನೀರು!

2 ☜

36,21,080.

ಬ್ರಾಹ್ಮಣರು: 15,64,741 (2.61%), ನಗರ: 11,27,070, ಗ್ರಾಮೀಣ: 4,37,671.

### ಸಾಮೂಹಿಕ ವಿರೋಧ

ಮೇಲ್ಕಂಡ ಅಂಕಿ ಅಂಶ ಗಳುಳ್ಳ ಜಾತಿ ಜನಗಣತಿಯನ್ನು ಲಿಂಗಾಯಿತರು ಗೌಡರು ಬ್ರಾಹ್ಮಣ ಮುಂತಾದ ಪ್ರಬಲ ವರ್ಗದವರು ಸಮೂಹಿಕವಾಗಿ ವಿರೋಧಿಸಿದ್ದರು. ಆದರೆ, ಸಿದ್ದರಾಮಯ್ಯ ಪಟ್ಟು ಬಿಡದೆ ಇದೇ ಗಣತಿಯನ್ನು ಸಂಪುಟ ಸಭೆಯಲ್ಲಿ ಅನುಷ್ಠಾನಗೊಳಿಸುತ್ತೇನೆ ಎಂದು ಥೇಟ್ ಟಗರಿನಂತೆ ಗುಟುರು ಹಾಕಿದ್ದರು! ಆದರೆ, ಅವರಿಂದ ಆ ಕೆಲಸವಾಗಲಿಲ್ಲ, ಈಗ ಏಕಾಏಕಿ ಮರು ಗಣತಿಗೆ ಆದೇಶ ನೀಡಿದ್ದಾರೆ!

ಕಾಂತರಾಜು ಆಯೋಗದ ವರದಿ ಅವೈಜ್ಞಾನಿಕ, ಅಪೂರ್ಣ ಎಂದು ಸಾರ್ವಜನಿಕರು, ಮಠಾಧೀಶರು, ಸಮುದಾಯಗಳ ಮುಖಂಡರು, ಸ್ವತಃ ಕಾಂಗ್ರೆಸ್ ಪಕ್ಷದ ಅನೇಕ ಸಚಿವರು, ಶಾಸಕರು ವಿರೋಧ ಮಾಡುತ್ತಿದ್ದರೂ, ಅದನ್ನು ಬಲವಾಗಿ ಸಮರ್ಥಿಸಿಕೊಂಡು, ಸಚಿವ ಸಂಪುಟದ ಮುಂದೆ ತರಲು ನೀವು ಎಷ್ಟೆಲ್ಲಾ ಹಠ ಹಿಡಿದಿದ್ದಿರಿ! ಆದರೀಗ ನಿಮಗೆ ಹೈಕಮಾಂಡ್ ತಪರಾಕಿ ಹಾಕಿದಾಕ್ಷಣ, ಮರು ಸಮೀಕ್ಷೆ ಮಾಡುವ ತೀರ್ಮಾನಕ್ಕೆ ಒಪ್ಪಿಗೆ ನೀಡಿದ್ದೀರಿ!

ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ನಿಮಗೆ ರಾಜ್ಯದ ಜನರ ಮೇಲೆ,ಇಲ್ಲಿನ ಮಠಾಧೀಶರು, ಸಮುದಾಯಗಳ ಮುಖಂಡರ ಮೇಲೆ ವಿಶ್ವಾಸವಿಲ್ಲ, ನೀವು ಏನಿದ್ದರೂ ಹೈಕಮಾಂಡ್ ವಾಕ್ಯ ಪರಿಪಾಲಕ ಅಲ್ಲವೇ? ಎಂಬುದಾಗಿ ವಿರೋಧ ಪಕ್ಷಗಳ ಮುಖಂಡರು ತಿವಿಯುತ್ತಿದ್ದಾರೆ! ಸಿಎಂ ಸಿದ್ದರಾಮಯ್ಯನವರು ಹಾಗೂ ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ಕೇವಲ 90 ದಿನಗಳ ಕಾಲಮಿತಿಯಲ್ಲಿ ಸಮೀಕ್ಷೆ ನಡೆಸುವ ಮಾತಾಡುತ್ತಿದ್ದಾರೆ! ಈ ಬಗ್ಗೆ ಹಲವು ಗಂಭೀರ ಪ್ರಶ್ನೆಗಳು ಎದುರಾಗಿವೆ. ಪ್ರಸ್ತುತ ಸನ್ನಿವೇಶದಲ್ಲಿ ಈ ಸಮೀಕ್ಷೆ ಹೇಗೆ ಸಾಧ್ಯ ಎಂಬುದು ಜನಸಾಮಾನ್ಯರ ಪ್ರಶ್ನೆ ಹಾಗೂ ಆತಂಕವಾಗಿದೆ! ಶಾಲೆಗಳು ಈಗಾಗಲೇ ಆರಂಭವಾಗಿವೆ. ಇಂತಹ ಸಮಯದಲ್ಲಿ ಸಮೀಕ್ಷೆಯಂತಹ ಬೃಹತ್ ಕಾರ್ಯಕ್ಕೆ ಶಿಕ್ಷಕರನ್ನು ಬಳಸಿದರೆ, ಶೈಕ್ಷಣಿಕ ಚಟುವಟಿಕೆಗಳು ಸಂಪೂರ್ಣವಾಗಿ ಬುಡಮೇಲಾಗುತ್ತವೆ. ಮಕ್ಕಳ ಭವಿಷ್ಯದ ಮೇಲೆ ಇದು ನೇರ ಪರಿಣಾಮ ಬೀರಲಿದೆ. ಇಷ್ಟಕ್ಕೂ ಈ 90 ದಿನಗಳ ಸಮೀಕ್ಷೆಯನ್ನು ನಡೆಸಲು ಸರ್ಕಾರ ಯಾರನ್ನು ನಿಯೋಜಿಸಲಿದೆ?!

### ಆನ್‌ಲೈನ್ ಸಮೀಕ್ಷೆ - ಅವಿವೇಕದ ಕ್ರಮವಲ್ಲವೆ?

ಆನ್‌ಲೈನ್ ಮೂಲಕ ಸಮೀಕ್ಷೆ ನಡೆಸುವ ಚಿಂತನೆ ಮತ್ತೊಂದು ಅವಿವೇಕದ ಕ್ರಮವೆಂದು ತೋರುತ್ತಿದೆ. ಅನೇಕ ಅಕ್ಷರಸ್ಥರೇ ಇಂದಿಗೂ ಆನ್‌ಲೈನ್ ವ್ಯವಸ್ಥೆಯಿಂದ ದೂರ ಇರುವಾಗ, ಇಂತಹ ಸಮೀಕ್ಷೆ ಹೇಗೆ ಸಾಧ್ಯ?! ಇದರಿಂದ ಮಾಹಿತಿಯ ನಿಖರತೆ ಮತ್ತು ಗುರುತು ಪತ್ತೆ ಹೇಗೆ ಸಾಧ್ಯವಾಗುತ್ತದೆ?!

ನಗರ ಪ್ರದೇಶದಲ್ಲಿ ಬಾಡಿಗೆ ಮನೆಗಳಲ್ಲಿ ನೆಲೆಸಿರುವ ಕೆಲವರು ಬೇಕಂತಲೇ ತಪ್ಪು ಮಾಹಿತಿ ನೀಡುತ್ತಾರೆ! ಇಂಥ ತಪ್ಪು ಮಾಹಿತಿ ದಾಖಲೆ ಸೇರಿದರೆ ಗತಿ ಏನು? ತಪ್ಪು ದಾಖಲಾತಿಗಳನ್ನು ತಡೆಯಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಿದೆ? ಹತ್ತು ವರ್ಷದ ಹಿಂದೆ ನಡೆದಿದೆ ಎನ್ನಲಾದ ಕಾಂತರಾಜು ಆಯೋಗದ ಜಾತಿ ಜನಗಣತಿಗಾಗಿ ಖರ್ಚಾಗಿರುವ 185 ಕೋಟಿ ಬೃಹತ್ ಮೊತ್ತಕ್ಕೆ ಯಾರು ಹೊಣೆಗಾರರು? ಕಾಂತರಾಜು-ಜಯಪ್ರಕಾಶ್ ಹೆಗ್ಡೆ ಅವರ 'ಚೌಚೌ ವರದಿ'ಗೆ ಈಗ ಎಳ್ಳು-ನೀರು ಬಿಟ್ಟಂತಾಗಿದೆ. ಆ ವರದಿಗೆ ತೆರಿಗೆದಾರರ 185 ಕೋಟಿ ರೂ. ವೆಚ್ಚವಾಗಿದೆ. ಈ ಹಣವನ್ನು ಯಾರಿಂದ ವಸೂಲಿ ಮಾಡುತ್ತೀರಿ??

### ಐಪಿಎಲ್ ದುರಂತವನ್ನು ಮರೆಮಾಚಲು ಬೃಹತ್ ನಾಟಕವೆ?

ಈ ಎಲ್ಲ ಬೆಳವಣಿಗೆಗಳಿಗಿಂತ ಮಿಗಿಲಾಗಿ, ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಹೈಕಮಾಂಡ್ ಸೇರಿಕೊಂಡು, ಇತ್ತೀಚಿನ ಐಪಿಎಲ್ ವಿಜಯೋತ್ಸವ ದುರಂತವನ್ನು ಮರೆಮಾಚಲು ಮತ್ತೊಂದು ಬೃಹತ್ ನಾಟಕ ಆರಂಭಿಸಿರುವ ಅನುಮಾನಗಳು ದಟ್ಟವಾಗಿವೆ! ಹಾಗಾದ್ರೆ, ಇದು ನಿಜಕ್ಕೂ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರಯತ್ನವೇ??

ಮಾನ್ಯ ಮುಖ್ಯಮಂತ್ರಿಗಳೇ, ನಿಮಗೆ ನಿಜಕ್ಕೂ ಬದ್ಧತೆ ಮತ್ತು ಪ್ರಾಮಾಣಿಕತೆ ಇದ್ದರೆ, ಸಮೀಕ್ಷೆ ಹೇಗಿರಬೇಕು ಎಂಬ ಬಗ್ಗೆ ಮೊದಲು ಸಾರ್ವಜನಿಕವಾಗಿ ಚರ್ಚೆ ನಡೆಸಿ. ಹಾಗೆಯೇ,ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಿ ಎಲ್ಲರ ಅಭಿಪ್ರಾಯಗಳನ್ನು ಸಾವಧಾನವಾಗಿ ಆಲಿಸಿ. ಈ ಶೈಕ್ಷಣಿಕ ವರ್ಷ ಮುಗಿದ ಬಳಿಕವಷ್ಟೇ ಶಿಕ್ಷಕರನ್ನು ಬಳಸಿಕೊಂಡು ಸಮೀಕ್ಷೆ ನಡೆಸಿ. ನಿಜವಾದ.... ನ್ಯಾಯವಾದ ಫಲಿತಾಂಶ ಸಿಗುತ್ತದೆ. ಇದು ರಾಜ್ಯದ 6.35 ಕೋಟಿ ಜನರ ಹಿತದೃಷ್ಟಿಯಿಂದ ಒಳ್ಳೆಯ ಕ್ರಮ. ☯

# ಹಾಸನ : ಆರು ವರ್ಷದ ಕರುಳ ಬಳ್ಳಿಯನ್ನೇ ನೀರಿನಲ್ಲಿ ಮುಳುಗಿಸಿ ಕೊಂದ ಮಹಾತಾಯಿ!



ಮಹಾತಾಯಿ ಶ್ವೇತಾ

**ಅದು ಇನ್ನೂ ಪ್ರಪಂಚ ಏನೆಂದು ಅರಿಯದ ಕಂದಮ್ಮ. ಹೆತ್ತವರ ನಡುವಿನ ಕಲಹಕ್ಕೆ ಬಲಿಯಾಗಿದೆ! ಗಂಡ ಹೆಂಡತಿ ಜಗಳ ಆಡಿಕೊಂಡು ದೂರ ದೂರ ಇದ್ದರು. ಅಪ್ಪನ ಆಸರೆಯಲ್ಲಿದ್ದ ಮಗುವನ್ನ ತಾಯಿ ಆಗಾಗ ಬಂದು ನೋಡಿಕೊಂಡು ಹೋಗುತ್ತಿದ್ದಳು. ಮದುವೆಯಾದ ಎರಡೇ ವರ್ಷಕ್ಕೆ ಅವರ ಸಂಸಾರ ತಾಳ ತಪ್ಪಿ ಹೋಗಿತ್ತು. ಸಂಬಂಧಿಕರು ಮಾಡಿದ ಹತ್ತಾರು ರಾಜಿ ಸಂಧಾನಗಳು ಫಲ ನೀಡಿರಲಿಲ್ಲ. ಅಂತಿಮವಾಗಿ, ಬದಲಾದಂತೆ ನಟಿಸಿ ಗಂಡನ ಮನೆಗೆ ಬಂದು ಒಂದು ತಿಂಗಳ ಕಾಲ ನೆಲೆಸಿದ್ದ ಪತ್ನಿ ಮೂರು ದಿನಗಳ ಹಿಂದೆ ಮಗಳನ್ನ ತನ್ನ ಜೊತೆಯಲ್ಲಿ ತವರಿಗೆ ಕರೆದೊಯ್ದಿದ್ದಳು. ಏನೂ ಅರಿಯದ ಕಂದಮ್ಮನನ್ನು ನಿನ್ನೆ ನಿರ್ದಯವಾಗಿ ನೀರಿನಲ್ಲಿ ಮುಳುಗಿಸಿ ಕೊಂದು ತಾನೂ ಆತ್ಮಹತ್ಯೆಯ ನಾಟಕ ಮಾಡಿ, ಇದೀಗ ಪೊಲೀಸರ ಕೈಗೆ ಸಿಕ್ಕಿಬಿದಿದ್ದಾಳೆ!**

ಗಂಡ-ಹೆಂಡತಿ ನಡುವೆ ಕಲಹ... ಗಂಡನಿಂದ ದೂರವಿದ್ದ ಪತ್ನಿ ಆರು ವರ್ಷದ ಪುಟ್ಟ ಕಂದಮ್ಮ ಅಪ್ಪನ ಬಳಿಯೇ ಇತ್ತು. ಅಮ್ಮ ಆಗಾಗ ಅಲ್ಲಿಗೆ ತೆರಳಿ ಮಗಳ ನೋಡಿ ಬರುತ್ತಿದ್ದಳು. ಮೊನ್ನೆ ಹಾಗೆ ಬಂದಾಗ ಗಂಡನೊಡನೆ ಜಗಳ... ಮಹಾ ತಾಯಿಗೆ ಏನಾಯಿತೋ ಏನೋ, ಏನೂ ಅರಿಯದ ಕಂದನನ್ನು ನೀರಿನಲ್ಲಿ ಮುಳುಗಿಸಿ ಕೊಂದು ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾಳೆ! ಮಾನಗೆಟ್ಟವಳು ತನ್ನ ಅಕ್ರಮ ಸಂಬಂಧ ಸುಗಮಕ್ಕಾಗಿ ಮಗಳನ್ನು ಕೊಂದಳು ಎಂದು ಪತಿ ಆರೋಪಿಸಿದ್ದಾನೆ!!



ಅನ್ಯಾಯವಾಗಿ ಕೊಲೆಯಾದ ಮಗು ಸಾನ್ವಿ

ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ತಾಲ್ಲೂಕಿನ ಜಿನ್ನೇನಹಳ್ಳಿ ಕೊಪ್ಪಲು ಗ್ರಾಮದಲ್ಲಿ ನಡೆದಿರುವ ಈ ಘಟನೆ ಎಂತಹವರ ಹೃದಯವನ್ನು ಕಲಕಿ ಬಿಡುತ್ತೆ. ಗಂಡನ ಮೇಲಿನ ಸಿಟ್ಟೋ, ಇಲ್ಲಾ,ಕೌಟುಂಬಿಕ ಕಲಹದ ಆಕ್ರೋಶವೋ? ತಾನೇ ಹೆತ್ತ ಮಗುವನ್ನ ನೀರಿನಲ್ಲಿ ಮುಳುಗಿಸಿ ನಿರ್ದಯವಾಗಿ ಕೊಲೆ ಮಾಡಿದ ಮಹಾ ತಾಯಿ ಇದೀಗ ಪೊಲೀಸರ ಅತಿಥಿಯಾಗಿದ್ದಾಳೆ!

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಜಿನ್ನೇನಹಳ್ಳಿ ಕೊಪ್ಪಲು ಗ್ರಾಮದ ಶ್ವೇತಾ ಹಾಗೂ ಶಿವಮೊಗ್ಗ ಮೂಲದ ರಘು ಏಳು ವರ್ಷಗಳ ಹಿಂದೆ ಮದುವೆಯಾಗಿದ್ದರು. ರಘು ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದು, ಪತ್ನಿಯನ್ನ ತನ್ನೊಟ್ಟಿಗೆ ಬೆಂಗಳೂರಿಗೆ ಕರೆದೊಯ್ದು ಚೆನ್ನಾಗಿಯೇ



ನೋಡಿಕೊಂಡಿದ್ದರು. ಈ ದಂಪತಿಗೆ ಒಂದು ಮುದ್ದಾದ ಹೆಣ್ಣುಮಗು ಜನಿಸಿತು. ಅದಕ್ಕೆ ಸಾನ್ವಿ ಎಂಬ ಹೆಸರಿಟ್ಟಿದ್ದರು. ವಿಚಿತ್ರವೆಂದರೆ ಈ ಮಗುವಿನ ಆಗಮನ ಸಂಸಾರದಲ್ಲಿ ಖುಷಿ ಹೆಚ್ಚಿಸುವ ಬದಲು ಪತಿ ಪತ್ನಿ ನಡುವೆ ವಿರಸ ಮೂಡಿಸಿತ್ತು! ಯಾರು ಏನೇ ರಾಜಿ ಸಂಧಾನ ಮಾಡಿದರೂ ಪ್ರಯೋಜನ ಆಗಿರಲಿಲ್ಲ, ಇಬ್ಬರ ನಡುವೆ ಸಂಸಾರ ಹಳಿ ತಪ್ಪಿ ಪತ್ನಿ, ಪತಿಯಿಂದ ಅಂತರ ಕಾಯ್ದುಕೊಂಡು ವಿಚ್ಛೇದನಕ್ಕಾಗಿ ಅರ್ಜಿ ಕೂಡ ಸಲ್ಲಿಸಿದ್ದಳಂತೆ!

**ಮತ್ತೆ ಸೇರಿಸಿ ತಪ್ಪುಮಾಡಿದರು**

ಹೀಗಿದ್ದರೂ, ಕೆಲ ತಿಂಗಳ ಹಿಂದೆ ಕುಟುಂಬ ಸದಸ್ಯರು ಮತ್ತೆ ಮಾತುಕತೆ ಮಾಡಿ ಪತಿ ರಘು ಜೊತೆಗೆ ಶ್ವೇತಾಳನ್ನ ಕಳಿಸಿದ್ದರು. ಅವರು ಮಾಡಿದ ಈ ಯಡವಟ್ಟು ಕೆಲಸವೇ ಇಂದು ಮಗುವಿನ ಸಾವಿಗೆ ಕಾರಣವಾಗಿದೆ!



ಶ್ವೇತಾ ಸಂಬಂಧಿಕರು

ಕುಟುಂಬಸ್ಥರ ಒತ್ತಾಯಕ್ಕೆ ಕಟ್ಟು ಬಿದ್ದು ಗಂಡನ ಬಳಿಗೆ ಬಂದು ನೆಲೆಸಿದ್ದ ಶ್ವೇತಾ ಕಳೆದ ಜೂನ್ 5 ರಂದು ರಾತ್ರಿ 8 ಗಂಟೆ ಸುಮಾರಿಗೆ ಮಗಳನ್ನ ಕರೆದುಕೊಂಡು ಮನೆಬಿಟ್ಟಾಕೆ ನಿನ್ನೆ (ಜೂನ್15)ಬೆಳಿಗ್ಗೆ ತನ್ನ ತವರು ಮನೆ ಜಿನ್ನೇನಹಳ್ಳಿ ಕೊಪ್ಪಲಿನ ಜಮೀನಿನ ಬಳಿ ಇರುವ ನೀರಿನ ಕಟ್ಟೆಯೊಂದರಲ್ಲಿ ಮಗಳನ್ನು ಮುಳುಗಿಸಿ ಉಸಿರುಗಟ್ಟಿಸಿ ಕೊಂದಿದ್ದಾಳೆ! ಗ್ರಾಮಸ್ಥರು ಆ ಮಗುವನ್ನು ಆಸ್ಪತ್ರೆಗೆ ಸಾಗಿಸಿ ಬದುಕಿಸಿಕೊಳ್ಳಲು ಪಟ್ಟ ಪ್ರಯತ್ನ ವಿಫಲವಾಯ್ತು ಎನ್ನಲಾಗಿದೆ.

ಗಂಡನ ಮೇಲಿನ ಕ್ರೋಧಕ್ಕೋ ಅಥವಾ ಜೀವನದ ಮೇಲಿನ ಜಿಗುಪ್ಸೆಗೋ ಏನೋ,ತನ್ನ ಮಗಳನ್ನು ಕೊಲೆ ಮಾಡಿ ನಂತರ ತಾನೂ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಕೂಗಾಡುತ್ತಿದ್ದಳಂತೆ ಶ್ವೇತಾ! ಈ ಮಹಾತಾಯಿಯನ್ನು ಜಿನ್ನೇನಹಳ್ಳಿ ಕೊಪ್ಪಲು ಗ್ರಾಮಸ್ಥರು ಪೊಲೀಸರಿಗೆ ಒಪ್ಪಿಸಿದ್ದಾರೆ.

**ಆ ತಂದೆಯ ರೋಧನ ಕೇಳಲಾಗುತ್ತಿಲ್ಲ**

ಮಗಳ ಸಾವಿನ ಸುದ್ದಿ ಅರಿತು ಜಿನ್ನೇನಹಳ್ಳಿಗೆ ಧಾವಿಸಿದ ತಂದೆಯ ರೋಧನೆ ಮುಗಿಲು ಮುಟ್ಟಿತ್ತು. ತನ್ನ ಪತ್ನಿ ಸರಿ ಇರಲಿಲ್ಲ, ಅವಳ ಅಕ್ರಮ ಸಂಬಂಧಕ್ಕೆ ಮಗಳನ್ನ ಕೊಂದಿದ್ದಾಳೆ ಎಂದು ಆರೋಪಿಸಿ ದೂರು ನೀಡಿದ್ದಾರೆ ಗಂಡ ರಘು! ಕಳೆದ 11 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿರುವ ರಘು ಕುಟುಂಬಕ್ಕೆ, ಅದೇ ಏರಿಯಾದಲ್ಲಿ ವಾಸವಾಗಿದ್ದ ಶ್ವೇತಾಳ ಸಂಬಂಧಿಕರು ಪರಿಚಯವಾಗಿ ಮದುವೆ ಪ್ರಸ್ತಾಪ ಮಾಡಿದ್ದು ರಘು ಶ್ವೇತಾ ಮದುವೆ ಆಗಿತ್ತು.

ಎರಡು ವರ್ಷ ಸುಂದರವಾಗಿದ್ದ ಸಂಸಾರದಲ್ಲಿ ಅದೇನಾಯ್ತೋ ಏನೋ... ಎಲ್ಲಾ ಹಾಳಾಗಿ ಹೋಯ್ತು.

ಪತಿ ರಘು ಹೇಳುವುದು ಮಾತ್ರ ಆಕೆಗೆ ಮತ್ತ್ಯಾರದೋ ಜೊತೆ ಅಕ್ರಮ ಸಂಬಂಧವಿತ್ತು, ಆಗಾಗ ಮನೆ ಬಿಟ್ಟು ಹೋಗ್ತಿದ್ದಳು, ಇದನ್ನ ಪ್ರಶ್ನೆ ಮಾಡಿದಾಗ ದೂರವಾಗಿದ್ದಳು! ಕೋರ್ಟ್‌ನಲ್ಲಿ ಡಿವೋರ್ಸ್‌ಗೆ ಕೇಸ್ ಹಾಕಿಕೊಂಡಿದ್ದಳು ಎಂದಿದ್ದಾರೆ.



ರಘು

**ಮಗುವನ್ನು ಚೆನ್ನಾಗಿ ಓದಿಸುತ್ತಿದ್ದೆ**

ನಾನು ಕೂಲಿ ಮಾಡಿದರೂ ಮಗಳಿಗೆ ಏನೂ ಕಡಿಮೆ ಮಾಡಿರಲಿಲ್ಲ, ಒಳ್ಳೆಯ ಶಾಲೆಗೆ ಸೇರಿಸಿದ್ದೆ. ಅಮ್ಮನಿಲ್ಲ ಎಂಬ ಕೊರಗಿಲ್ಲದಂತೆ ಸಾನ್ವಿಯನ್ನು ಚೆನ್ನಾಗಿ ನೋಡಿಕೊಳ್ತಿದ್ದೆ, ಎಲ್‌ಕೆಜಿ ಮುಗಿದಿತ್ತು. ನನ್ನ ಮಗು ಈ ವರ್ಷ ಯುಕೆಜಿಗೆ ಹೋಗ್ತಾ ಇತ್ತು. ಈಗ ಇಲ್ಲ...ಎಂಬುದಾಗಿ ರಘು ಗೋಳಾಡುತ್ತಿದ್ದ ದೃಶ್ಯ ಇಂತಹವರ ಕರುಳು ಕಿವುಚುತ್ತಿತ್ತು.

ಹಾಸನ ಜಿಲ್ಲಾಸ್ಪತ್ರೆಯಲ್ಲಿ ಮೃತ ಮಗು ಸಾನ್ವಿ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಮಗು ನೋಡಲು ಬಂದ ಶ್ವೇತ ಸಂಬಂಧಿಕರು ಹಾಗೂ ರಘು ನಡುವೆ ಮಾತಿಗೆ ಮಾತು ನಡೆದು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಈ ಜಗಳ ಬಿಡಿಸುವಲ್ಲಿ, ಅನಾಹುತ ತಪ್ಪಿಸುವಲ್ಲಿ ಹಿರಿಸಾವೆ ಪೊಲೀಸರು ಹೈರಾಣಾಗಿ ಹೋಗಿದ್ದಾರೆ. ಗಲಾಟೆ ವೇಳೆ ರಘುವಿನ ಆಪ್ತರೊಬ್ಬರು ಮಹಿಳಾ ಪಿಎಸ್ಐರನ್ನೇ ತಳ್ಳಿ ಕೆಲಕಾಲ ಗೊಂದಲ ನಿರ್ಮಾಣವಾಗಿತ್ತು. ಕಡೆಗೆ ಆಕಸ್ಮಿಕವಾಗಿ ನಡೆದ ಘಟನೆಗೆ ರಘು ಕಡೆಯವರು ಕ್ಷಮೆಯನ್ನು ಕೇಳಿದರಂತೆ. ಅದಿರಲಿ, ಶ್ವೇತ ಎಸಗಿರುವ ಕುಕೃತ್ಯದ ಬಗ್ಗೆ ಅಚ್ಚರಿಗೊಂಡಿರುವ ಸಂಬಂಧಿಕರು ಈಗ ಹೊಸ ಡ್ರಾಮಾ ಆಡುತ್ತಿರುವಂತೆ ಕಾಣಿಸುತ್ತಿದೆ!

ಆರಂಭದಿಂದಲೂ ಇಬ್ಬರ ನಡುವೆ ಹೊಂದಾಣಿಕೆ ಇರಲಿಲ್ಲ, ನಾವು ಯಾವತ್ತೂ ಅವಳನ್ನು ಗಂಡನ ಮನೆಗೆ ಹೋಗುವುದಕ್ಕೆ ಅವಕಾಶ ನೀಡಿರಲಿಲ್ಲ, ಈಗ ಅವಳೇ ಹೋಗಿ ತನ್ನ ಮಗುವನ್ನ ಕರೆದುಕೊಂಡು ಬಂದು ಸಾಯಿಸಿದ್ದಾಳೆ ಎಂದು ಹೇಳ್ತಿದ್ದಾರೆ. ಏನಾಯಿತೋ ಏನೋ ಒಂದೂ ಗೊತ್ತಿಲ್ಲ ಎಂದು ಶ್ವೇತಾ ಸಹೋದರಿ ಮಂಜುಳಾ ಅವರು ಹೇಳಿದ್ದಾರೆ!

ಒಟ್ಟಿನಲ್ಲಿ ಅಪ್ಪ-ಅಮ್ಮನ ಜಗಳದಲ್ಲಿ ಕೂಸು ಇನ್ನಿಲ್ಲವಾಯ್ತು ಎಂಬಂತಾಗಿದೆ. ಸದ್ಯ, ಹಿರಿಸಾವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಲ್ಲಿನ ಪೊಲೀಸರ ನಿಷ್ಪಕ್ಷಪಾತ ತನಿಖೆಯಿಂದಷ್ಟೇ ಸತ್ಯಾಂಶ ಬಯಲಾಗಬೇಕಿದೆ!

## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಚೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

**ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ**


**ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,**

**ಬೆಂಗಳೂರು-560 079. ಮೊ : 9513892666**

‘ಎನ್‌ಕೌಂಟರ್ ಸ್ಪೆಷಲಿಸ್ಟ್’ ಖ್ಯಾತಿಯ ಕನ್ನಡಿಗ ಪೊಲೀಸ್ ಅಧಿಕಾರಿ ದಯಾನಾಯಕ್ ಬದುಕೇ ಒಂದು ನಿರಂತರ ಸಂಗ್ರಾಮ. ಅವರು ಸದಾ ಗೆಲುವಿಗಾಗಿ ಹಾತೊರೆದವರಲ್ಲ. ಸೋಲು ಕಾಣದ ಸರದಾರನೂ ಅಲ್ಲ. ಸೋಲು-ಗೆಲುವುಗಳ ವಿಷಯದಲ್ಲ ಮಾತ್ರ ಅವರದ್ದು ಹಠಮಾರಿ ಹುಡುಗನ ಸ್ವಭಾವ. ಹಾಗಾಗಿಯೇ ಪ್ರತಿ ಸೋಲು ಅವರಲ್ಲೊಂದು ಕಿಚ್ಚು ಹೊತ್ತಿಸಿದೆ. ಅನ್ಯಾಯದ ವಿರುದ್ಧ ಬಡಿದಾಟಕ್ಕೆ ಪ್ರೇರೇಪಿಸಿದೆ. ಕರ್ತವ್ಯದ ದಿನಗಳಲ್ಲಿ ಮುಂಬೈ ಭೂಗತಪಾತಕಿಗಳನ್ನು ಬೆನ್ನಟ್ಟಿ ಗುಂಡು ಹಾರಿಸಿದರು. ಆಗ ಆರೋಪಿಗಳು ಕೇಲಿ ಬಂತು. ಹುಟ್ಟೂರು ಕಾರ್ಕಳ ತಾಲ್ಲೂಕಿನ ಎಣ್ಣೆಹೊಳೆಯಲ್ಲಿ ಭವ್ಯ ಶಾಲೆ ನಿರ್ಮಿಸಿ ಸರಕಾರಕ್ಕೆ ಹಸ್ತಾಂತರಿಸಿದರು. ಇದೇ ಕಾರಣಕ್ಕಾಗಿ ಕೇಸು ದಾಖಲಾಯಿತು. ವಿನಾಕಾರಣ ಬಂಧನಕ್ಕೊಳಗಾದರು. ಇನ್ನೇನು ದಯಾನಾಯಕ್ ಕಥೆ ಮುಗಿದೇ ಹೋಯಿತು ಅಂತ ಪತ್ರಿಕೆಗಳು ದಿನಗಟ್ಟಲೆ ಬರೆದವು. ಟಿವಿಗಳಲ್ಲಿ ಸರಣಿ ಕಂತುಗಳು ಪ್ರಸಾರವಾಯಿತು. ಆದರೆ ದಯ ಕಾನೂನು ಸಮರದಲ್ಲಿ ಗೆದ್ದು ಬಂದರು. ತಾಯಿಯ ಆಶೀರ್ವಾದ, ಸಹೋದರಿಯ ಪ್ರಾರ್ಥನೆ, ಅಭಿಮಾನಿಗಳ ಬೆಂಬಲದಿಂದ ಬಂದ ಸೋಲನ್ನು, ಅನುಭವಿಸಿದ ಅವಮಾನವನ್ನು ಒಂದು ಕೈಯಿಂದ ಆಚೆಗೆ ದೂಡುತ್ತಲೇ ವಿಜಯದ ಯಾತ್ರೆಯನ್ನು ಮುಂದುವರಿಸಿರುವ ದಯಾನಾಯಕ್, ಯಾವತ್ತೂ ನಿದಂಕರ ಕಡೆ ತಿರುಗಿಯೂ ನೋಡಿದವರಲ್ಲ. ಕೊಟ್ಟ ಮಾತು, ಇಟ್ಟ ಹೆಜ್ಜೆಯಿಂದ ಹಿಂದೆ ಸರಿದ ಉದಾಹರಣೆಗಳಿಲ್ಲ.

# ಡೆಡ್ಲಿ ದಯಾ ಮತ್ತು ಅಂಡರ್‌ವರ್ಲ್ಡ್

✍ ಮೋಹನ್ ಬೋಳಂಗಡಿ



ಮುಂಬೈ ಪೊಲೀಸ್ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ಮೊದಲ ದಿನದಿಂದಲೇ ತಮ್ಮದೊಂದು ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದ ಅಧಿಕಾರಿ ದಯಾನಾಯಕ್. ಜಿಮ್‌ನಲ್ಲಿ ದೇಹ ದಂಡಿಸಿದ ಅಜಾನುಬಾಹು ವ್ಯಕ್ತಿತ್ವ ಅವರದು. ಹಿಂದಿ ಚಿತ್ರರಂಗದ ಯಾವ ಸ್ಫುರದ್ರೂಪಿ ನಾಯಕ ನಟನಿಗೂ ಕಡಿಮೆ ನಲ್ಲ ಅವರ ದೇಹದಾರ್ಢ್ಯ, ವ್ಯಕ್ತಿತ್ವ ಮತ್ತು ಪ್ರಭಾವ. ಹೋದಲ್ಲೆಲ್ಲ ಸೆಲೆಬ್ರಿಟಿಯಾಗಿ ಗುರುತಿಸಿಕೊಳ್ಳುತ್ತಿರುವವರು.

ಪೊಲೀಸ್ ನೌಕರಿ ಎಂದರೆ ಏನು ಎಂಬುದನ್ನು ಕೆಲಸಕ್ಕೆ ಸೇರಿದ ಕೆಲವೇ ತಿಂಗಳುಗಳಲ್ಲೆ ತುಂಬಾ ಸಮರ್ಥವಾಗಿ ಅರ್ಥ ಮಾಡಿಕೊಂಡಿದ್ದರು. ಮುಂಬೈ ಪೊಲೀಸ್ ವ್ಯಾಪ್ತಿಗೆ ಬರುವ ಪ್ರತಿ ರಸ್ತೆ, ಪ್ರತಿ ಗಲ್ಲಿ, ಪ್ರತಿ ತಿರುವನ್ನು ನೋಡಿ ತಿಳಿದುಕೊಳ್ಳಬೇಕೆಂಬ ಕುತೂಹಲವಿತ್ತು. ದೊಂದು ದಿನ ಪ್ರಧಾನ್ ಪೊಲೀಸ್ ಕಾನ್‌ಸ್ಟೇಬಲ್‌ನನ್ನು ಜೀಪಿನಲ್ಲಿ ಕೂಡಿಸಿಕೊಂಡು ಕ್ರಫರ್ಡ್ ಮಾರ್ಕೆಟ್ ಬಳಿಯಿರುವ ಪೊಲೀಸ್ ಹೆಡ್ ಕ್ವಾಟ್ರಸ್‌ನಿಂದ ಹೊರಟುಬಿಟ್ಟರು ದಯಾನಾಯಕ್. ಜೊತೆಗಿದ್ದ ಕಾನ್‌ಸ್ಟೇಬಲ್ ಮುಂಬೈನ ಗಲ್ಲಿ ಗಲ್ಲಿಗಳ ವಿವರಗಳನ್ನು ಹೇಳಲು ಆರಂಭಿಸಿದ್ದ.

“ಸರ್, ಇದು ಬೆಂಡಿ ಬಜಾರ್ ಏರಿಯಾ. ಪಕ್ಕಾ ಮುಸ್ಲಿಂ ಏರಿಯಾ ಸರ್. ಇದನ್ನು ಮುಹಮ್ಮದ್ ಅಲಿ ರೋಡ್ ಅಂತಾರೆ. ಸೀದಾ ಹೋಗಿ ಡೋಂಗ್ರಿಗೆ ಟಚ್ ಆಗುತ್ತೆ. ಇದು ದಾವೂದ್ ಇಬ್ರಾಹಿಂ ಏರಿಯಾ ಸರ್. ಅವನೀಗ ದುಬೈನಲ್ಲಿದ್ದಾನೆ. ಆದರೂ ಇಲ್ಲಿ ಅವನದೇ ಮಾತು ನಡೆಯುತ್ತೆ. ಬೇರೆ ಏರಿಯಾಗಳಲ್ಲೂ ನಡೆಯುತ್ತೆ. ಹಾಂ, ಇಲ್ಲಿಗೆ ಬಂದೆವಲಲ ಸರ್. ಇದು ಜೆ.ಜೆ. ಹಾಸ್ಪಿಟಲ್ ಕ್ರಾಸ್ ರೋಡ್. ಬೈಕುಲ ಫ್ಲೈ ಓವರ್ ಕಡೆಗೆ ಹೋಗುತ್ತೆ. ಇಲ್ಲಿಗೆ ದಾವೂದ್ ಏರಿಯಾ ಎಂಡ್ ಆಗುತ್ತೆ ಸರ್. ಇಲ್ಲಿಂದ ಅರುಣ್ ಗೌಳಿ ಏರಿಯಾ ಶುರುವಾಗುತ್ತೆ ಸರ್. ಮೊದಲು ಗೌಳಿ ಒಂದು ಮಿಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ. ಆದರೆ ಇವತ್ತು ಮುಸ್ಲಿಂ ಮಾಫಿಯಾ ವಿರುದ್ಧ ನಿಂತು ಬಡಿದಾಡುತ್ತಿರುವ ಹಿಂದೂ ಡಾನ್ ಅವನೊಬ್ಬನೇ ಸರ್. ಆದರೆ ಸರ್. ಇಲ್ಲಿಗೆ ಬಂದೆವಲ್ಲ ಸರ್. ಇಲ್ಲಿಂದ ಅಮರ್ ನಾಯಕ್ ಏರಿಯಾ ಶುರುವಾಗುತ್ತೆ. ಮೊದಲು ಅಮರ್ ನಾಯಕ್ ದಾದರ್ ಮಾರ್ಕೆಟ್‌ನಲ್ಲಿ ತರಕಾರಿ ಮಾರಿಕೊಂಡಿದ್ದ. ಆಮೇಲೆ ಒಂದು ಗ್ಯಾಂಗ್ ಕಟ್ಟಿ ಭಾರೀ ಬೆಳೆದುಬಿಟ್ಟ ಸರ್. ಹಾಂ. ಇದು ಸೇನಾ ಭವನ್ ಸರ್. ಶಿವಸೇನೆ ಪಾರ್ಟಿಯ ಹೆಡ್ ಆಫೀಸ್. ಶಿವಾಜಿ ಪಾರ್ಕ್ ತನಕ ಇವರದ್ದೇ ಏರಿಯಾ ಸರ್. ಸ್ಟ್ರಾಂಗ್ ಹೋಲ್ಡ್ ಅವರದ್ದು. ಇಲ್ಲೊಂದು ವಿಚಿತ್ರ ನೀವು ಗಮನಿಸಬೇಕು ಸರ್. ಹ್ಯಾಗೆ ಇಡೀ ಮುಸ್ಲಿಂ ಮಾಫಿಯಾ ಮತ್ತು ದಾವೂದ್ ವಿರುದ್ಧ ನಿಂತು ಬಡಿದಾಡಿದವನು ಅರುಣ್ ಗೌಳಿ ಒಬ್ಬನೇನೋ, ಹಾಗೆ ಕಾಂಗ್ರೆಸ್ ವಿರುದ್ಧ ನಿಂತು ಅದನ್ನು ಬಗ್ಗು ಬಡಿದಿದ್ದು ಶಿವಸೇನೆ ಪಾರ್ಟಿ ಒಂದೇ ನೋಡಿ ಸರ್. ಈಗ ಬಂದ್ವಿ ನೋಡಿ ಸರ್. ಇದು ಮಾಹಿಮ್ ಏರಿಯಾ. ಪಕ್ಕಾ ಸ್ಮಗ್ಲರ್‌ಗಳ ಏರಿಯಾ ಸರ್. ಇಲ್ಲಿಂದ ಮುಂದಕ್ಕೆ ಹೋದರೆ ಮತ್ತೆ ದಾವೂದ್ ಏರಿಯಾಗೆ ಎಂಟ್ರ್ರಾಗ್ತೀವಿ ಸರ್, ಅವನ ತಮ್ಮ ಒಬ್ಬನಿದ್ದಾನೆ ಸರ್. ಅನಿಸ್ ಇಬ್ರಾಹಿಂ ಅಂತ. ಮತ್ತೊಬ್ಬ ಚೇಲಾನ ಹೆಸರು ಛೋಟಾ ಶಕೀಲ್. ಇನ್ನು ಚೆಂಬೂರು ಅಂತ ಒಂದು ಏರಿಯಾ ಇದೆ ಸರ್, ಅದಕ್ಕೆ ಛೋಟಾರಾಜನ್ನೇ ಹೆಡ್‌ಮಾಸ್ಟರ್. ಅವನ ಶಿಷ್ಯನೊಬ್ಬನಿದ್ದಾನೆ ಸರ್. ಸಾಧು ಶೆಟ್ಟಿ. ಬಲೇ ಚಾಲಾಕಿ. ಇನ್ನು ಜೋಗೇಶ್ವರಿಯಲ್ಲಿ ಶರತ್ ಶೆಟ್ಟಿಯದ್ದೇ ಪವರ್. ಇವರಿಬ್ಬರೂ ನಿಮ್ಮೂರಿನವರೆ ಸರ್. ಶೆಟ್ಟಿ ಗ್ಯಾಂಗ್ ಅಂತ ಒಂದಿತ್ತು ಸರ್. ಮುಂಬೈನಲ್ಲಿರುವ ಬಹುತೇಕ ಶೆಟ್ಟಿ ಲೋಗ್ ಶರತ್ ಮಾತಿಗೆ ದೂಸ್ರ ಮಾತೇ ಆಡುವುದಿಲ್ಲ. ಇನ್ನು ನಿಮ್ಮೂರಿನ ಕೆಲವು ಶೆಟ್ಟಿ ಲೋಗ್‌ಗಳಿಗೆ ಅಂಡರ್‌ವರ್ಲ್ಡ್ ತುಂಬಾ ಟಚ್ ಇದೆ ಸರ್. ಗುಟ್ಟಲ್ಲಿ ಕದ್ದು ಕದ್ದು ಪಬ್ಲಿಕ್ ಬೂತಿಂದ ಮಾತಾಡ್ತಾ ಇರ್ತಾರೆ. ಅಂಡರ್‌ವರ್ಲ್ಡ್‌ನವರೊಟ್ಟಿಗೆ ‘ಅಣ್ಣಾ’ ಅಂತ ದೋಸ್ತಿ ಮಾಡ್ತಾರೆ. ಪೊಲೀಸ್‌ನವರಿಗೆ ‘ಸಾಹೇಬ್’ ಅಂತ ರೆಸ್ಪೆಕ್ಟ್ ಕೊಡ್ತಾರೆ. ಸಖತ್ ಕಿಲಾಡಿಗಳು. ಆದರೆ ಒಳ್ಳೆ ಜನ ಸರ್. ಮುಂಬೈನಲ್ಲಿ ಸ್ಟ್ರಾಂಗ್ ಹೋಲ್ಡ್ ಇಟ್ಕೊಂಡಿದ್ದಾರೆ ಸರ್.



ಜೀಪಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಕಾನ್‌ಸ್ಟೇಬಲ್ ಪ್ರಧಾನ್ ನಿರಂತರವಾಗಿ ಮಾತನಾಡುತ್ತಲೇ ಇದ್ದ. ಅಷ್ಟರಲ್ಲಾಗಲೇ ಪೊಲೀಸ್ ಜೀಪ್ ಓಶಿವಾರ ಸಿಗ್ನಲ್ ದಾಟುತ್ತಿತ್ತು. ಡ್ರೈವರ್ ಸೀಟಿನ ಪಕ್ಕದಲ್ಲಿ ಪೊಲೀಸ್ ಯೂನಿಫಾರ್ಮ್ ತೊಟ್ಟು ಕುಳಿತಿದ್ದ ದಯಾನಾಯಕ್ ಹಿಂದಕ್ಕೆ ತಿರುಗಿ ಅವನನ್ನೊಮ್ಮೆ ದಿಟ್ಟಿಸಿ ನೋಡಿದರು. ಆತ ‘ಬಾಂಡೂಪ್... ಬ್ರದರ್ಸ್...’ ಅಂತ ಮತ್ತೇನೋ ಹೇಳಲು ಮುಂದಾದ.

ಆ ಹೊತ್ತಿಗಾಗಲೇ ದಯಾನಾಯಕರ ಸಹನೆ ಮುಗಿತ್ತು. ‘ಏನು ಮಾತಾಡ್ತಿದ್ದೀಯಾ ನೀನು? ಇದು ದಾವೂದ್‌ನದು, ಛೋಟಾ ರಾಜನ್‌ನದು, ಗೌಳಿ ಏರಿಯಾ, ಮತ್ತೊಂದು ಅಮರ್ ನಾಯಕ್ ಏರಿಯಾ, ಶಕೀಲ್‌ನದು. ಏನು ಹಂಗಂದ್ರೆ? ಬಾಂಬೆ ಪೂರ ರೌಡಿಗಳದೇನಾ? ಈ ಊರನ್ನು ಆಳ್ತಿರೋದು ಅವರಾ? ನಾವಾ? ಎಷ್ಟು ನಾಚಿಕೆ ಇಲ್ಲದೆ ಇದನ್ನೆಲ್ಲ ಮಾತಾಡ್ತೀ? ಇದನ್ನೆಲ್ಲ ಬಿಟ್ಟು ಬಿಡಿ. ಮುಂಬೈ ನಮ್ಮ ಸರ್ಕಾರದ್ದು. ಇಲ್ಲಿನ ಜನರದ್ದು. ಅದನ್ನು ಕಾಯುವವರು ನಾವು. ಇದನ್ನು ಆಳಬೇಕಾದವರು ಗ್ಯಾಂಗ್‌ಸ್ಟರ್‌ಗಳಲ್ಲ, ಪೊಲೀಸರು’ ಅಂದು ಬಿಟ್ಟು ಅದೇನೋ ಯೋಚನೆಯಲ್ಲಿ ತೊಡಗಿದರು. ಕಾನ್‌ಸ್ಟೇಬಲ್ ದೂಸ್ರಾ ಮಾತನಾಡಲೇ ಇಲ್ಲ.

ನಂತರದ ದಿನಗಳಲ್ಲಿ ಮುಂಬೈ ಕತ್ತಲಲೋಕದ ದಾರಿಗಳಲ್ಲಿ ಪೊಲೀಸ್ ಇಲಾಖೆ ಅಂದರೆ ಏನು ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದರು ದಯಾನಾಯಕ್. ಏಕ್ ಬಾತ್ ಸಮಜ್ ಲೀಜಿಯೇ. ಬಂಬಯಿ ಮೇ ಅಬ್ ಗೂಂಡಾ ರಾಜ್ ನಹಿ ಚಲೇಗಾ (ಒಂದು ಮಾತು ತಿಳ್ಕೊಂಡು ಬಿಡಿ. ಬಾಂಬೆಯಲ್ಲಿ ಇನ್ನೂ ಗೂಂಡಾ ರಾಜ್ಯ ನಡೆಯುವುದಿಲ್ಲ) ಎನ್ನುವ ಸ್ಪಷ್ಟ ಸಂದೇಶವನ್ನು ಗ್ಯಾಂಗ್‌ಸ್ಟರ್‌ಗಳಿಗೆ ರವಾನಿಸಿದ್ದರು. ಜನರ ಪಾಲಿಗೆ ಪೊಲೀಸರು ಭಾಯಿಗಳಾಗಬೇಕೇ ಹೊರತು ಗೂಂಡಾಗಳಲ್ಲ ಎಂದು ಘೋಷಿಸಿದ್ದರು. ಅದನ್ನು ಸಮರ್ಥವಾಗಿ ಅನುಷ್ಠಾನಕ್ಕೆ ತಂದರು ಕೂಡ. ದಯಾನಾಯಕ್ ಅಂದರೆ ಅದು!



## ದಯಣ್ಣೆ ಫೋನು ದೆಪ್ಪುಜೇರ್

ಸದ್ಯ ದಯಾನಾಯಕ್ ಬಗ್ಗೆ ಕೇಳಿ ಬರುತ್ತಿರುವ ಭಾರಿ ಪ್ರಚಲಿತವಾದ ಮಾತಿದು. ಮಾಯಾನಗರಿ ಮುಂಬೈ ಪೊಲೀಸ್ ಇಲಾಖೆಯಲ್ಲಿ ಪವರ್‌ಫುಲ್ ಅಧಿಕಾರಿಯಾಗಿ ಗುರುತಿಸಿಕೊಂಡಿರುವ ದಯಾನಾಯಕ್‌ರವರಿಗೆ ಹತ್ತಿರವಾಗಲು ನಮ್ಮದೇ ಜಿಲ್ಲೆಯ ನೂರಾರು ಮಂದಿ ಉದ್ಯಮಿಗಳು ಇವತ್ತಿಗೂ ಹಾತೊರೆಯುತ್ತಿದ್ದಾರೆ. ಸಂಪರ್ಕಿಸಲು ಪ್ರಯತ್ನಿಸುತ್ತಿದ್ದಾರೆ. ಸಾಧ್ಯವಾಗದೆ ಹೋದಾಗ ಅವರದೆಲ್ಲರದು ಒಂದೇ ಕಂಪ್ಲೇಂಟ್ “ದಯಣ್ಣೆ ಫೋನು ದೆಪ್ಪುಜೇರು” (ದಯಣ್ಣ ಫೋನ್ ರಿಸೀವ್ ಮಾಡುತ್ತಿಲ್ಲ).

ಇದು ನಿಜವೂ ಹೌದು. ದಯಾನಾಯಕ್ ಇಂದು ಮುಂಬೈನ ಬಾಂದ್ರಾ ಕ್ರೈಂ ಬ್ರಾಂಚ್ ಕಚೇರಿಯ ಮುಖ್ಯಸ್ಥರಾಗಿದ್ದಾರೆ. ಮುಂದಿನ ವರ್ಷಕ್ಕೆ ನಿವೃತ್ತರಾಗಲಿದ್ದಾರೆ. ವೃತ್ತಿಜೀವನದ ಉತ್ತುಂಗದ ದಿನಗಳಲ್ಲಿದ್ದ ವೇಳೆ ಅವರಿಂದ ಜೀವ ಉಳಿಸಿಕೊಂಡಿದ್ದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಕೆಲವು ಉದ್ಯಮಿಗಳೇ ಅವರ ಕಷ್ಟದ ದಿನಗಳಲ್ಲಿ ಬೆನ್ನಿಗಿರಿಯುವ ಕೆಲಸ ಮಾಡಿದ್ದರು. ಬೆನ್ನ ಹಿಂದಿನಿಂದ ಮಾತನಾಡಿಕೊಂಡಿದ್ದರು. ಹಿತ ಶತ್ರುಗಳು ಯಾರು? ನಿಜವಾದ ಮಿತ್ರರು ಯಾರು? ಎಂಬುದು ದಯಾನಾಯಕ್‌ರವರಿಗೆ ಈಗ ತುಂಬಾ ಚೆನ್ನಾಗಿ ಮನವರಿಕೆಯಾಗಿದೆ. ಹಾಗಾಗಿಯೋ ಏನೋ, ಹೆಚ್ಚು ಜನರೊಂದಿಗೆ ಬೆರೆಯುತ್ತಿಲ್ಲ. ಅನಪೇಕ್ಷಿತ ವ್ಯಕ್ತಿಗಳ ಕಾಲ್ ರಿಸೀವ್ ಮಾಡುವುದಿಲ್ಲ. ಸಭೆ-ಸಮಾರಂಭಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದಿಲ್ಲ. ಕರ್ತವ್ಯ ಮತ್ತು ಜವಾಬ್ದಾರಿಯನ್ನು ಯಾವತ್ತೂ ಮರೆತಿಲ್ಲ.

ದಯಾನಾಯಕ್ ಅವರಿಗೀಗ 57 ವರ್ಷ. ಬದುಕಿನ ಬದುಕು ಕಲಿತಿದ ಪಾಠಗಳೆಲ್ಲವನ್ನು ಕಲಿತು ಕಲಿಯುತ್ತಲೇ 60ಕ್ಕೆ ಹತ್ತಿರವಾಗುತ್ತಿದ್ದಾರೆ. ಆದರೆ ಅವರ ದೇಹದೊಳಗಿನ ಆರೋಗ್ಯ, ಮನಸ್ಸಿನೊಳಗಿನ ಉತ್ಸಾಹ, ಗಮನಿಸಿದರೆ ಇದೇನು ಮಹಾ ವಯಸ್ಸಲ್ಲ ಅಂತ ಅನ್ನಿಸುತ್ತದೆ. ‘ಹೇಗೋ ಇದ್ದರಾಯಿತು’ ಅಂತ ತೀರ್ಮಾನಿಸಿದವರ ಬದುಕು ‘ಹೇಗೇಗೋ’ ಇರುತ್ತದೆ, ಆದರೆ ದಯಾನಾಯಕ್ ‘ಹೀಗೇ’ ಇರಬೇಕು ಅಂತ ನಿರ್ಧರಿಸಿದವರು. ಹಾಗಾಗಿ ಅವರ ಬದುಕು ವರ್ಣರಂಜಿತವಾಗಿದೆ.

## ಮೂಡಲಗಿ : ಸಿಪಿಐ ಶ್ರೀಶೈಲ ಬ್ಯಾಕೋಡ ನೇತೃತ್ವದಲ್ಲಿ ಕುಲಗೋಡ ಪೊಲೀಸರ ಕಾರ್ಯಾಚರಣೆ

# ಅಜ್ಜಿಗೆ ಸೇರಿದ್ದ 19 ಲಕ್ಷ ರೂ.ಗಳ ಚಿನ್ನಾಭರಣ ಕದ್ದು ದರೋಡೆಯ ಕಥೆ ಕಟ್ಟಿದ್ದ ಮಹಾ ಐನಾತಿ ಕಳ್ಳ!


ಅಜ್ಜಿಯ ಚಿನ್ನಾಭರಣ ದರೋಡೆ ಮಾಡಿದ್ದ ಲೋಕೇಶ ಬಸವರಾಜ ದಳವಾಯಿ

**ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಹರಾಮಿ ತರುಣನೊಬ್ಬನು ಆನ್‌ಲೈನ್ ಜೂಜು ಮತ್ತು ಕ್ಯಾಸಿನೋ ತೆವಲಿಗೆ ಬಿದ್ದು ಮೈ ತುಂಬಾ ಸಾಲ ಮಾಡಿಕೊಂಡಿದ್ದನು. ಅಜ್ಜಿಯ ಮನೆಯಲ್ಲಿ ಆಶ್ರಯ ಪಡೆದಿದ್ದ ಈತ ಆಕೆಗೆ ಗೊತ್ತಾಗದಂತೆ 19 ಲಕ್ಷ ರೂ. ಮೌಲ್ಯದ 191 ಗ್ರಾಂ ಚಿನ್ನಾಭರಣಗಳನ್ನು ದೋಚಿ ಪ್ರಕರಣ ಹಳ್ಳ ಹಿಡಿಸುವುದಕ್ಕಾಗಿ ತನ್ನ ಮೇಲೆ ಹಲ್ಲೆ ನಡೆಸಿದ ಮೂವರು ಮುಸುಕುಧಾರಿ ಕಳ್ಳರು ಚಿನ್ನಾಭರಣ ದರೋಡೆ ಮಾಡಿಕೊಂಡು ಹೋಗಿದ್ದಾರೆ ಎಂದು ಸತ್ಯದ ತಲೆಯ ಮೇಲೆ ಹೊಡೆದಂತೆ ಕಥೆಯನ್ನು ಕಟ್ಟಿದ್ದನು. ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಇಳಿದ ಚತರು ಮತ್ತು ಧಾಡಸಿ ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್ಐ ಆನಂದ ಬಿ. ಮತ್ತು ಸಿಬ್ಬಂದಿಗಳು ಡಿವೈಎಸ್ಪಿ ರವಿ ನಾಯಕ್ ನಿರ್ದೇಶನದಲ್ಲಿ ದರೋಡೆಯ ಕಥೆ ಕಟ್ಟಿ ನಾಟಕ ಮಾಡುತ್ತಿದ್ದ ಹರಾಮಿ ಜೂಜುಕೋರ ಮೊಮ್ಮಗನನ್ನು ಬಂಧಿಸಿ ಜೈಲಗಟ್ಟಿರುವ ರೋಚಕ ವರದಿಯು ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಕುಲಗೋಡ ಪೊಲೀಸ್ ಠಾಣೆ ವ್ಯಾಪ್ತಿಯ ಕೌಜಲಗಿಯಲ್ಲಿ ಬೆಳಕಿಗೆ ಬಂದಿದೆ.**

ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಜೂಜಾಟ ಮತ್ತು ಕ್ಯಾಸಿನೋ ಜೂಜಾಟದ ಮಾಯಾಜಾಲದಲ್ಲಿ ಬಿದ್ದು ಬಹುತೇಕ ವಿದ್ಯಾವಂತ ತರುಣರು ಹಾಳಾಗುತ್ತಿದ್ದಾರೆ. ಒಮ್ಮೆ ಜೂಜಾಟದ ಚಟ ಅಂಟಿಕೊಂಡರೆ ಮುಗಿದೇ ಹೋಯಿತು. ಅಂತಹವರ ಭವಿಷ್ಯ ಏನಾಗುತ್ತದೆ ಎಂಬುದನ್ನು ಊಹಿಸಲು ಅಸಾಧ್ಯ.

ಇಲ್ಲೊಬ್ಬ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುಗಳಿಹಾಳದ 24 ವರ್ಷದ ಲೋಕೇಶ ಬಸವರಾಜ ದಳವಾಯಿ ಈಗ ಸದ್ಯಕ್ಕೆ ಮೂಡಲಗಿ ತಾಲ್ಲೂಕಿನ ಕೌಜಲಗಿಯಲ್ಲಿ ತನ್ನ ತಾಯಿಯ ದೊಡ್ಡವ್ವ ಅಂದರೆ ಅಜ್ಜಿ ಪಾರ್ವತೆವ್ವ ತಂದೆ ತಮ್ಮಣ್ಣ ಹಳ್ಳೂರ ಎಂಬುವರ ಆಶ್ರಯದಲ್ಲಿದ್ದನು. ಆನ್‌ಲೈನ್ ಜೂಜಾಟ ಮತ್ತು ಕ್ಯಾಸಿನೋಗೆ ಬಲಿ ಬಿದ್ದು ಮೈ ತುಂಬಾ ಸಾಲ ಮಾಡಿಕೊಂಡಿದ್ದನು. ಆದರೂ ಜೂಜಾಟ ಬಿಟ್ಟಿರಲಿಲ್ಲ. ಇದಕ್ಕಾಗಿಯೇ ಆತನಿಗೆ ಆಶ್ರಯ ನೀಡಿದ್ದ ಅಜ್ಜಿಯ 19 ಲಕ್ಷ ರೂ.ಗಳ 191 ಗ್ರಾಂ ಚಿನ್ನಾಭರಣ ಕದ್ದುಬಿಟ್ಟಿದ್ದನು. ಪ್ರಕರಣ ಹಳ್ಳ ಹಿಡಿಸಲು ದರೋಡೆ, ಹಲ್ಲೆ ಎಂಬ ನಾಟಕವಾಡಿ ಇದೀಗ ಪೊಲೀಸರ ಕೈಲಿ ಸಿಕ್ಕುಬಿದ್ದು ಜೈಲು ಸೇರಿ ತಂಗಳು ಮುರಿಯುತ್ತ ಕಂಬಿ ಎಣಿಸುತ್ತಿರುವ ರೋಚಕ ವರದಿ ಇದಾಗಿದೆ.

**ಬೆಳಗಾವಿ**
✍ ಮನ್ನಾಪೂರ

### ಬಕ್ರೀದ್ ಹಬ್ಬದಂದು ದರೋಡೆ...

ಅಂದು ಜೂನ್ 7ನೇ ತಾರೀಕು. ನಾಡಿನೆಲ್ಲೆಡೆ ಬಕ್ರೀದ್ ಹಬ್ಬದ ಸಂಭ್ರಮ. ಮೂಡಲಗಿ ತಾಲ್ಲೂಕಿನ ಕೌಜಲಗಿ ಗ್ರಾಮದ ಸುಮಾರು 55 ವರ್ಷದ ಶಿಕ್ಷಕಿ ಪಾರ್ವತೆವ್ವ ತಂದೆ ತಮ್ಮಣ್ಣ ಹಳ್ಳೂರ ಎಂಬುವರು ಕುಲಗೋಡ ಪೊಲೀಸ್ ಠಾಣೆಗೆ ಬಂದರು. ಕರ್ತವ್ಯದ ಮೇಲಿದ್ದ ಪಿಎಸ್ಐ ಆನಂದ ಅವರನ್ನು ಕಂಡು ತಮ್ಮ ಮನೆಯಲ್ಲಿ ತನಗೆ ಸೇರಿದ್ದ 19 ಲಕ್ಷ ರೂ. ಬೆಲೆಬಾಳುವ ಸುಮಾರು 191 ಗ್ರಾಂ ಚಿನ್ನಾಭರಣಗಳನ್ನು ಅದ್ಯಾರೋ 35-40 ವರ್ಷದ ಮೂವರು ದರೋಡೆಕೋರರು ದೋಚಿಕೊಂಡು ಹೋಗಿದ್ದಾರೆ. ಈ ಸಂದರ್ಭದಲ್ಲಿ ತನ್ನ ಮೊಮ್ಮಗ ಲೋಕೇಶನು ತಡೆಯಲು ಮುಂದಾದಾಗ ಆತನ ಕಣ್ಣುಗಳಲ್ಲಿ ಖಾರದ ಪುಡಿ ಎರಚಿ, ಚಾಕುವಿನಿಂದ ಹಲ್ಲೆ ಮಾಡಿ ಬಲಗೈ ಮುಂಗೈಗೆ ಗಾಯ ಮಾಡಿ ಚಿನ್ನಾಭರಣದೊಂದಿಗೆ ಪರಾರಿಯಾಗಿದ್ದಾರೆ. ಆಗ ಸಮಯ ಬೆಳಗಿನ ಜಾವ 1.30 ಗಂಟೆಯಾಗಿತ್ತು ಎಂಬ ದೂರನ್ನು ನೀಡಿದಳು. ತಕ್ಷಣ ಅಲರ್ಟ್ ಆದ ಪಿಎಸ್ಐ ಆನಂದ ಬಿ. ವಿಷಯವನ್ನು ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೋಡ, ಗೋಕಾಕ ಡಿವೈಎಸ್ಪಿ ರವಿ ನಾಯಕ್, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಅ॥ ಎಸ್ಪಿ (ಕಾ.ಸು) ಶ್ರುತಿ ಎನ್.ಎಸ್.


ಅ॥ ಎಸ್ಪಿ (ಕ್ರೈಂ) ರಾಮನಗೌಡ ಬಸರಗಿ

### ಹಿರಿಯ ಅಧಿಕಾರಿಗಳ ದೌಡು...

ಅಂದು ಗೋಕಾಕದಲ್ಲಿಯೇ ಇದ್ದ ಎಸ್ಪಿ ಡಾ. ಭೀಮಾಶಂಕರ ಗುಳೇದ, ಡಿವೈಎಸ್ಪಿ ರವಿ ನಾಯಕ್ ತಕ್ಷಣ ಘಟನಾ ಸ್ಥಳ ಕೌಜಲಗಿಗೆ ಧಾವಿಸಿ ಬಂದರು. ಅಷ್ಟೊತ್ತಿಗೆ ಆಗಲೇ ಮೂಡಲಗಿಯ ಚತುರ ಮತ್ತು ಧಾಡಸಿ ಸಿಪಿಐ ಶ್ರೀಶೈಲ ಬ್ಯಾಕೋಡ, ಕುಲಗೋಡ ಪಿಎಸ್ಐ ಆನಂದ ಬಿ. ಮತ್ತು ಸಿಬ್ಬಂದಿಗಳು, ಎಫ್‌ಎಸ್‌ಎಲ್ ತಂಡದವರು ಹಾಜರಿದ್ದು ಪಂಚನಾಮೆ ಕಾರ್ಯ ನಡೆಸಿದ್ದರು. ಪಾರ್ವತೆವ್ವ ಹಳ್ಳೂರ ಇವರ ಒಂದನೆಯ ಮಹಡಿಯಲ್ಲಿದ್ದ ಬೆಡ್‌ರೂಮಿನ ಕಬೋರ್ಡ್‌ನಲ್ಲಿ ಇಟ್ಟಿದ್ದ ಚಿನ್ನಾಭರಣಗಳನ್ನು ದರೋಡೆಕೋರರು ದೋಚಿದ್ದರೆಂದು ದೂರು ನೀಡಲಾಗಿತ್ತು. ಮನೆಗೆ ಹಿಂಬಾಗಿಲು, ಮುಂಬಾಗಿಲು ಸೇರಿದಂತೆ ಎರಡು ಬಾಗಿಲುಗಳು ಇದ್ದವು. ಆದರೆ ಬಾಗಿಲುಗಳಿಗೆ ಒಂದು ಸಣ್ಣ ಹಾನಿ ಕೂಡಾ ಆಗದಿರುವುದು ಅಧಿಕಾರಿಗಳಿಗೆ ಅಚ್ಚರಿ ಮೂಡಿಸಿತು.

### ಸೂಕ್ಷ್ಮ ಪರಿಶೀಲನೆ... ಬಲವಾದ ಸಂಶಯ...

ಎಸ್ಪಿ ಡಾ. ಭೀಮಾಶಂಕರ ಗುಳೇದ, ಡಿವೈಎಸ್ಪಿ ರವಿ ನಾಯಕ್ ಮತ್ತು ಸಿಪಿಐ ಶ್ರೀಶೈಲ ಬ್ಯಾಕೋಡ, ಇಡೀ ಮನೆಯನ್ನೆಲ್ಲ ಜಾಲಾಡಿದರೂ ಕೂಡಾ ದರೋಡೆ ನಡೆದಿದೆ ಎನ್ನುವ ಸಣ್ಣ ಸುಳಿವು ಕೂಡಾ ದೊರೆಯಲಿಲ್ಲ. ಮನೆಯವರೇ ಈ ರೀತಿ ದರೋಡೆಯ ಕಟ್ಟುಕಥೆ ಕಟ್ಟಿ ನಾಟಕ ಮಾಡುತ್ತಿರಬಹುದು ಎಂಬ ಶಂಕೆ ಬಲವಾಗುತ್ತದೆ. ವಿವಿಧ ಆಯಾಮದಲ್ಲಿ ತನಿಖೆ ಮುಂದುವರೆಸಲು ಸಿಪಿಐ ಶ್ರೀಶೈಲ ಬ್ಯಾಕೋಡರಿಗೆ ನಿರ್ದೇಶನ ನೀಡಿದರು. ದರೋಡೆಕೋರರಿಂದ ಹಲ್ಲೆಗೊಳಗಾಗಿರುವ ಶಿಕ್ಷಕಿ ಪಾರ್ವತೆವ್ವ ಹಳ್ಳೂರ ಅವರ ಮೊಮ್ಮಗ ಲೋಕೇಶನ ಹೇಳಿಕೆ, ಆತನ ವರ್ತನೆ, ಕಣ್ಣುಗಳಲ್ಲಿ ಭಯ ಕಂಡು ಯಾಕೋ ಈತನ ಮೇಲೆ ಬಲವಾದ ಸಂದೇಹ ವ್ಯಕ್ತಪಡಿಸಿದ ಎಸ್ಪಿ ಡಾ. ಭೀಮಾಶಂಕರ, ಡಿವೈಎಸ್ಪಿ ರವಿ ನಾಯಕ್ ಅವರು ಲೋಕೇಶ್‌ನನ್ನು ವಿಚಾರಣೆ ಮಾಡಲು ಹೆಚ್ಚಿನ ನಿರ್ದೇಶನಗಳನ್ನು ಸಿಪಿಐ ಶ್ರೀಶೈಲ ಬ್ಯಾಕೋಡರಿಗೆ ತಿಳಿಸಿದರು.


ಡಿವೈಎಸ್ಪಿ ರವಿ ನಾಯಕ


ಸಿಪಿಐ ಶ್ರೀಶೈಲ ಬ್ಯಾಕೋಡ


ಪಿಎಸ್ಐ (ಕಾ.ಸು) ಆನಂದ ಬಿ.

### ಯಾರೀತ ಲೋಕೇಶ ದಳವಾಯಿ...

ಲೋಕೇಶ ಬಸವರಾಜ ದಳವಾಯಿ (24 ವ) ಪಿಯುಸಿವರೆಗೆ ಓದಿದ್ದನು. ಪಾರ್ವತೆವ್ವ ಹಳ್ಳೂರ ಅವರ ಸಹೋದರಿಯ ಮಗಳ ಮಗನಾಗಿದ್ದನು. ಒಂದು ರೀತಿ ಸಂಬಂಧದಲ್ಲಿ ಲೋಕೇಶ ಪಾರ್ವತೆವ್ವ ಅವರಿಗೆ ಮೊಮ್ಮಗನಾಗಬೇಕು. ಅವಿವಾಹಿತೆ ಆಗಿದ್ದ ಪಾರ್ವತೆವ್ವ ಹಳ್ಳೂರ ತನ್ನ ಮನೆಯಲ್ಲಿಟ್ಟುಕೊಂಡು ಅವನ ಬೇಕು ಬೇಡಿಕೆಗಳನ್ನು ಪೂರೈಸುತ್ತ ಸಾಕಿ ಬೆಳೆಸಿದ್ದಳು. ಲೋಕೇಶ ಮಹಾ ಐನಾತಿಯಾಗಿದ್ದನು. ಆನ್‌ಲೈನ್ ಜೂಜು ಮತ್ತು ಕ್ಯಾಸಿನೋಗಳಲ್ಲಿ ಲಕ್ಷಾಂತರ ರೂ.ಗಳನ್ನು ಕಳೆದುಕೊಂಡು ವಿಪರೀತ ಸಾಲಗಾರನಾಗಿದ್ದನು. ಜೂಜಾಟವನ್ನು ಮುಂದುವರೆಸಲು ಆತ ಹಣಕ್ಕಾಗಿ ಚಡಪಡಿಸುತ್ತಿದ್ದನು. ಇಂತಹ ಲೋಕೇಶ ತೀರಾ ಸಂಭಾವಿತನಂತೆ ಪೋಸು ಕೊಡುತ್ತ ತಮ್ಮ ಊರಾದ ಮುಗಳಿಹಾಳ ಬಿಟ್ಟು ಕೌಜಲಗಿಗೆ ಬಂದು ಠಿಕಾಣಿ ಹೂಡಿದ್ದನು. ಮನೆಯಲ್ಲಿ ಅಜ್ಜಿ ಪಾರ್ವತೆವ್ವ ಮತ್ತು ಲೋಕೇಶ್ ಇಬ್ಬರೇ ಇರುತ್ತಿದ್ದರು. ಇದಿಷ್ಟು ಪೂರ್ವಾಪರವನ್ನು ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್ಐ ಆನಂದ ಬಿ. ಹೆಕ್ಕಿ ತೆಗೆದಿದ್ದರು.

### ವಿಚಾರಣೆಯಲ್ಲಿ ದರೋಡೆ ಒಪ್ಪಿಕೊಂಡನು...

ಸಿಪಿಐ ಶ್ರೀಶೈಲ ಬ್ಯಾಕೋಡ ತಮ್ಮ ಸೇವಾವಧಿಯಲ್ಲಿ ಅನೇಕ ಜಟಿಲ ಪ್ರಕರಣಗಳನ್ನು ಭೇದಿಸಿದ್ದಾರೆ. ಇದೇನೂ ದೊಡ್ಡ ಪ್ರಕರಣ ಅಲ್ಲದಿದ್ದರೂ ಕೂಡಾ ಮೇಲ್ನೋಟಕ್ಕೆ ಜಟಿಲ ಎನಿಸುತ್ತಿತ್ತು. ದರೋಡೆ ನಾಟಕವನ್ನು ಮಾಡುತ್ತಿದ್ದ ಲೋಕೇಶನನ್ನು ವೈದ್ಯಕೀಯ ತಪಾಸಣೆ ನಡೆಸಿದಾಗ ತೀರಾ ಹೆದರಿದ್ದ ಈತ ತನ್ನ ಕೃತ್ಯವನ್ನು ಸಲೀಸಾಗಿ ಒಪ್ಪಿಕೊಂಡು 'ಯಾರು ತನ್ನ ಮೇಲೆ ದರೋಡೆಕೋರರು ಹಲ್ಲೆ ಮಾಡಿಲ್ಲ. ತನ್ನ ಕೈಗೆ ತಾನೇ ಚಾಕುವಿನಿಂದ ಇರಿದುಕೊಂಡಿದ್ದೇನೆ' ಎಂಬುದನ್ನು ಒಪ್ಪಿಕೊಂಡನು. ದರೋಡೆ ಮಾಡಿದ ಚಿನ್ನಾಭರಣವನ್ನು ಮುಚ್ಚಿಟ್ಟ ಸ್ಥಳ ತೋರಿಸಿದಾಗ ಪೊಲೀಸರು ಅದನ್ನು ಜಪ್ತಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು.

### ಲೋಕೇಶನ ಬಂಧನ...

ಸಿಪಿಐ ಶ್ರೀಶೈಲ ಬ್ಯಾಕೋಡ ಅವರು ಲೋಕೇಶ ದಳವಾಯಿಯ ಕೃತ್ಯವನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ರವಿ ನಾಯಕ್ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಕ್ರಮ ಕೈಗೊಂಡಿದ್ದಾರೆ. ಜೂಜುಕೋರ ಲೋಕೇಶನನ್ನು ಇದೀಗ ಜೈಲಿಗಟ್ಟಿದ್ದಾರೆ. ಸ್ವತಃ ಮೊಮ್ಮಗನೇ ತನ್ನ ಅಜ್ಜಿಯ ಚಿನ್ನಾಭರಣ ದೋಚಿದ್ದ ಕತ್ಯವನ್ನು ಪತ್ತೆಹಚ್ಚುವಲ್ಲಿ ಕುಲಗೋಡ ಪಿಎಸ್ಐಗಳಾದ ಆನಂದ ಬಿ. (ಕಾ.ಸು.), ವ್ಹಿ.ವ್ಹಿ. ಉತ್ರೇಶ್ವರ (ಕ್ರೈಂ), ಎಎಸ್ಐಗಳಾದ ಎ.ಡಿ. ಕೊಪ್ಪದ, ಅನೀಲ, ಮಡಿವಾಳ, ಸಿಬ್ಬಂದಿಗಳಾದ ಎಸ್.ವ್ಹಿ. ಹಣಜಿ, ಮಾಳಪ್ಪ ಆಡಿನ, ಕೆ.ಸಿ. ಬಾಗಲಿ, ಎಸ್.ಎನ್. ಬಡಬಡೆ, ಎಂ.ಎಸ್. ಕುರೆನ್ನವರ, ಎಸ್.ಎಫ್. ಮಳಲಿ, ಎಲ್.ಟಿ. ಪೂಜೇರಿ, ವ್ಹಿ.ಎಲ್. ಧೂಳಪ್ಪನವರ, ಎ.ಎಚ್. ವೇಷಧಾರಿ, ಬೆಳಗಾವಿ ಟೆಕ್ನಿಕ್ ಸೆಲ್‌ನ ವಿನೋದ ಠಕ್ಕನ್ನವರ ಮುಂತಾದವರು ತನಿಖಾಧಿಕಾರಿಗಳಿಗೆ ನೆರವಾಗಿದ್ದಾರೆ.


19 ಲಕ್ಷ ರೂ.ಗಳ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿರುವ ಕುಲಗೋಡ ಪೊಲೀಸರು

# ಓಯೋ ರೂಮ್ಸ್ ಕಾಮಕಾಂಡ ಗೃಹಿಣಿ ಹರಿಣಿ ಬರ್ಬರ ಹತ್ಯೆ!!

**ಬೆಂಗಳೂರಿನ ಸುಬ್ರಮಣ್ಯಪುರದ ಪೂರ್ಣ ಪ್ರಜ್ಞಾ ಲೇಔಟ್‌ನಲ್ಲಿರುವ 'ಓಯೋ ರೂಮ್ಸ್' ಹೋಟೆಲ್‌ನಲ್ಲಿ ಹರಿಣಿ ಎಂಬ ಗೃಹಿಣಿ ಕೊಲೆಯಾಗಿದ್ದಾಳೆ! ಆಕೆಯನ್ನು ಸಾಫ್ಟ್‌ವರ್ ಇಂಜಿನಿಯರ್ ಯಶಸ್ ಎಂಬಾತ ಸುಮಾರು 17 ಬಾರಿ ಚಾಕುವಿನಿಂದ ಇರಿದು ಕೊಂದಿದ್ದಾನೆ! ಅಕ್ರಮ ಸಂಬಂಧದಲ್ಲಿ ಉಂಟಾದ ಮುನಿಸೇ ಈ ಕೊಲೆಗೆ ಕಾರಣ ಎನ್ನಲಾಗಿದೆ! ಆರೋಪಿ ಯಶಸ್‌ನನ್ನು ಸುಬ್ರಮಣ್ಯ ಪುರ ಪೊಲೀಸರು ಬಂಧಿಸಿದ್ದಾರೆ. ಈ ಸುತ್ತ ಒಂದು ವರದಿ...**


ಕೊಲೆಯಾದ ಶ್ವೇತಾ

ಓಯೋ... ಅಂದ್ರೆ ಸಾಕು, ಕೆಲವರು ಅಯ್ಯಯ್ಯೋ... ಎಂದು ಮೂಗು ಮುರಿಯುತ್ತಾರೆ! ಇನ್ನೂ ಕೆಲವರು ನಾಚಿ ನೀರಾಗುತ್ತಾರೆ. ಯಾಕೆಂದರೆ, ಇಲ್ಲಿಗೆ ಪ್ರೇಮಿಗಳು/ಕಾಮಿಗಳಷ್ಟೇ ಬರುತ್ತಾರೆ ಎನ್ನುವುದು ಅವರ ತಲೆಯಲ್ಲಿ ಫಿಕ್ಸ್ ಆಗಿಬಿಟ್ಟಿರುತ್ತದೆ! ದುರಂತ ನೋಡಿ, ಯಾರೋ ಕೆಲವರು ಓಯೋ ರೂಂಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಕಾರಣಕ್ಕೆ ಇಂಥದ್ದೊಂದು ಕೆಟ್ಟ ಹೆಸರು 'ಓಯೋ ರೂಮ್ಸ್'ಗೆ ಅಂಟಿಕೊಂಡಿದೆ!

ಹಾಗೆ ನೋಡೋದಾದ್ರೆ ಕಡಿಮೆ ದರದಲ್ಲಿ ರೂಂಗಳು ಸಿಗುವುದು ಇಲ್ಲೇ! ಬೇರೆ ಬೇರೆ ಊರುಗಳಿಂದ ಸಿಟಿಗೆ ಬರುವ ಜನರಿಗೆ ಉಳಿದುಕೊಳ್ಳಲು ವಸತಿ ಎಷ್ಟು ಮುಖ್ಯ ಅಂತ ಗೊತ್ತಲ್ವಾ. ಅದಕ್ಕೆ ಓಯೋ ರೂಮ್ಸ್ ತುಂಬಾ ಸಹಾಯಕ ಎಂಬ ಮಾತುಗಳಿವೆ. ಆದರೆ, ಏನ್ಮಾಡೋದು... ಓಯೋ ಅಂದ್ರೆ ಮಾನವಂತರು ಮೂಗು ಮುರಿಯುತ್ತಾರೆ. ಮೈಲು ದೂರ ಓಡುತ್ತಾರೆ. ಕೆಲವರು ಅದು ಅಕ್ರಮ ಸಂಬಂಧಿಗಳು 'ಕೆಲಸ' ಮಾಡುವ ಜಾಗ ಅಂತ ಫೇಮಸ್ ಮಾಡಿರುವುದೇ ಇದಕ್ಕೆ ಕಾರಣ!

ಒಂದು ದಿನ ಅಥವಾ ಒಂದು ಗಂಟೆ ಬೇಕಾದ್ರೂ ಸ್ಟೇ ಮಾಡಲು ಇಲ್ಲಿ ಅವಕಾಶವಿದೆ. ಬೇರೆ ವಸತಿ ಗೃಹಗಳಲ್ಲಿ ಒಂದು ಗಂಟೆಗೆ ರೂಮ್ಸ್ ಕೊಡುವುದಿಲ್ಲ. ಕೊಟ್ಟರೂ ನೀವೂ ಒಂದು ದಿನದ ಬಾಡಿಗೆ ತೆರಲೇಬೇಕು. ಓಯೋ ರೂಮ್ಸ್‌ನ ಇನ್ನೊಂದು ಉಪಯೋಗ ಅಂದ್ರೆ, ಇಲ್ಲಿಗೆ ಬರುವವರು


ಓಯೋ ರೂಮ್ಸ್

ಮೊದಲೇ ಬುಕ್ ಮಾಡಬೇಕಿಲ್ಲ. ಬಂದ ತಕ್ಷಣ ರೂಮ್ ಸಿಗುತ್ತೆ! ಇದರಿಂದ ಅರ್ಜೆಂಟ್ ರೂಮ್ ಬೇಕಾದವರಿಗೆ ತುಂಬಾ ಸಹಾಯ ಆದಂತಾಗಲಿದೆ. ಬರೀ ಬೆಂಗಳೂರು ಅಷ್ಟೇ ಅಲ್ಲದೆ, ಇತರೆ ನಗರ/ಗ್ರಾಮೀಣ ಪ್ರದೇಶಗಳಲ್ಲಿಯು ಓಯೋ... ಕೊಠಡಿಗಳನ್ನು ಬಾಡಿಗೆಗೆ ನೀಡಲಾಗುತ್ತದೆ. ಆದರೆ, ಎಲ್ಲರಿಗೂ 24 ಗಂಟೆಗಳ ಕೊಠಡಿಗಳು ಅಗತ್ಯವಿರುವುದಿಲ್ಲ. ಕೆಲವರಿಗೆ 10 ಗಂಟೆ, ಇನ್ನೂ ಕೆಲವರಿಗೆ 01 ಗಂಟೆ ಸಾಕಾಗಿರುತ್ತದೆ! ತಮ್ಮ ಅಗತ್ಯಕ್ಕೆ ತಕ್ಕಂತೆ ಕೊಠಡಿಗಳನ್ನು ಪಡೆದು ಆ ಕೊಠಡಿಗಳಿಗೆ ಕಡಿಮೆ ಬಾಡಿಗೆ ನೀಡಿದ್ರೆ, ಸಾಕು. ಈ ಒಂದು ಗಂಟೆ ವ್ಯವಸ್ಥೆ ಇರುವುದರಿಂದಲೇ ಓಯೋ... ಗೆ ಬಹಳ ಬೇಡಿಕೆ. ಮತ್ತು ಕೆಟ್ಟ ಕಳಂಕ ಮೆತ್ತಿಕೊಂಡಿರಬಹುದು! ಅಂದಹಾಗೆ, ಇಂಥ ಸ್ಪೆಷಾಲಿಟಿ ಉಳ್ಳಂತ, ಪ್ರೇಮಿಗಳಿಗೆ ಬಹುಪಯೋಗಿ ಆದಂತ 'ಓಯೋ ರೂಮ್ಸ್' ಸಂಸ್ಥಾಪಕರು ಯಾರು ಗೊತ್ತ?

**ರಿತೇಶ್ ಅಗರ್ವಾಲ್!**

ಅವನ ವಯಸ್ಸಿನ್ನೂ 32. ಒಡಿಶಾ ಮೂಲದವನು. ಅವನ ತಂದೆ ಯಾವುದೋ ಬಿಸಿನೆಸ್‌ನಲ್ಲಿ ಕೈ ಸುಟ್ಟುಕೊಂಡು ಫುಟ್‌ಪಾತ್‌ಗೆ ಬಿದ್ದಿದ್ದನಂತೆ. ಸದರಿ ಲಾಸ್ ಅನ್ನು ಭರ್ತಿ ಮಾಡಿಕೊಳ್ಳಲು ಮಗಧೀರ ಜಗತ್ತಿನಾದ್ಯಂತ 'ಓಯೋ ರೂಮ್ಸ್' ಸ್ಥಾಪಿಸಿ ಬಿಸಿನೆಸ್ ಶುರುವಿತ್ತುಕೊಂಡನಂತೆ! ಇದೆಲ್ಲಾ ಈಗೇಕೆ ತಿಳಿಸ ಬೇಕಾಯ್ತು ಅಂದ್ರೆ, ಗ್ರಾಹಕರಿಗೆ ಬಹಳ ಸುಲಭವಾಗಿ ಹಾಗೂ ಗಂಟೆ ಲೆಕ್ಕದಲ್ಲಿ ಸಿಗುತ್ತಿರೋ 'ಓಯೋ ರೂಮ್ಸ್' ಒಂದರಲ್ಲಿ ಮರ್ಯಾದಸ್ತ ಕುಟುಂಬವೊಂದರ 'ಗೃಹಿಣಿ'ಯೊಬ್ಬಳ ಬರ್ಬರವಾಗಿ ಹತ್ಯೆ ನಡೆದಿದೆ! ಸೋ, ಓಯೋ ರೂಮ್ಸ್ ಇತಿಹಾಸ ನಿಮಗೂ ತಿಳಿದಿರಲಿ ಅಂದುಕೊಂಡು ಮೊದಲೇ ಬರೆಯಬೇಕಾಯ್ತು. ಮುಖ್ಯ ವಿಷಯಕ್ಕೆ ಹೋಗೋಣ ಬನ್ನಿ...


ಡಿಸಿಪಿ ಲೋಕೇಶ್ ಜಗಲಾಸರ

ಅವಳ ಹೆಸರು ಹರಿಣಿ. ಹೆಸರಿಗೆ ತಕ್ಕಂತೆ ಮುದ್ದು ಚೆಲುವೆ. ಬೆಂಗಳೂರು ಸಿಟಿ ಸುಬ್ರಹ್ಮಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪೂರ್ಣ ಪ್ರಜ್ಞಾ ಲೇಔಟ್‌ನಲ್ಲಿರುವ ಓಯೋ ರೂಮ್ಸ್ ಹೋಟೆಲ್‌ನಲ್ಲಿ ದಿನಾಂಕ 09/06/2025ರಂದು ಕೊಲೆಯಾಗಿದ್ದಾಳೆ! ಆಕೆ ಓಯೋ... ರೂಮ್ಸ್ ಪಡೆಯಲು ಬಳಸಿದ್ದ ವೋಟರ್ ಐಡಿಯಿಂದಾಗಿ ಆಕೆ ಹರಿಣಿ ಎಂಬುದು ಗೊತ್ತಾಗಿದೆ. ಅಂತಾ ಚೆಂದುಳ್ಳಿ ಚೆಲುವೆಯನ್ನು ಸುಮಾರು 17 ಸಲ ಚುಚ್ಚಿ ಕೊಲ್ಲಲಾಗಿತ್ತು!

ಯಶಸ್ ಎಂಬ ಕ್ರೂರಿ ಈ ಕುಕೃತ್ಯ ಗೈದಿದ್ದ ಸುಬ್ರಮಣ್ಯಪುರದ ಪಿಐ ರಾಜು ಅವರು ಆತನನ್ನು ಹೆಡೆಮುರಿಕಟ್ಟಿ ಬಂಧಿಸಿದ್ದಾರೆ. ಆತ ನಗರದ ಪ್ರತಿಷ್ಠಿತ ಸಂಸ್ಥೆಯೊಂದರ ಟೆಕ್ಕಿಯಾಗಿದ್ದ. ಹರಿಣಿಗೂ ಇವನಿಗೂ ಫೇಸ್‌ಬುಕ್‌ನಲ್ಲಿ ಫ್ರೆಂಡ್‌ಶಿಪ್ ಆಗಿತ್ತು ಅನ್ನುತ್ತೆ! ಇನ್ನೊಂದು ಮೂಲದ ಪ್ರಕಾರ, ಜಾತ್ರೆಯಲ್ಲಿ ಪರಿಚಯ ಆಗಿತ್ತಂತೆ! ಇವ ಎಳೆ ಹುಡುಗ. ಅವಳು ಎರಡು ಮಕ್ಕಳ ತಾಯಿ. ಕಾಮಕ್ಕೆ ಕಣ್ಣಿಲ್ಲವಲ್ಲ, ಅಂಟು ನಂಟು ಆಗಿ ಗಂಟು ಬಿದ್ದಿದ್ದಾರೆ.



ಓಯೋ ರೂಮ್ಸ್ ಸಂಸ್ಥಾಪಕ ರಿತೇಶ್ ಅಗರ್ವಾಲ್

ಮೂಲತಃ ಮೈಸೂರು ಸ್ಯಾಂಡಲ್ ಹರಿಣಿ ಮೂಲತಃ ಮೈಸೂರಿನವಳು. 2012ರಲ್ಲಿ ದಾಸೇಗೌಡ ಎಂಬುವರ ಜೊತೆ ಅವಳ ಮದುವೆ ಆಗಿತ್ತು. ಈ ದಂಪತಿಗೆ 13 ಹಾಗೂ 10 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ದಾಸೇಗೌಡ, ಕೃಷಿ ಜತೆಗೆ ಉದ್ಯಮ ಮಾಡಿಕೊಂಡಿದ್ದಾರೆ ಎನ್ನಲಾಗಿದೆ! ಈಗ್ಗೆ ಮೂರು ವರ್ಷಗಳ ಹಿಂದೆ ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿ ನಡೆದಿದ್ದ ಜಾತ್ರೆಗೆ ಹರಿಣಿ ಅವರು ಕುಟುಂಬ ಸದಸ್ಯರೊಂದಿಗೆ ಬಂದಿದ್ದರು. ಕೆಂಗೇರಿಯ ಆರೋಪಿ ಯಶಸ್ ಸಹ ಜಾತ್ರೆಗೆ ಹೋಗಿದ್ದ. ಆಗ ಜಾತ್ರೆಯಲ್ಲಿ ಸ್ನೇಹಿತರೊಬ್ಬರ ಮೂಲಕ ಹರಿಣಿ ಮತ್ತು ಯಶಸ್ ಮಧ್ಯೆ ಪರಿಚಯವಾಗಿತ್ತು ಎನ್ನಲಾಗಿದೆ. ಹಾಗೆ ಪರಿಚಯವಾದ ಬಳಿಕ ಪರಸ್ಪರರು ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡು 'ವಾಟ್ಸಪ್ ಚಾಟಿಂಗ್' ಮೂಲಕ ಸ್ನೇಹವನ್ನು ವೃದ್ಧಿಸಿಕೊಂಡಿದ್ದಾರೆ. ನಿತ್ಯವೂ ತಪ್ಪದೇ ಕರೆ ಮಾಡಿ ಮಾತನಾಡುತ್ತಿದ್ದರು. ಕಾಲ ಕ್ರಮೇಣ ಇಬ್ಬರ ನಡುವೆ ಪ್ರೇಮಾಂಕುರವಾಗಿ ಅನೈತಿಕ ಸಂಬಂಧ ಬೆಳೆಸಿದ್ದಾರೆ. ಚಾನ್ಸ್ ಸಿಕ್ಕಿದಾಗೆಲ್ಲ 'ಓಯೋ ರೂಮ್ಸ್' ಸೇರಿಕೊಂಡು ಓಯೆ ಓಯೆ ಸಾಂಗ್ ಹಾಡಿದ್ದಾರೆ!

ಇಬ್ಬರೂ ಹಾಗೆ ಸಂತಸ ಹೊಂದುತ್ತ ಹಾಯಾಗಿ ಕಾಲ ದೂಡುತ್ತಿರುವಾಗ ಅಕ್ರಮ ಸಂಬಂಧದ ಮಾಹಿತಿ ಹರಿಣಿ ಗಂಡನ ಕಿವಿಗೆ ಬಿದ್ದಿತ್ತು! ಅವರು ಬೈದು ಬುದ್ಧಿ ಹೇಳಿದ್ದಾರೆ. ಮರ್ಯಾದಸ್ತ ಕುಟುಂಬದ ಸೊಸೆ, ಎರಡು ಮಕ್ಕಳ ತಾಯಿ ನೀನು, ಹುಷಾರಾಗಿರು... ಎಂದು ತಿಳುವಳಿಕೆ ಹೇಳಿದ್ದರು. ಹರಿಣಿ ಕೂಡ ಸದ್ಗೃಹಿಣಿಯೇ. ಏನು ಮಾಡುವುದು ಕರ್ಮ. ಹಂದಿಗಳ ಜೊತೆ ಸೇರಿಕೊಂಡು ಕೆಂದಗರ ಹೇಲು ತಿಂತು ಅಂತಾರಲ್ಲ, ಹಾಗಾಗಿತ್ತು ಆಕೆಯ ಬಾಳು!

**ಮುಖ ನೋಡಲಾಗದೆ ಚಡಪಡಿಕೆ**

ಯಾವಾಗ ಗಂಡ ಉಗಿದು ಉಪ್ಪಿನಕಾಯಿ ಹಾಕಿದನೋ, ಹರಿಣಿ ಎಚ್ಚರಿಸಿಕೊಂಡಳು. ತನ್ನ ಸಂಸಾರ ಹೊಡೆದರೆ ಮಕ್ಕಳು ಅನಾಥ ಆಗಿಬಿಡ್ತವೆ ಎಂದು ಹೆದರಿ ಕೂಡಲೇ ಬದಲಾಗಿಬಿಟ್ಟಳು. ಪತ್ನಿಯ ನಡೆಯ ಬಗ್ಗೆ ಪತಿ ದಾಸೇಗೌಡ ಅವರಿಗೆ ಅನುಮಾನ ಮೂಡಿತ್ತಲ್ಲ, ಅವರು ಪತ್ನಿಯ ಮೊಬೈಲ್ ಕಿತ್ತುಕೊಂಡು ಮನೆಯಲ್ಲೇ ಇರುವಂತೆ ಬುದ್ಧಿ ಹೇಳಿ ಕೂಡಿ ಹಾಕಿದ್ದರು. ತವರು ಮನೆಯವರು ಸಹ


ಆರೋಪಿ ಟೆಕ್ಕಿ ಯಶಸ್

ಹರಿಣಿಗೆ ಬುದ್ಧಿ ಹೇಳಿದ್ದರು. ಈ ಬಳಿಕ ಹರಿಣಿ ಸಂಪರ್ಕಕ್ಕೆ ಸಿಗದೆ ಯಶಸ್ ವಿಲ ವಿಲ ಒದ್ದಾಡಿದ್ದ. ಅವಳನ್ನು ಮಾತನಾಡಿಸಲು, ಮುದ್ದಾಡಲು ಸಾಧ್ಯವಾಗದೆ ಚಡಪಡಿಸಿದ್ದ. ಹರಿಣಿ ಅವರ ಮನೆ ಬಳಿಗೇ ತೆರಳಿ ಆಕೆಗಾಗಿ ಹುಡುಕಾಡಿದ್ದ. ಆದರೂ ಅವರು ಈತನ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಯಶಸ್ ಹರಿಣಿ ಮುಖ ನೋಡಲಾಗದೆ ಹುಚ್ಚನಾಗಿ ಹೋಗಿದ್ದ...

**ಮತ್ತೆ ಕೂಗಿತ್ತು ಓಯೋ!**

ಪತಿ ಪತ್ನಿ ನಡುವೆ ವೈಮನಸ್ಯ ಮೂಡಿ ಸಂಸಾರ ರಸ ಕಳೆದುಕೊಳ್ಳುತ್ತಿದ್ದಾಗ, ಹರಿಣಿಯವರು ತನ್ನ ಪತಿಯ ಬಳಿ ಕ್ಷಮೆ ಕೇಳಿದ್ದು, ಇನ್ನು ಮುಂದೆ ಈ ರೀತಿ ಮಾಡಲ್ಲ ಎಂದು ಮಾತು ಕೊಟ್ಟಿದ್ದರಂತೆ. ಆದರೆ, ಪತಿಗೆ ಗೊತ್ತಾಗದಂತೆ ಎರಡು ತಿಂಗಳ ಹಿಂದೆ ಮತ್ತೆ ಮನೆಯಿಂದ ಹೊರಬಿದ್ದು ಟೆಕ್ಕಿ ಯಶಸ್‌ನನ್ನು ಭೇಟಿಯಾಗಿ ಓಯೆ... ಓಯೆ... ಹಾಡಿದ್ದಳು! ಈ ನಂತರ ಇಬ್ಬರ ನಡುವೆ ಮತ್ತೆ ಚಾಟಿಂಗ್ ಕಂಟಿನ್ಯೂ ಆಗಿತ್ತು! ಪ್ರಾಮಿಸ್ ಮಾಡಿಯೂ ಮತ್ತೆ ಅದೇ ತಪ್ಪನ್ನು ಮಾಡ್ತಿದ್ದ ಹರಿಣಿಗೆ ಆ ಪಾಪ ಪ್ರಜ್ಞೆ ಅತಿಯಾಗಿ ಕಾಡಿರಬೇಕು. ತನ್ನನ್ನು ಕಾಡುತ್ತಿದ್ದ ಯಶಸ್ ಗೆ ಕಡೆಯದಾಗಿ ಹೇಳಿ ಅವನ ಸಾಂಗತ್ಯ ಬಿಟ್ಟು ಬಿಡುವ ನಿರ್ಧಾರ ಮಾಡಿದ್ದಾಳೆ.

**ಇದೇ ನಮ್ಮ ಕೊನೆಯ ಭೇಟಿ**

ಮೊನ್ನೆ 9ನೇ ತಾರೀಖು ಹೇಗೋ ಗಂಡನ ಕಣ್ ತಪ್ಪಿಸಿ ಸುಬ್ರಮಣ್ಯಪುರಕ್ಕೆ ಆಗಮಿಸಿರುವ ಹರಿಣಿ, ಅಲ್ಲಿಗೆ ಯಶಸ್‌ನನ್ನು ಕರೆಸಿಕೊಂಡು, ಇಬ್ಬರೂ ಓಯೋ ರೂಮ್ಸ್ ಸೇರಿಕೊಂಡಿದ್ದಾರೆ. ನಮ್ಮ ವಿಷಯ ನನ್ನ ಗಂಡನಿಗೆ ಹಾಗೂ ಅಪ್ಪ ಅಮ್ಮ ಎಲ್ಲರಿಗೂ ಗೊತ್ತಾಗಿದೆ ಮಾರಾಯ... ಪ್ರಾಬ್ಲಮ್



ಆಗಿದೆ... ಪ್ಲೀಸ್, ಇನ್ಮುಂದೆ ನಾವು ಸೇರೋದು ಬೇಡ. ಇದೇ ಕೊನೆ ಭೇಟಿ... ಎಂದಿದ್ದಳು! ಇದನ್ನು ಒಪ್ಪದೆ, ನೀನಿಲ್ಲದೆ ನಾನಿಲ್ಲ.. ಹೀಗಂದ್ರೆ ಯಂಗೆ... ನಾನು ಸತ್ತೋಗ್ತೀನಿ ಅಷ್ಟೇ... ಮುಂತಾದ ಡೈಲಾಗ್ ಹೊಡೆದು ಅರೆ ಹುಚ್ಚನಂತೆ ಪೇಡಿದ್ದ ಯಶಸ್, ಅಂದು ಆ ಕೊಠಡಿಯಲ್ಲಿ ಹರಿಣಿ ಅವರೊಂದಿಗೆ ದೈಹಿಕ ಸಂಪರ್ಕ ಬೆಳೆಸಿ ಮನಸೋ ಇಚ್ಛೆ ಬೆವರು ಸುರಿಸಿದ್ದ. ಆಗಲೂ ಹರಿಣಿ ಇದು ತಮ್ಮ ಕೊನೆಯ ಭೇಟಿ. ಮತ್ತೊಮ್ಮೆ ಸಿಗಲು ಸಾಧ್ಯವಿಲ್ಲ. ಕುಟುಂಬ ಸದಸ್ಯರಿಗೆ ವಿಷಯ ಗೊತ್ತಾಗಿದೆ. ನಾವು ಫ್ರೆಂಡ್‌ಶಿಪ್ ಮುಂದುವರೆಸುವುದು ಬೇಡ ಯಶ್.... ಎಂದು ಕನವರಿಸುತ್ತಿದ್ದರಂತೆ!

**ಎಲ್ಲಾ ಕಡೆಯೂ ಚುಚ್ಚಿದ್ದ!**

ಇದರಿಂದ ಮತ್ತಷ್ಟು ಕೆರಳಿ ವಿಚಲಿತನಾಗಿರುವ ಯಶಸ್, ಹರಿಣಿಯನ್ನು ಮನಬಂದಂತೆ ಇರಿದು ಕೊಲೆ ಮಾಡಿದ್ದಾನೆ. ಹೊಟ್ಟೆ, ಎದೆ, ಮರ್ಮಾಂಗ ಸೇರಿದಂತೆ ಸಿಕ್ಕ ಸಿಕ್ಕ ಕಡೆಗೆ ಸುಮಾರು 17 ಬಾರಿ ಚಾಕು ಇರಿದಿದ್ದಾನೆ! ಕೊಲೆ ಮಾಡಿದ ಬಳಿಕ ಪೊಲೀಸ್ ಠಾಣೆಗೆ ಶರಣಾಗಲು ಸುಬ್ರಮಣ್ಯಪುರ ಪೊಲೀಸ್ ಠಾಣೆಯತ್ತ ತೆರಳಿ, ಹೆದರಿಕೊಂಡು ವಾಪಸ್ ಆಗಿದ್ದಾನೆ! ಏನು ಮಾಡಬೇಕೆಂದು ಹೊಳೆಯದೆ ಗಾಬರಿಗೊಂಡು ನರಳುತ್ತಿದ್ದ ಯಶಸ್, ಕಾರಿನಲ್ಲಿ ಕೆಂಗೇರಿ ಉಪನಗರದಲ್ಲಿನ ತನ್ನ ಮನೆಗೆ ಹೋಗಿ, ಅಲ್ಲಿ ಕೆಲ ಹೊತ್ತು ಕಳೆದಿದ್ದಾನೆ. ನಂತರ ಕೆಂಗೇರಿ ಪೊಲೀಸ್ ಠಾಣೆವರೆಗೂ ಬಂದು ಒಳ ಹೋಗಲು ಧೈರ್ಯವಿಲ್ಲದೆ ವಾಪಸ್ ಹೋಗಿದ್ದಾನೆ! ನಂತರ ಧೈರ್ಯ ಮಾಡಿ ಕೆಂಗೇರಿ ಠಾಣೆಗೆ ಕರೆ ಮಾಡಿ ತಾನೂ ಮಹಿಳೆಯನ್ನು ಕೊಲೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ!

**ಆತ್ಮಹತ್ಯೆ ಯತ್ನ**

ಪೊಲೀಸ್ ಜೀಪ್ ಬರುವಷ್ಟರಲ್ಲಿ ಮುಂದೇನಾಗುತ್ತೋ... ಎಂದು ಹೆದರಿಕೊಂಡು ಅಥವಾ ಹರಿಣಿ ಆಂಟಿ ಇಲ್ಲದೆ ಬದುಕುವುದೇಗೆ ಅಂತಲೋ ಏನೋ, ಆಸಾಮಿ ಆತ್ಮಹತ್ಯೆಗೆ ಯತ್ನಿಸಿದ್ದ! ಹರಿಣಿ ಅಂಗಾಂಗ ಬಗೆದಿದ್ದ ಅದೇ ಚಾಕುವಿನಿಂದ ತನ್ನ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದನಂತೆ! ಅಷ್ಟರಲ್ಲಿ ಅವನ ಮನೆಗೆ ತೆರಳಿದ್ದ ಪೊಲೀಸರು ಆತನನ್ನು ವಶಕ್ಕೆ ಪಡೆದು, ಹತ್ತಿರದ ಆಸ್ಪತ್ರೆಗೆ ಒಯ್ದು ದಾಖಲಿಸಿದ್ದಾರೆ. ಈ ನಂತರ ಆರೋಪಿ ಯಶಸ್ ಚೇತರಿಸಿಕೊಂಡಿದ್ದು, ಆತನನ್ನು ಬಂಧಿಸಿ ವಿಚಾರಣೆ ನಡೆಸಿ ಆತನ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ.

**ನನಗೆ ಸಿಗದವಳು ಇನ್ಯಾರಿಗೂ ಸಿಗಬಾರದು**

ಕುಟುಂಬದಲ್ಲಿ ಸಮಸ್ಯೆಯಾದ ಕಾರಣಕ್ಕೆ ಹರಿಣಿ, ನನ್ನಿಂದ ಅಂತರ ಕಾಯ್ದುಕೊಳ್ಳಲು ಆರಂಭಿಸಿದ್ದಳು. ಇದರಿಂದ ವಿಚಲಿತನಾಗಿದ್ದ ನಾನು, ನನ್ನ ಹರಿಣಿ ಮತ್ತೆ ನನ್ನ ಸಂಪರ್ಕಕ್ಕೆ ಸಿಗುವುದಿಲ್ಲ ಎಂದು ಭಾವಿಸಿ, ಹೇಗಾದರೂ ಮಾಡಿ



ಅವಳನ್ನು ಕರೆಸಿಕೊಂಡು ಕೊಲೆ ಮಾಡಲು ಸಂಚು ರೂಪಿಸಿದ್ದೆ. ಕೊಲೆಗೆ ಒಳ್ಳೆ ಚಾಕು ಖರೀದಿಸಿ, ಓಯೋ ಹೋಟೆಲ್‌ನಲ್ಲಿ ಎರಡು ದಿನಕ್ಕೆ ರೂಂ ಬುಕ್ ಮಾಡಿದ್ದೆ. ಜೂನ್ 6ರಂದು ಹರಿಣಿ ಅವರನ್ನು ಸಂಪರ್ಕಿಸಿ, ಕೊನೆಯದಾಗಿ ಮಾತನಾಡುವ ನೆಪದಲ್ಲಿ ಹೋಟೆಲ್‌ನ ಕೊಠಡಿಗೆ ಕರೆದೊಯ್ದಿದ್ದೆ. ನಾವು ದೂರವಾಗೋದು ಬೇಡ ಬೇಡ ಎಂದು ಎಷ್ಟು ಹೇಳಿದ್ರು ಆಕೆ ಕೇಳಲಿಲ್ಲ.. ನನಗೇ ಸಿಗದವಳು ಇನ್ನಾರಿಗೂ ಸಿಗಬಾರದು ಎಂದು ಕೊಂದು ಬಿಟ್ಟೆ.. ಎಂಬುದಾಗಿ ಪೊಲೀಸ್ ಅಧಿಕಾರಿಗಳಿಗೆ ವಿವರಿಸಿ ತಪ್ಪೊಪ್ಪಿಕೊಂಡಿದ್ದಾನೆ, ಟೆಕ್ಕಿ ಯಶಸ್!

## ಮೈಸೂರಿನ ಹನಿಟ್ರ್ಯಾಪ್ ಅಡ್ಡಾದಲ್ಲಿ ಖತರ್‌ನಾಕ್ ಪೊಲೀಸ್ ಪೇದೆ

# ಬಟ್ಟೆ ವ್ಯಾಪಾರಿಗೆ ಹನಿ ಖೆಡ್ಡಾ!



**ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಹನಿಟ್ರ್ಯಾಪ್ ಪ್ರಕರಣಗಳು ಬಹಳಷ್ಟು ನಡೆದಿದ್ದು ಇದೀಗ ಪೊಲೀಸ್ ಪೇದೆ ಸೇರಿದಂತೆ ಮೂರು ಜನ ಖತರ್‌ನಾಕ್‌ಗಳು ಹುಡುಗಿ ಮೂಲಕ ಬಟ್ಟೆ ವ್ಯಾಪಾರಿಯನ್ನು ಖೆಡ್ಡಾಕ್ಕೆ ಕೆಡವಿ 10ಲಕ್ಷಕ್ಕೆ ಡಿಮ್ಯಾಂಡ್ ಮಾಡಿ ಇದೀಗ ಪೊಲೀಸ್ ಅತಿಥಿಯಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯಲ್ಲಿ ನಡೆದಿದ್ದು ಜನ ಬೆಚ್ಚಿಬೀಳುವಂತೆ ಮಾಡಿದೆ. ಹಾಗೆಯೇ ಪೊಲೀಸ್ ಪೇದೆ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಅಧಿಕಾರಿಗಳು ತಲೆಕೆಡಿಸಿಕೊಳ್ಳುವಂತಾಗಿದೆ.**

✍ ಬಿ.ಎಂ. ಲವಕುಮಾರ್


ಪ್ರಮುಖ ಆರೋಪಿ ಮೂರ್ತಿ

ಹನಿಟ್ರ್ಯಾಪ್ ಜಾಲ ಆಕ್ಟೋಪಾಸ್‌ನಂತೆ ಹರಡಿಕೊಂಡಿದ್ದು ಯಾವಾಗ, ಯಾರನ್ನು ಟಾರ್ಗೆಟ್ ಮಾಡುತ್ತಾರೆ ಎಂಬುದನ್ನು ಹೇಳಲಾರದ ಸ್ಥಿತಿ ನಿರ್ಮಾಣವಾಗಿದೆ. ಉದ್ಯಮಿ, ಅಧಿಕಾರಿಗಳು, ರಾಜಕಾರಣಿಗಳು ಸೇರಿದಂತೆ ಹಣವಿರುವವರಿಗೆ ಖೆಡ್ಡಾ ತೋಡುತ್ತಿರುವ ದಂಧೆಕೋರರು ಯುವತಿಯರು, ಮಹಿಳೆಯರನ್ನು ಮುಂದೆ ಬಿಟ್ಟು ಅವರ ಮೂಲಕವೇ ತಮ್ಮ ತಂತ್ರ ರೂಪಿಸುತ್ತಿದ್ದಾರೆ. ಇಲ್ಲಿ ಮಾಯಾಂಗನೆಯರ ಮಾತಿಗೆ ಕರಗಿ ಅವರು ಕರೆದಲ್ಲಿಗೆ ಹೋದರೆ ಅವರ ಕಥೆ


ಆರೋಪಿಗಳಾದ ಪೊಲೀಸ್ ಶಿವಣ್ಣ ಹಾಗೂ ಗಣೇಶ್ ಗೌಡ

ಮುಗಿದಂತೆಯೇ...

ಹೊಟ್ಟೆಪಾಡಿಗೋಸ್ಕರ ವೇಶ್ಯಾವಾಟಿಕೆ ನಡೆಸಿಕೊಂಡು ತಮ್ಮ ಬಳಿಗೆ ಬರುವ ಗಂಡಸರನ್ನು ತೃಪ್ತಿಪಡಿಸಿ ಅವರು ನೀಡುವ ಹಣದಿಂದ ಬದುಕು ಕಟ್ಟಿಕೊಂಡಿರುವ ಹೆಂಗಸರಿದ್ದಾರೆ. ಅವರು ಯಾವತ್ತೂ ಯಾವ ಗಂಡಸನ್ನು ಬ್ಲಾಕ್‌ಮೇಲ್ ಮಾಡಿ ಹಣ ಕೀಳುವ ಕೆಲಸಕ್ಕೆ ಹೋಗುವುದಿಲ್ಲ. ಆದರೆ ಮೇಲ್ನೋಟಕ್ಕೆ ಹೈಫೈ ಜೀವನ ನಡೆಸುವ ಕೆಲವು ಮಾಯಾಂಗನೆಯರು ತಮ್ಮ ಶರೀರ ತೋರಿಸಿ ದೊಡ್ಡ ದೊಡ್ಡ ಮಿಕಗಳಿಗೆ ಬಲೆ ಹೆಣೆದು

☞ 14

## ಇದು ಮಾಯಾಂಗನೆಯರ ವಿಷವರ್ತುಲ!


ಸಾಮಾಜಿಕ ಜಾಲತಾಣಗಳಲ್ಲಿ ಪುರುಷರಿಗೆ ಬಲೆ ಬೀಸಿ ಅವರೊಂದಿಗೆ ಫ್ರೆಂಡ್‌ಶಿಪ್ ಬೆಳೆಸಿ ಅವರನ್ನು ಖೆಡ್ಡಾಕ್ಕೆ ಕೆಡವಿಕೊಂಡು ಬಳಿಕ ಅವರಿಂದ ಹಣ ಪೀಕುವುದು ಈಗ ದೊಡ್ಡ ದಂಧೆಯಾಗಿ ಬೆಳೆಯುತ್ತಿದೆ. ಈ ಹನಿಟ್ರ್ಯಾಪ್ ಎಂಬ ಬಲೆಯಲ್ಲಿ ಸಿಲುಕಿ ಒದ್ದಾಡಿದವರು ಅದೆಷ್ಟು ಜನರಿದ್ದಾರೋ ಗೊತ್ತಿಲ್ಲ. ಮಾಯಾಂಗನೆಯನ್ನು ಮುಂದೆ ಬಿಟ್ಟು ಹಣ ಮಾಡುವ ಈ ದಂಧೆಯ ಕಬಂಧ ಬಾಹುಗೆ ಸಿಲುಕಿದ ಪುರುಷರು ಮಾನ ಮರ್ಯಾದೆಗೆ ಹೆದರಿ ಬಾಯಿ ಬಿಡದ ಕಾರಣದಿಂದ ದಂಧೆಕೋರರು ಪೊಲೀಸರಿಗೆ ಸಿಕ್ಕಿ ಬೀಳದೆ ತಪ್ಪಿಸಿಕೊಳ್ಳುತ್ತಿದ್ದಾರೆ.

ಯುವತಿ ಅಥವಾ ಮಹಿಳೆಯರನ್ನು ಬಳಸಿಕೊಂಡು ಅವರ ಮೂಲಕವೇ ನಗ್ನ ಪೋಟೋಗಳನ್ನು ತೆಗೆದು ಅದನ್ನಿಟ್ಟುಕೊಂಡು ಹಣ ಮಾಡುವುದು ಈ ದಂಧೆಕೋರರ ಕೆಲಸವಾಗಿದೆ. ಈ ದಂಧೆಕೋರರು ಮರ್ಯಾದಸ್ಥರನ್ನೇ ಟಾರ್ಗೆಟ್ ಮಾಡುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ ಹಣವಿರುವ ಶ್ರೀಮಂತ ಗಂಡಸರನ್ನೇ ಟಾರ್ಗೆಟ್ ಮಾಡುತ್ತಾರೆ. ಇಲ್ಲಿ ಯುವತಿಯರನ್ನು ಮುಂದಿಟ್ಟುಕೊಂಡು ಗಂಡಸರೇ ಚಾಟ್ ಮಾಡಲು ಆರಂಭಿಸುತ್ತಾರೆ. ಹುಡುಗಿಯೇ ನಮ್ಮೊಂದಿಗೆ ಚಾಟ್ ಮಾಡುತ್ತಾಳೆಂದು ಖುಷಿ ಪಡುವ ಅತ್ತಲಿನ ಬಕ್ರ ಎಲ್ಲವನ್ನು ಹಂಚಿಕೊಳ್ಳುತ್ತಾನೆ. ಒಳ ಮರ್ಮ ಅರಿಯದೆ ತುಂಬಾ ಕ್ಲೋಸ್ ಆಗಿಯೇ ಮುಂದುವರೆಯುತ್ತಾರೆ. ಆತ ಬುಟ್ಟಿಗೆ ಬೀಳುತ್ತಿದ್ದಾನೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಮುಹೂರ್ತ ನಿಗದಿ ಮಾಡಿ ಖೆಡ್ಡಾಕ್ಕೆ ಕೆಡವಿಕೊಂಡು ಆತನಿಂದ ಹಣ ವಸೂಲಿ ಮಾಡುವುದೇ ದಂಧೆಯಾಗಿದೆ. ಇಂತಹ ಪ್ರಕರಣಗಳು ದೇಶದಾದ್ಯಂತ ನಡೆಯುತ್ತಿದ್ದು ಅದರಲ್ಲೂ ಮೈಸೂರಿನಲ್ಲಿ ಈಗಾಗಲೇ ಇಂತಹ ಹಲವು ಪ್ರಕರಣಗಳು ಬೆಳಕಿಗೆ ಬಂದಿವೆ. ಸಾಮಾಜಿಕ ಜಾಲತಾಣಗಳು ಆಕ್ಟೀವ್ ಆದಂತೆ ಅದನ್ನು ಸದುಪಯೋಗಕ್ಕಿಂತ ಹೆಚ್ಚಾಗಿ ದುರುಪಯೋಗ ಮಾಡುತ್ತಾ ಆ ಮೂಲಕ ಲಕ್ಷ ಲಕ್ಷ ಹಣ ಪೀಕುವ ದಂಧೆಗೆ ಹಲವು ಕೈಹಾಕಿದ್ದಾರೆ. ಇಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಹಣದ ಜತೆಗೆ ಮಾನ ಮರ್ಯಾದೆಯೂ ಹರಾಜಾಗಿ ಬಿಡುತ್ತದೆ.

ಈ ದಂಧೆಯಲ್ಲಿ ತೊಡಗಿರುವವರು ತಮ್ಮ ಜಾಲಕ್ಕೆ ಬೀಳಿಸುವ ವ್ಯಕ್ತಿ ಶ್ರೀಮಂತನಾಗಿರಬೇಕು, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರಬೇಕು, ಹೆಂಡತಿ ಮಕ್ಕಳು ಎಲ್ಲರೂ ಇದ್ದು ಮಾನಮರ್ಯಾದೆಗೆ ಅಂಜುವ ವ್ಯಕ್ತಿಯಾಗಿರಬೇಕು. ಇಂತಹ ವ್ಯಕ್ತಿಗಳನ್ನು ಟಾರ್ಗೆಟ್ ಮಾಡಿಕೊಂಡು ಅವರ ಪೂರ್ವಾಪರ ಅರಿತೇ ಅವರನ್ನು ಖೆಡ್ಡಾಕ್ಕೆ ಕೆಡವಲು ತಂತ್ರ ರೂಪಿಸುತ್ತಾರೆ. ಯುವತಿಯರು, ಮಹಿಳೆಯರು ಇದರಲ್ಲಿ ಪಳಗಿದವರು ಆಗಿರುವುದರಿಂದ ಮತ್ತು ಲಕ್ಷ ಲಕ್ಷ ಹಣ ಪೀಕಿಸುವುದೇ ಉದ್ದೇಶ ಆಗಿರುವುದರಿಂದ ಅವರು ಎಲ್ಲದಕ್ಕೂ ತಯಾರಾಗಿರುತ್ತಾರೆ.

ಯುವತಿ ಅಥವಾ ಮಹಿಳೆಯ ಜತೆ ಕ್ಲೋಸ್ ಆಗಿ ಮುಂದುವರೆಯುವ ಆ ವ್ಯಕ್ತಿಗೆ ಸ್ವಲ್ಪವೂ ಸಂಶಯ ಬಾರದಂತೆ ನಟಿಸುತ್ತಾ ನಂಬಿಕೆ ಹುಟ್ಟಿಸಿ ತಾನಿರುವಲ್ಲಿಗೆ ಕರೆಯಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಅಪ್ಪಿತಪ್ಪಿ ಹೆಣ್ಣಿನ ಆಶೆಗೆ ಬಿದ್ದು ಅವಳು ಹೇಳಿದಲ್ಲಿಗೆ ಹೋದರೆ ಅವನ ಕಥೆ ಮುಗಿದಂತೆಯೇ. ಮೊದಲೆಲ್ಲ ಈ ರೀತಿಯ ಪ್ರಕರಣಗಳು ಕೇವಲ ದೊಡ್ಡ ದೊಡ್ಡ ನಗರಗಳಲ್ಲಿ ನಡೆಯುತ್ತಿದ್ದವು. ಇದೀಗ ತಾಲೂಕು, ಗ್ರಾಮೀಣ ಮಟ್ಟಕ್ಕೂ ಬಂದಿರುವುದು ಆತಂಕಕಾರಿಯಾಗಿದೆ. ಹೆಣ್ಣು ಮಕ್ಕಳು ಹಣಕ್ಕಾಗಿ ಇಂತಹ ಕೀಳು ಮಟ್ಟಕ್ಕೆ ಇಳಿದು ಕ್ರಿಮಿನಲ್‌ಗಳಾಗುತ್ತಿರುವುದು ಅನಾಹುತಕಾರಿ ಬೆಳವಣಿಗೆಯಾಗಿದೆ. ಬಹುತೇಕ ಅಪರಾಧ ಚಟುವಟಿಕೆಗಳಲ್ಲಿ ಹೆಣ್ಮಕ್ಕಳು ಭಾಗಿಯಾಗುತ್ತಿರುವುದು ಹೆಚ್ಚುತ್ತಿದೆ. ಇದು ನಿಜಕ್ಕೂ ಒಳ್ಳೆ ಬೆಳವಣಿಗೆಯಲ್ಲ. ಜತೆಗೆ ಇಂತಹ ಜಾಲಗಳನ್ನು ಪತ್ತೆಹಚ್ಚಿ ನಾಶ ಮಾಡುವ ಕೆಲಸ ಮಾಡಬೇಕಾಗಿದೆ. ಈಗಾಗಲೇ ಉದ್ಯಮಿಗಳು, ರಾಜಕಾರಣಿಗಳು, ಅಧಿಕಾರಿಗಳು ಈ ವಿಷವರ್ತುಲದಲ್ಲಿ ಸಿಕ್ಕಿ ನರಳಾಡುತ್ತಿದ್ದಾರೆ. ಆದರೆ ಎಲ್ಲಿ ತಮ್ಮ ಮಾನ, ಮರ್ಯಾದೆ, ಗೌರವಕ್ಕೆ ಚ್ಯುತಿ ಬಂದು ಬಿಡುತ್ತದೆಯೋ ಎಂದು ಹೆದರಿ ಬಾಯಿ ಬಿಡುತ್ತಿಲ್ಲ. ಹೀಗಾಗಿ ಇಂತಹ ಜಾಲಗಳು ವಿಸ್ತರಿಸಿಕೊಳ್ಳುತ್ತಾ ಹೋಗುತ್ತಿದೆ. ಇನ್ನಾದರೂ ಸರ್ಕಾರ ಇಂತಹ ಪ್ರಕರಣಗಳು ಪತ್ತೆಯಾದಾಗ ಅದನ್ನು ಗಂಭೀರವಾಗಿ ಪರಿಗಣಿಸಿ ಬೇರು ಸಹಿತ ಕಿತ್ತು ಹಾಕಬೇಕಿದೆ. ಮುಂದೆ ಯಾವತ್ತೂ ಅಂತಹ ಕೃತ್ಯಗಳಿಗೆ ಕೈ ಹಾಕಬಾರದು ಅಲ್ಲದೆ, ಅವರಿಗಾದ ಶಿಕ್ಷೆಯಿಂದ ಬೇರೆಯವರೂ ಅಂತಹ ಕುಕೃತ್ಯಕ್ಕೆ ಕೈಹಾಕಬಾರದು. ಅಂತಹದೊಂದು ಕಠಿಣ ಶಿಕ್ಷೆಯ ಅವಶ್ಯಕತೆಯಿದೆ. ಆದರೆ ಅಂತಹದ್ದು ಯಾವುದೂ ಆಗದ ಕಾರಣದಿಂದಾಗಿ ಈ ಪ್ರಕರಣಗಳು ಆಗಿಂದಾಗ್ಗೆ ನಡೆಯುತ್ತಾ ಸಾಮಾನ್ಯ ಎನ್ನುವಂತಾಗಿದೆ. ಇಲ್ಲಿ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಪ್ರಶ್ನೆಯಾಗಿಯೇ ಉಳಿದು ಹೋಗುತ್ತಿದೆ.

# ವಿನೋದ್ ಕಾಂಬ್ಳಿ ಮತ್ತು ಕುಡಿತ ಸಿಗರೇಟ್ ಹುಡ್ಗೀರ್ ಶೋಕಿ!



ಒಂದು ಕಾಲದ ಸೂಪರ್ ಕ್ರಿಕೆಟರ್, ಮಾಸ್ಟರ್‌ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಸಹಪಾಠಿ ವಿನೋದ್ ಕಾಂಬ್ಳಿ ಇಂದು ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ದೀರ್ಘಕಾಲ ಸಾಮಾಜಿಕ ಜೀವನದಿಂದ ದೂರವಿದ್ದ ಕಾಂಬ್ಳಿ ಅವರ ಬಗ್ಗೆ ಭಾರತೀಯ ಕ್ರಿಕೆಟ್ ತಂಡದ ಹಿರಿಯ ಆಟಗಾರ 'ವೇಗಿ' ಯೋಗರಾಜ್ ಸಿಂಗ್ (ಯುವರಾಜ್ ಸಿಂಗ್ ತಂದೆ) ಮಾತನಾಡಿದ್ದಾರೆ.



ಕಾಂಬ್ಳಿಗೆ ನಾನು ಹಿಂದೆಯೇ ಪಾರ್ಟಿಗಳಿಗೆ ಹೋಗಬೇಡ, ಸಿಗರೇಟ್ ಸೇದಬೇಡ, ಹುಡುಗಿಯರ ಸಹವಾಸ ಮಾಡಬೇಡ ಎಂದು ಹೇಳಿದ್ದೆ. ಆದರೆ, ಅವರು ನನ್ನ ಮಾತು ಕೇಳಿರಲಿಲ್ಲ.. ಈಗ ಅವರ ಕಷ್ಟ ಹೇಳತೀರದು! ಐಷಾರಾಮಿ ಪಾರ್ಟಿಗಳಿಗೆ ಹೋಗಬೇಡ, ಸಿಗರೇಟು ಸೇದಬೇಡ, ಹುಡುಗಿಯರ ಸಹವಾಸ ಮಾಡಬೇಡ ಎಂದು ಮೊದಲೇ ಹೇಳಿದ್ದೆ. ಆದರೆ, ಕಾಂಬ್ಳಿಯವರು, ಇದು ಗ್ಲಾಮರ್ ಲೋಕ... ಇದರಲ್ಲಿ ನಾನೇ ಕಿಂಗ್ ಎಂದು ಗರ್ವದಿಂದ ಪ್ರತ್ಯುತ್ತರ ನೀಡಿದ್ದರು ಎಂದು ಮಾಧ್ಯಮ ವೊಂದಕ್ಕೆ ಸಂದರ್ಶನ ನೀಡುತ್ತಾ ಹಳೆಯ ಘಟನೆಯನ್ನು ಜ್ಞಾಪಿಸಿಕೊಂಡಿದ್ದಾರೆ.

ವಿನೋದ್ ಕಾಂಬ್ಳಿಯವರ ದೇಹಾರೋಗ್ಯ ಕೆಟ್ಟಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅವರೀಗ 53 ವರ್ಷ. ಅವರ ಸಹಪಾಠಿ ಹಾಗೂ ಬಾಲ್ಯದಲ್ಲಿ ಕ್ರಿಕೆಟ್ ಜೊತೆಗಾರರಾಗಿರುವ, ಬ್ಯಾಟಿಂಗ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ 52 ವರ್ಷ. ಇಬ್ಬರದ್ದೂ ಒಂದೇ ಊರು, ಒಬ್ಬರೇ ಗುರು... ಆದರೆ, ಸಚಿನ್ ಬೆಳೆದ ರೀತಿಯೇ ಬೇರೆ, ಕಾಂಬ್ಳಿ ಬೆಳೆದ ರೀತಿಯೇ ಬೇರೆ. ಈಗ ನಿವೃತ್ತಿಯಾಗಿರುವ ಸಚಿನ್‌ಗೆ ಇರುವಷ್ಟು ಲವಲವಿಕೆ ಕಾಂಬ್ಳಿಗೆ ಇಲ್ಲ. ಇದಕ್ಕೆ ಕಾರಣ ಅವರೇ ಸ್ವಾಗತಿಸಿಕೊಂಡ ಅನಾರೋಗ್ಯ!

ಈಗ ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಭಾರತೀಯ ಕ್ರಿಕೆಟ್ ತಂಡದ ಮಾಜಿ ವೇಗಿ ಯೋಗರಾಜ್ ಸಿಂಗ್ ನೆನಪಿಸಿಕೊಂಡಿದ್ದಾರೆ. ಕಾಂಬ್ಳಿಯವರು ಒಂದು ಕಾಲದಲ್ಲಿ ಉತ್ತುಂಗದಲ್ಲಿದ್ದ ಕ್ರಿಕೆಟಿಗ. ಅವರ ವೃತ್ತಿ ಜೀವನದ ಹೈ-ಲೆವೆಲ್ ನಲ್ಲಿದ್ದಾಗ ಅವರು ಮೈಮರೆತರು. ಹಲವಾರು ಪಂದ್ಯಗಳನ್ನು ಆಡುತ್ತಿದ್ದರಿಂದ ಕೈಯ್ಯಲ್ಲಿ ಕಾಸು ಸಲೀಸಾಗಿ ಓಡಾಡುತ್ತಿತ್ತು. ಸೆಲೆಬ್ರಿಟಿಯೂ ಆಗಿದ್ದರಿಂದ ಅನೇಕ ಪಾರ್ಟಿಗಳಿಗೆ ಅವರಿಗೆ ಆಹ್ವಾನ ಬರುತ್ತಿತ್ತು. ಅವರು ಐಷಾರಾಮಿ ಜೀವನದ ದಾಸರಾಗಿದ್ದರು ಎಂದು ಅವರು ಜ್ಞಾಪಿಸಿಕೊಂಡಿದ್ದಾರೆ.

**ಆರಂಭದಲ್ಲಿ ಮಿಂಚಿ ಮರೆಯಾಗಿದ್ದ ಕಾಂಬ್ಳಿ**

ಆತ ತನಗೆ ಚೆನ್ನಾಗಿ ಪರಿಚಯ ಇದ್ದಿದ್ದರಿಂದ ಹಾಗೂ ವಯಸ್ಸಿನಲ್ಲಿ ನಾನು ಆತನಿಗಿಂತ ದೊಡ್ಡವನಾಗಿದ್ದರಿಂದ ಆತನಿಗೆ ಬುದ್ಧಿ ಹೇಳಬೇಕೆಂದು ನಿರ್ಧರಿಸಿದೆ. ಹಾಗೇ, ಒಂದು ದಿನ ಅವರನ್ನು ಕೂರಿಸಿಕೊಂಡು ಮಾತನಾಡಿದೆ.

''ನೋಡು ಕಾಂಬ್ಳಿ... ಎಂಜಾಯ್‌ಮೆಂಟ್ ಹೆಸರಿನಲ್ಲಿ ಆರೋಗ್ಯ ಹಾಳು ಮಾಡಿಕೊಳ್ಳಬೇಡ. ಐಷಾರಾಮಿ ಪಾರ್ಟಿಗಳಿಗೆ ಹೋಗಬೇಡ, ಸಿಗರೇಟು ಸೇದಬೇಡ, ಕಂಡ ಕಂಡ ಹುಡುಗಿಯರ ಜೊತೆಗೆ ಹೋಗಬೇಡ'' ಎಂದೆಲ್ಲಾ ಹೇಳಿದ್ದೆ. ಆದರೆ, ಅದಕ್ಕೆ ಕಾಂಬ್ಳಿಯವರು, ''ಇದು ಗ್ಲಾಮರ್ ಲೋಕ ಕಣೋ... ಅಲ್ಲಿ ನಾನೇ ಕಿಂಗ್ ಎಂದು ಹೇಳಿದ್ದರು'' ಎಂದು ಸಿಂಗ್ ಅವರು 'ಇನ್‌ಸೈಡ್ ಸ್ಪೋರ್ಟ್ಸ್' ಎಂಬ ವಾಹಿನಿಗೆ ನೀಡಿದ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

**ವರ್ಷಗಳ ನಂತರ ಕಾಂಬ್ಳಿ ದರ್ಶನವಾಗಿತ್ತು**

ಹಲವಾರು ವರ್ಷಗಳವರೆಗೆ ಸಾಮಾಜಿಕ ಜೀವನದಿಂದ ದೂರವಿದ್ದ ಅವರನ್ನು ಯಾರೂ ಅಷ್ಟಾಗಿ ಗಮನಿಸಿರಲಿಲ್ಲ, ಆದರೆ, ಕಳೆದ ವರ್ಷ ಅದೊಂದು ಸಮಾರಂಭಕ್ಕೆ ವಯಸ್ಸಾದವರಂತೆ ಕಾಣಿಸುತ್ತಾ, ಕುಂಟುತ್ತಾ ಬಂದ ಕಾಂಬ್ಳಿಯವರನ್ನು ನೋಡಿದಾಗ ಎಲ್ಲರೂ ಹೌಹಾರಿದ್ದಂತೂ ನಿಜ. ಅರೆರೆ ಕಾಂಬ್ಳಿಗೇನಾಯ್ತು ಎಂದು ಪ್ರಶ್ನಿಸಿದ್ದೂ ನಿಜ. ಜೊತೆಗೆ, ಅವರಿಗಾದ ಅನಾರೋಗ್ಯ ಪರಿಸ್ಥಿತಿಯನ್ನು ಕಂಡು ಮರುಗಿದ್ದೂ ನಿಜ.

ಮೆದುಳಿನಲ್ಲಿ ಕೆಲವು ಕಡೆ ರಕ್ತಹೆಪ್ಪುಗಟ್ಟಿದ್ದ ಸಮಸ್ಯೆ ಅವರಿಗಿತ್ತು. ಅದಕ್ಕೆ ಅವರು ದೀರ್ಘಾವಧಿ ಚಿಕಿತ್ಸೆ ಪಡೆದು ಗುಣಮುಖರಾದರು. 2024ರ ಡಿಸೆಂಬರ್‌ನಲ್ಲಿ ಅವರಿಗೆ ಮೂತ್ರನಾಳದಲ್ಲಿ ಸೋಂಕು ಕಾಣಿಸಿಕೊಂಡಿತು. ಇದೆಲ್ಲದಕ್ಕೂ ಮುನ್ನ ಅವರು 2013ರಲ್ಲಿ ಎರಡು ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. 2025ರಲ್ಲಿ ಅವರು ಕೆಲವು ಅಸ್ವಸ್ಥತೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು.

**ಸಚಿನ್, ಕಾಂಬ್ಳಿಗೂ ಇದೇ ವ್ಯತ್ಯಾಸ**


ಸಚಿನ್ ತೆಂಡೂಲ್ಕರ್ ಹಾಗೂ ವಿನೋದ್ ಕಾಂಬ್ಳಿ ಇಬ್ಬರೂ ಹೆಚ್ಚೂಕಡಿಮೆ ಒಟ್ಟಿಗೆ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟವರು. ಆರಂಭದಲ್ಲಿ ದೊಡ್ಡ ಯಶಸ್ಸು ಗಳಿಸಿದರು. ಕಾಂಬ್ಳಿ ಕೂಡ ಉತ್ತಮ ಪ್ರತಿಭಾವಂತರೇ. ಆದರೆ, ಸಚಿನ್ ತೆಂಡೂಲ್ಕರ್ ಅವರು ಕ್ರೀಡೆಗೆ ಬೇಕಾದ ಶಿಸ್ತು ಹಾಗೂ ಫಿಟ್‌ನೆಸ್ ಕಡೆ ಗಮನ ಕೊಟ್ಟರೆ, ಕಾಂಬ್ಳಿಯವರು ಶೋಕಿಗಳ ಕಡೆಗೆ ಗಮನ ಕೊಟ್ಟರು. ಇಬ್ಬರ ನಡುವಿನ ವ್ಯತ್ಯಾಸ ಇದೇ. ಅದರಿಂದ ಅವರಿಗೆ ಭಾರೀ ಹಿನ್ನಡೆಗೆ ಕಾರಣವಾಯಿತು.





**ಬಂದು ನೋಡ್ತೇನೆ ಎಂದ ಕಪಿಲ್‌ದೇವ್**

ಕಳೆದ ಜನವರಿಯಲ್ಲಿ ತೀವ್ರ ಅನಾರೋಗ್ಯಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ವಿನೋದ್, ಸುಮಾರು 10 ದಿನಗಳ ಯಶಸ್ವಿ ಚಿಕಿತ್ಸೆಯ ಬಳಿಕ ಡಿಸ್‌ಚಾರ್ಜ್ ಆಗಿದ್ದರು. ಈ ವೇಳೆ ಅವರು, ಜನರಿಗೆ 'ದುಶ್ಚಟಗಳಿಂದ ದೂರವಿರಿ' ಎಂದು ಹೊಸ ವರ್ಷದ ಸಂದೇಶ ನೀಡಿದ್ದರು! ಅವತ್ತು ಕಾಂಬ್ಳಿಯವರ ಜೊತೆ ಮಾತನಾಡಿದ ಭಾರತೀಯ



ಕ್ರಿಕೆಟ್ ತಂಡದ ದಿಗ್ಗಜ ಕಪಿಲ್‌ದೇವ್, 'ಚಿಂತಿಸಬೇಡಿ ನಿಮ್ಮ ಆರೋಗ್ಯದ ಕಡೆಗೆ ಗಮನ ಕೊಡಿ.... ಶೀಘ್ರದಲ್ಲೇ ನಿಮ್ಮನ್ನು ಭೇಟಿಯಾಗಲಿದ್ದೇನೆ' ಎಂದು ಹೇಳಿದ್ದರು.

**ನೆರವಿಗೆ ನಿಂತರು ಸುನಿಲ್ ಗವಾಸ್ಕರ್**

ಅನಾರೋಗ್ಯದಿಂದ ಬಳಲುತ್ತಿರುವ ವಿನೋದ್ ಕಾಂಬ್ಳಿ ಅವರಿಗೆ ಕಪಿಲ್ ಬಳಿಕ ಮಾಜಿ ಕ್ರಿಕೆಟಿಗ ಸುನಿಲ್ ಗವಾಸ್ಕರ್ ಆರ್ಥಿಕ ನೆರವು ನೀಡಿದ್ದಾರೆ. ವಿನೋದ್ ಕಾಂಬ್ಳಿ ಅವರಿಗೆ ತಮ್ಮ ಚಾಂಪ್ಸ್(CHAMPS) ಫೌಂಡೇಶನ್ ವತಿಯಿಂದ ಪ್ರತಿ ತಿಂಗಳು 30,000 ರೂ. ಸಹಾಯ ಧನದ ರೂಪದಲ್ಲಿ ನೀಡುತ್ತಿದ್ದಾರೆ. ಅಲ್ಲದೆ, ವೈದ್ಯಕೀಯ ಖರ್ಚಿಗಾಗಿ ವರ್ಷಕ್ಕೆ 30,000 ರೂ.ಗಳನ್ನು ಪ್ರತ್ಯೇಕವಾಗಿ ನೀಡುವುದಾಗಿ ಘೋಷಿಸಿದ್ದಾರೆ!

**ಸಚಿನ್ ಗುಪ್‌ಚುಪ್!**

ವಿನೋದ್ ಕಾಂಬ್ಳಿ ವಿಷಯದಲ್ಲಿ ಅವರ ಹಳೆಯ ಸಹವರ್ತಿಗಳು ಒಂದಲ್ಲ ಒಂದು ರೀತಿ ಸಲಹೆ ನೀಡುತ್ತಿದ್ದಾರೆ. ಆದರೆ, ಮಾಸ್ಟರ್ ಬ್ಲಾಸ್ಟರ್ ಸಚಿನ್ ಮಾತ್ರ ತುಟಿಕ್ ಪಿಟಿಕ್ ಎಂದಿಲ್ಲ! ಅವರು ದೊಡ್ಡವರು ನನ್ನನ್ನು ನೋಡಲು ಬಂದೇ ಬರ್ತಾರೆ ಎಂಬುದಾಗಿ ಕಾಂಬ್ಳಿ ಹೇಳಿಕೊಂಡ ನಂತರವೂ ಸಚಿನ್ ಒಂದು ಮಾತನಾಡುತ್ತಿಲ್ಲ ಎಂದರೆ, ಕಾಂಬ್ಳಿಯ ಹಿಂದಿನ ದುಶ್ಚಟಗಳ ಕರಾಳತೆ ಎಂಥದ್ದಿರಬಹುದೋ... ಯಾರಾದರೂ ಊಹಿಸಿಕೊಳ್ಳಬಹುದು!

☯

3 ☞

ಹುಚ್ಚು ಹಿಡಿದಿತ್ತು. ಕುಡಿದು ಟೈಟ್ ಆಗಿದ್ದೆ. ಸಿಟ್ಟಿನಲ್ಲಿ ಇವಳ ತಲೆ ಜುಟ್ಟು ಹಿಡಿದು ನಾಲ್ಕು ಬಡಿದು, ಮಾಂಸ ಕತ್ತಿರಿಸೋ ಮಚ್ಚಿನಿಂದ ಕಡಿದುಬಿಟ್ಟೆ! ಆಮೇಲೆ, ಕಾನೂನು ಪಾಲಿಸಬೇಕಲ್ವಾ ಸಾರ್. ತಲೆ ಎತ್ತಿಕೊಂಡು ನಿಮ್ಹತ್ರಾನೇ ಬರುತ್ತಿದ್ದೆ. ಎಂಬಿತ್ಯಾದಿಯಾಗಿ ಅಂದು ತನ್ನ ಬದುಕಿನಲ್ಲಿ ಘಟಿಸಿದ ಹಾರರ್ ಸ್ಟೋರಿಯನ್ನು ಹೇಳಿ ನಿಟ್ಟುಸಿರುಬಿಟ್ಟ ಪಾಪಿ ಶಂಕರ!



ಎಎಸ್‌ಐ ಆನಂದಮೂರ್ತಿ ಅದೆಲ್ಲವನ್ನು ಒಂದೆಡೆ ನೋಟ್ ಮಾಡಿಕೊಂಡು ತಮ್ಮ ಅಧಿಕಾರಿಗಳಿಗೆ ವಿವರಿಸಿ, ಈ ಬಗ್ಗೆ ತಾವೇ ಒಂದು ದೂರನ್ನು ಸಿದ್ದಪಡಿಸಿಕೊಂಡಿದ್ದಾರೆ. ಅಷ್ಟರಲ್ಲಿ ಎಸ್ಪಿ ಸಿ.ಕೆ. ಬಾಬಾ ಸಾಹೇಬ್ರು, ಅಡಿಷನಲ್ ಎಸ್ಪಿ ನಾಗೇಶ್ ಸರ್, ಆನೇಕಲ್ ಉಪ ವಿಭಾಗದ ಡಿವೈಎಸ್ಪಿ ಬಿ.ಎಸ್. ಮೋಹನ್ ಕುಮಾರ್ ಹಾಗೂ ಸೂರ್ಯನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಎಸ್.ಜೆ. ಮಹಾಜನ್ ಎಲ್ಲರೂ ಅಲ್ಲಿಗೆ ಆಗಮಿಸಿದ್ದಾರೆ.

ಎಲ್ಲರ ಸಮಕ್ಷಮದಲ್ಲಿ ಆರೋಪಿ ಶಂಕರ್‌ನ ವಿಚಾರಣೆ ನಡೆದು, ಹತ್ಯೆ ನಡೆದ ಮನೆಯಲ್ಲಿ ಮಹಜರ್ ನಡೆಸಿ ಆರೋಪಿ ಶಂಕರನ ವಿರುದ್ಧ ಕ್ರೈಂ. ನಂ. 236/25 ಭಾರತೀಯ ನ್ಯಾಯ ಸಂಹಿತೆ (ಬಿಎನ್ ಎಸ್ ಆಕ್ಟ್) 2023(ಯು/ಎಸ್ 103) ಅಡಿ ಪ್ರಕರಣ ದಾಖಲಿಸಿಕೊಂಡು, ಆತನ ಹೇಳಿಕೆಯನ್ನು ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ



ಒಪ್ಪಿಸಲಾಗಿದೆ.

☯

# ಸಿಂಗರ್ ಮಂಗ್ಲಿ ಗಾಂಜಾ ಕಿಕ್?!



**ಆಂಧ್ರ ಪ್ರದೇಶದ ಯಾವುದೋ ಕುಗ್ರಾಮದಲ್ಲಿ ಹುಟ್ಟಿ ಬೆಳೆದ ಮಂಗ್ಲಿ ಕೂಲಿನಾಲಿ ಮಾಡಿಕೊಂಡು, ಜಾನಪದ ಗೀತೆ ಗುನುಗಿಕೊಂಡು ಅಮಾಯಕಿಯಂತೆ ಇದ್ದವಳು, ಇವತ್ತು ಕೋಟಿ ರೂ. ಖರ್ಚು ಮಾಡಿಸಿ ತನ್ನ ಹುಟ್ಟುಹಬ್ಬ ಆಚರಿಸಿಕೊಳ್ಳುವ ಮಟ್ಟಕ್ಕೆ ಬೆಳೆದಿದ್ದಾಳೆ ಎಂದರೆ ಇಡೀ ದೇಶವೇ ಖುಷಿ ಪಡುವ ಸಂಗತಿ! ಆದರೆ....?!**

ಕಣ್ಣುಹೊಡಿಯಾಕ..., ರಾ ರಾ ರಕ್ಕಮ್ಮ..., ಗಿಲಕ್ಕೊ ಶಿವ ಗಿಲ ಕ್ಕೊ..., ಪಸಂದಗವ್ನೆ... ಇವೇ ಮುಂತಾದ ಹಾಡುಗಳ ಖ್ಯಾತ ಗಾಯಕಿ ಮಂಗ್ಲಿ ಅವರ ಬರ್ತ್‌ಡೇ ಪಾರ್ಟಿ ಮೇಲೆ ಹೈದರಾಬಾದ್ ಪೊಲೀಸರು ದಾಳಿ ನಡೆಸಿದ್ದಾರೆ! ಪಾರ್ಟಿಯಲ್ಲಿ ಗಾಂಜಾ ಮತ್ತು ವಿದೇಶಿ ಮದ್ಯ ಪತ್ತೆಯಾಗಿದೆ ಎನ್ನಲಾಗಿದೆ. ಪೊಲೀಸ್ ಅನುಮತಿ ಯಿಲ್ಲದೆ ವಿದೇಶಿ ಮದ್ಯ ಆಮದು ಮಾಡಿಕೊಂಡಿದ್ದಕ್ಕಾಗಿ ಗಾಯಕಿ ಮಂಗ್ಲಿ ವಿರುದ್ಧ ಪ್ರಕರಣ ದಾಖಲಾಗಿದೆ.

ಕಳೆದ ಜೂನ್ 10ರಂದು ಹೈದರಾಬಾದ್ ಸಿಟಿಯ ಹೊರವಲಯದ ಚೆವೆಲ್ಲಾ ತ್ರಿಪುರಾ ರೆಸಾರ್ಟ್‌ನಲ್ಲಿ ಖ್ಯಾತ ಗಾಯಕಿ ಮಂಗ್ಲಿಯ ಬರ್ತ್‌ಡೇ ಪಾರ್ಟಿ ನಡೆಯುತ್ತಿತ್ತು. ಬಲೇ ಗ್ರ್ಯಾಂಡ್ ಆಗಿ ಅರೆಂಜ್ ಆಗಿದ್ದ ಆ ಪಾರ್ಟಿಯಲ್ಲಿ ತೆಲುಗು ಚಿತ್ರರಂಗದ ಅನೇಕ ಸೆಲೆಬ್ರಿಟಿಗಳು ಹಾಗೂ ಮಂಗ್ಲಿಯ ಸ್ನೇಹಿತರು ಮತ್ತು ಕುಟುಂಬಸ್ಥರು







ಭಾಗವಹಿಸಿದ್ದರು. ಖ್ಯಾತ ಗಾಯಕ ದಿವಿ ಸೇರಿದಂತೆ ಇನ್ನೂ ಅನೇಕ ಸೆಲೆಬ್ರಿಟಿಗಳು ಭಾಗಿಯಾಗಿದ್ದರು. ಬರ್ತ್‌ಡೇ ಪಾರ್ಟಿಯಲ್ಲಿ ವಿದೇಶಿ ಮದ್ಯ ತುಂಬಿ ತುಳುಕಿತ್ತಿತ್ತು ಎನ್ನಲಾಗಿದೆ. ಜೊತೆಗೆ ಪಾರ್ಟಿ ಮತ್ತೇರಿಸಲು ಗಾಂಜಾ ಕೂಡ ಇತ್ತಂತೆ!!

ಹೈದರಾಬಾದ್‌ನಲ್ಲೇ ಅತ್ಯಂತ ದುಬಾರಿ ಎನ್ನಿಸಿಕೊಂಡ ಚವೆಲ್ಲಾ ತ್ರಿಪುರ ರೆಸಾರ್ಟ್‌ನಲ್ಲಿ ನಡೆಯುತ್ತಿದ್ದ ಸಿಂಗರ್ ಮಂಗ್ಲಿ ಪಾರ್ಟಿ ಬಗ್ಗೆ ಮಾಹಿತಿ ಪಡೆದ ಪೊಲೀಸರು, ಸದರಿ ರೆಸಾರ್ಟ್ ಮೇಲೆ ದಾಳಿ ನಡೆಸಿದ್ದರು. ಆ ಪಾರ್ಟಿಯಲ್ಲಿ ಭಾಗ ವಹಿಸಿದ್ದ ಹಲವಾರು ಮಂದಿ ಮೇಲೆ ನಡೆಸಿದ ವೈದ್ಯಕೀಯ ಪರೀಕ್ಷೆಯಲ್ಲಿ ಕೆಲವರು ಗಾಂಜಾ ಸೇವಿಸಿರುವುದು ಪತ್ತೆಯಾಗಿದೆ. ಅಲ್ಲದೇ ಪೊಲೀಸ್ ಅನುಮತಿಯಿಲ್ಲದೇ ವಿದೇಶಿ ಮದ್ಯ ಆಮದು ಮಾಡಿಕೊಂಡಿದ್ದಕ್ಕಾಗಿ ಗಾಯಕಿ ಮಂಗ್ಲಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮಂಗ್ಲಿ ಹುಟ್ಟುಹಬ್ಬದ ಆಯೋಜಕರು ಪೊಲೀಸರ ಪೂರ್ವಾನುಮತಿ ಪಡೆಯದೆ ಗ್ರ್ಯಾಂಡ್ ಪಾರ್ಟಿ ಆಯೋಜಿಸಿದ್ದರಂತೆ. ಪೊಲೀಸ್ ಅನುಮತಿ ಇಲ್ಲದೆ ಕಾರ್ಯಕ್ರಮ ನಡೆಸಲು ಅವಕಾಶ ನೀಡಿದ್ದಕ್ಕಾಗಿ ತ್ರಿಪುರ ರೆಸಾರ್ಟ್‌ನ ಜನರಲ್ ಮ್ಯಾನೇಜರ್ ವಿರುದ್ಧವೂ ಪ್ರಕರಣ ದಾಖಲಾಗಿದೆ. ಹೀಗಾಗಿ, ಅನುಮತಿ ಇಲ್ಲದೆ ಬಳಸಿದ ಮದ್ಯ, ಡಿಜೆ ಉಪಕರಣಗಳನ್ನು ಸಹ ಪೊಲೀಸ್ ವಶಕ್ಕೆ ಪಡೆದುಕೊಂಡು ಅಬಕಾರಿ ಕಾಯ್ದೆ ಮತ್ತು ಸೌಂಡ್ ಪೊಲ್ಯೂಷನ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ. ಜೊತೆಗೆ, ಡ್ರಗ್ಸ್ ಸಂಬಂಧಿತ ಅಪರಾಧಗಳಿಗಾಗಿ ಎನ್‌ಡಿಪಿಎಸ್ ಕಾಯ್ದೆಯನ್ನು ಅಳವಡಿಸಲಾಗಿದೆ!



**ತಾರೆಯರಿಗೆ ನೋಟೀಸ್**

ಎಸ್‌ಒಟಿ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳು ಬೆಳಿಗ್ಗೆ ಸುಮಾರು 02 ಗಂಟೆಗೆ ರೆಸಾರ್ಟ್ ಮೇಲೆ ದಾಳಿ ನಡೆಸಿದ್ದಾರೆ. ದಾಳಿ ನಡೆಸಿದಾಗ ದಾಮೋದರ್ ಎಂಬ ವ್ಯಕ್ತಿ ಗಾಂಜಾ ಸೇವಿಸುತ್ತಿರುವುದು ಕಂಡು ಬಂದಿದೆ. ಆ ದೃಶ್ಯವನ್ನು ನೋಡಿದ ನಂತರ ಅಲ್ಲಿದ್ದ ಎಲ್ಲರನ್ನೂ ಡ್ರಗ್ಸ್ ಪರೀಕ್ಷೆಗೆ ಒಳಪಡಿಸಲಾಗಿದೆ. ಆ ಪಾರ್ಟಿಯಲ್ಲಿದ್ದ ಒಟ್ಟು 48 ಮಂದಿಯನ್ನು ಪರೀಕ್ಷಿಸಲಾಗಿದ್ದು, ಅವರಲ್ಲಿ ಹನ್ನೊಂದು ಮಂದಿ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ! ಪಾರ್ಟಿಯಲ್ಲಿ ಹಲವು ತಾರೆಯರು ಭಾಗಿಯಾಗಿದ್ದರು ಎನ್ನಲಾಗಿದ್ದು, ಅವರನ್ನು ಪತ್ತೆಹಚ್ಚಿ ನೋಟೀಸ್ ಜಾರಿ ಮಾಡಲಾಗಿದೆಯಂತೆ!

**ಸೀರಿಯಸ್ ವಾರ್ನಿಂಗ್**

ಮಂಗ್ಲಿ ಬರ್ತ್‌ಡೇ ಪಾರ್ಟಿಯ ವಿಡಿಯೋಗಳು ಮತ್ತು ಫೋಟೋಗಳನ್ನು ತೆಲಂಗಾಣ ಪೊಲೀಸರು ಬಿಡುಗಡೆ ಮಾಡಿ ಸೀರಿಯಸ್ ಆಗಿ ವಾರ್ನಿಂಗ್ ನೀಡಿದ್ದಾರೆ. ಯಾವುದೇ ಪಾರ್ಟಿಯಲ್ಲಿ ಡ್ರಗ್ಸ್ ತೆಗೆದುಕೊಂಡರೆ, ಅವರು ಎಂತಹವರಾದರೂ ಬಿಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿರುವ ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ಮುಂದುವರೆದಿದೆ!

ಅಂದಹಾಗೆ, ಮಂಗ್ಲಿ ಅವರ ನಿಜವಾದ ಹೆಸರು ಸತ್ಯವತಿ ರಾಥೋಡ್! ಈಕೆ ತೆಲುಗು ಜಾನಪದ ಗೀತೆಗಳಿಗೆ ಬಲೇ ಫೇಮಸ್. ಮುಂದೆ ಸಿನಿಮಾ ಕ್ಷೇತ್ರಕ್ಕೂ ಕಾಲಿಟ್ಟು ಪ್ರಸಿದ್ಧ ಹಿನ್ನೆಲೆ ಗಾಯಕಿಯಾಗಿ ಹೊರಹೊಮ್ಮಿರುವುದು ನಿಮಗೆಲ್ಲ ಗೊತ್ತೇ ಇದೆ. ಮಂಗ್ಲಿ ತನ್ನ ವಿಶಿಷ್ಟ ಧ್ವನಿಗೆ ಹೆಸರುವಾಸಿಯಾಗಿದ್ದಾರೆ. ಮಂಗ್ಲಿ ನೈಟ್ಸ್‌ಗೆ ಲಕ್ಷಾಂತರ ಮಂದಿ ಸೇರುತ್ತಾರೆ. ರಾಬರ್ಟ್ ಚಿತ್ರದ 'ಕಣ್ಣು ಹೊಡಿ ಯಾಕ' ವಿಕ್ರಾಂತ್ ರೋಣ ಸಿನಿಮಾದ 'ರಾ ರಾ ರಕ್ಕಮ್ಮ', ವೇದ ಚಿತ್ರದ 'ಗಿಲ್ಲಕ್ಕೋ ಶಿವ ಗಿಲಕ್ಕೋ' ಮತ್ತು ಕಾಟೇರಾ ಚಿತ್ರದ 'ಪಸಂದಾಗವ್ನೆ' ಸಾಂಗ್ಸ್ ನಮ್ಮ ಹಬ್ಬ ಹರಿದಿನ ಉತ್ಸವಗಳಲ್ಲಿ ಆರ್ಕೆಸ್ಟ್ರಾಗಳ ಅತ್ಯಂತ ಜನಪ್ರಿಯ ಹಾಡುಗಳಾಗಿವೆ. ಅದಿರಲಿ, ಈ ಘಟನೆಗೆ ಮಂಗ್ಲಿ ಸಾರ್ವಜನಿಕವಾಗಿ ಕ್ಷಮೆ ಕೇಳಿದ್ದಾರೆ!

# ಕಾಲ್ತುಳಿತ ಪ್ರಕರಣಕ್ಕೆ ಮೇಜರ್ ಟ್ವಿಸ್ಟ್!

**ಫಾಲೋಅಪ್**

ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಘಟಿಸಿದ್ದ ಕಾಲ್ತುಳಿತ ಪ್ರಕರಣ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರಿಂದ ಹೊಸ ಸುದ್ದಿಯೊಂದು ಬಹಿರಂಗಗೊಂಡಿದೆ! ಕಬ್ಬನ್ ಪಾರ್ಕ್ ಪೊಲೀಸ್ ಇನ್ಸ್‌ಪೆಕ್ಟರ್ ಗಿರೀಶ್ ಅವರ ಬೇಜವಾಬ್ದಾರಿಯಿಂದಾಗಿ ಘೋರ ದುರಂತ ನಡೆದು ಹೋಯಿತಾ? ಇನ್ಸ್‌ಪೆಕ್ಟರ್ ಗಿರೀಶ್ ನಿರ್ಲಕ್ಷ್ಯಕ್ಕೆ ಹೋಯ್ತಾ 11ಮಂದಿ ಅಮಾಯಕರ ಪ್ರಾಣ?? ಈ ಬಗ್ಗೆ ಸಿಐಡಿ ಪ್ರಾಥಮಿಕ ತನಿಖೆ ವೇಳೆ ಇನ್ಸ್‌ಪೆಕ್ಟರ್ ಗಿರೀಶ್ ಅವರ ನಿರ್ಲಕ್ಷ್ಯ ಬಹಿರಂಗವಾಗಿದೆ! ಅಂದು ನಡೆದ ಘಟನಾವಳಿ ಬಗ್ಗೆ ಸಿಸಿಟಿವಿ ಪರಿಶೀಲನೆ ವೇಳೆ ಸತ್ಯ ಪತ್ತೆಯಾಗಿದೆ!

ಸಿಐಡಿ ತನಿಖೆ ವೇಳೆ ಸಿಐಡಿ ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಲಾಗದೆ ಇನ್ಸ್‌ಪೆಕ್ಟರ್ ಗಿರೀಶ್ ಕಕ್ಕಾಬಿಕ್ಕಿಬಿಕ್ಕಿಯಂತೆ! ಅಂದು ಚಿನ್ನಸ್ವಾಮಿ ಸ್ಟೇಡಿಯಂ ಹಾಗೂ ಪಕ್ಕದ ಮೈದಾನದ ಗೇಟ್ ಬಳಿ ಗಿರೀಶ್ ಇರಲೇ ಇಲ್ವಂತೆ! ಹಾಗಾದ್ರೆ, ಬಂದೋಬಸ್ತ್ ಮಾಡೋದು ಬಿಟ್ಟು ಎಲ್ಲಿಗೆ ಹೋಗಿದ್ರು? ಮಧ್ಯಾನ್ನ 1:30ಕ್ಕೆ ಮೈದಾನದ ಬಳಿ ಸಿಬ್ಬಂದಿ ನಿಯೋಜನೆ ಮಾಡಲು ಕಬ್ಬನ್ ಪಾರ್ಕ್ ಇನ್ಸ್‌ಪೆಕ್ಟರ್ ಗಿರೀಶ್ ಅವರಿಗೆ ಕಮಿಷನರ್ ದಯಾನಂದ ಸಾಹೇಬ್ರು ಸೂಚಿಸಿ, ಒಟ್ಟಾರೆ ಸಿಬ್ಬಂದಿ ನಿಯೋಜನೆಯ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿತ್ತು. ಆದರೆ ಸಾಯಂಕಾಲ ನಾಲ್ಕು ಗಂಟೆ ಆಗಿದ್ರೂ, ಅಲ್ಲಿ ಸರಿಯಾದ ಸಿಬ್ಬಂದಿ ನಿಯೋಜನೆ ಆಗಿರಲಿಲ್ಲ. ಸ್ಟೇಡಿಯಂ ಬಳಿ ಸಿಬ್ಬಂದಿ ನಿಯೋಜನೆ ಮಾಡೋದು ಬಿಟ್ಟು ಗಿರೀಶ್ ಎಲ್ಲಿಗೆ ಹೋಗಿದ್ರು? ವಿಧಾನಸೌಧ ಬಳಿ ಬಂದೋ ಬಸ್ತ್‌ಗೆ ಎಸಿಪಿಗಳು, ಡಿಸಿಪಿಗಳೇ ಹೋಗಿದ್ರು. ಆದ್ರೆ ಗಿರೀಶ್ ಎಲ್ಲಿ ಹೋಗಿದ್ರು, ಎಂದು ಸಿಐಡಿ ಅಧಿಕಾರಿಗಳು ಪ್ರಶ್ನೆ ಮಾಡಿದ್ದಾರೆ! ಸಿಸಿಟಿವಿಯಲ್ಲಿ ಗೇಟ್ ಬಳಿ ಪೊಲೀಸ್ ಭದ್ರತೆ ಇಲ್ಲದಿರೋದು ಪತ್ತೆಯಾಗಿದ್ದು, ಈ ಬಗ್ಗೆ ನಿನ್ನೆ ಸಿಐಡಿ ಅಧಿಕಾರಿಗಳು ಇನ್ಸ್‌ಪೆಕ್ಟರ್ ಗಿರೀಶ್ ಅವರಿಗೆ ಫುಲ್ ಡ್ರಿಲ್ ಮಾಡಿದ್ದಾರೆ.



ಇನ್ಸ್‌ಪೆಕ್ಟರ್ ಎ.ಕೆ. ಗಿರೀಶ್

ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಅವರು, ಎಸಿಪಿ ಬಾಲಕೃಷ್ಣ ಅವರು ತಾವು ವಿಧಾನಸೌಧಕ್ಕೆ ಹೋಗುವ ಮುನ್ನ ಇನ್ಸ್‌ಪೆಕ್ಟರ್ ಗಿರೀಶ್‌ಗೆ ಸ್ಟೇಡಿಯಂ ಸುತ್ತಮುತ್ತ ಬಂದೋಬಸ್ತ್ ಕೈಗೊಳ್ಳುವಂತೆ ಸೂಚನೆ ನೀಡಿ ಹೋಗಿದ್ದಂತೆ! ಆದರೆ ಇನ್ಸ್‌ಪೆಕ್ಟರ್ ಗಿರೀಶ್ ತಮ್ಮ ಠಾಣೆಯ ಸಿಬ್ಬಂದಿಗೂ ಸರಿಯಾಗಿ ನಿರ್ದೇಶನ ಮಾಡದೇ, ಬೇರೆ ಬೇರೆ ಸ್ಟೇಷನ್‌ನಿಂದ ಬಂದೋಬಸ್ತ್‌ಗೆ ಬಂದಿದ್ದ ಒಂದಷ್ಟು ಸಿಬ್ಬಂದಿಗೆ ಹೇಳಿ ಅಲ್ಲಿಂದ ಜ್ಯೂಟ್ ಆಗಿದ್ರು ಎನ್ನಲಾಗಿದೆ! ಅವರ ಈ ನಿರ್ಲಕ್ಷ್ಯದ ಬಗ್ಗೆ ಸ್ಪಷ್ಟನೆ ನೀಡುವಂತೆ ಸಿಐಡಿ ಇದೀಗ ತಾಕೀತು ಮಾಡಿದೆ. ಒಬ್ಬ ಇನ್ಸ್‌ಪೆಕ್ಟರ್‌ನ ನಿರ್ಲಕ್ಷ್ಯಕ್ಕೆ ಹಿರಿಯ ಅಧಿಕಾರಿಗಳ ತಲೆದಂಡವಾಯ್ತಾ ಎಂಬ ಪ್ರಶ್ನೆ ಎದ್ದಿದೆ ಈವಾಗ...?!

# ಸುಹಾಸ್ ಹತ್ಯೆ ತನಿಖೆ ಎನ್‌ಐಎ ಹೆಗಲಿಗೆ!



ಮಂಗಳೂರು

✍ ಮೋಹನ್ ಬೋಳಂಗಡಿ

ಹಿಂದೂ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದಂತಹ, ಎಕ್ಕಾರಿನ ಕೀರ್ತಿ ಮತ್ತು ಸುರತ್ಕಲ್ ಮಂಗಳಪೇಟೆಯ ಫಾಸಿಲ್ ಹತ್ಯಾ ಪ್ರಕರಣದ ಆರೋಪಿ. ಸುರತ್ಕಲ್ ಸಮೀಪದ ಕಳವಾರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಮೂಲತಃ ಬಂಟ್ವಾಳ ತಾಲೂಕಿನ ಕಾರಿಂಜೆ ಸಮೀಪದ ಪುಳಿಮಜಲುವಿನ ಮೋಹನ್ ಶೆಟ್ಟಿ ಸುಲೋಚನಾ ದಂಪತಿಯ ಮಗ ಸುಹಾಸ್ ಶೆಟ್ಟಿಯನ್ನು ಮೇ 1ರಂದು ರಾತ್ರಿ ಬಜ್ಪೆ ಪೊಲೀಸ್ ಠಾಣಾ ವ್ಯಾಪ್ತಿಯ ಕಿನ್ನಿಮಜಲು ಎಂಬಲ್ಲಿ ಸಿನಿಮೀಯ ರೀತಿಯಲ್ಲಿ ಕೊಲೆಗೈದ ಪ್ರಕರಣದ ತನಿಖೆಯನ್ನು ಕೇಂದ್ರ ಸರಕಾರ ರಾಷ್ಟ್ರೀಯ ತನಿಖಾ ದಳದ ತನಿಖೆಗೆ ಒಪ್ಪಿಸಿದೆ. ಎನ್‌ಐಎ ನ ಬೆಂಗಳೂರು ಘಟಕದ ಡಿವೈಎಸ್ಪಿ ಪವನ್‌ಕುಮಾರ್ ನೇತೃತ್ವದ ಪೊಲೀಸ್ ತಂಡ ಮಂಗಳೂರಿಗೆ ಬಂದಿದ್ದು, ಈ ಪ್ರಕರಣದ ತನಿಖೆ ನಡೆಸುತ್ತಿದ್ದ ಮಂಗಳೂರು ಸಿಸಿಬಿ ಎಸಿಪಿ ಮಹೇಶ್ ಕುಮಾರ್ ಅವರೊಂದಿಗೆ ಪ್ರಕರಣದ ತನಿಖೆಯ ಪ್ರಗತಿಯ ಬಗ್ಗೆ ವಿಚಾರ ವಿನಿಮಯ ನಡೆಸಿದ್ದು, ತನಿಖೆಯನ್ನು ಕೈಗೆತ್ತಿಕೊಂಡಿದೆ.

ಸುಹಾಸ್ ಶೆಟ್ಟಿ ಹತ್ಯೆಯನ್ನು ಕೇಂದ್ರ ಸರಕಾರ ರಾಜ್ಯ ಸರಕಾರದ ಅನುಮತಿ ಇಲ್ಲದೆ ಕೈಗೆತ್ತಿಕೊಂಡಿದೆ. ಇದಕ್ಕೆ ಕಾರಣವೂ ಇದೆ. ಈ ಹತ್ಯೆಯಲ್ಲಿ ಈ ರಾಷ್ಟ್ರದಲ್ಲಿ ನಿಷೇಧಿಸಲ್ಪಟ್ಟಿರುವಂತಹ ಪಿಎಫ್‌ಐ ಸಂಘಟನೆಯ ಸದಸ್ಯರು ಸಕ್ರೀಯವಾಗಿ ಇದ್ದಾರೆ ಎಂದು ಮಾಹಿತಿಯ ಅನ್ವಯ ಕೇಂದ್ರ ಸರಕಾರ ಈ ನಿರ್ಧಾರ ಕೈಗೊಂಡಿದೆ.

ಸುಹಾಸ್ ಶೆಟ್ಟಿಯ ಹತ್ಯೆಯನ್ನು ಯೋಜಿಸಿದ್ದು, ಬಜಪೆ ಶಾಂತಿಗುಡ್ಡೆಯ ಸಫ್ವಾನ್. ಈತನಿಗೂ ಪ್ರಶಾಂತ್ ಎಂಬಾತನಿಗೂ ವೈರತ್ವ ಇತ್ತು. ಪ್ರಶಾಂತ್ ಈತನಿಗೆ ಈ ಹಿಂದೆ ಚೂರಿಯಿಂದ ಇರಿದಿದ್ದ. ಅದಕ್ಕೆ ಪ್ರತಿಕಾರಕ್ಕಾಗಿ ಸಫ್ವಾನ್ ಹಾತೊರೆಯುತ್ತಿದ್ದ. ಆದರೆ ಪ್ರಶಾಂತ್ ಯಾವಾಗಲೂ ಸುಹಾಸ್ ಶೆಟ್ಟಿಯ ಜೊತೆಗೆ ಇರುತ್ತಿದ್ದ. ಇದರಿಂದ ಸಫ್ವಾನ್ ಸುಹಾಸ್ ಶೆಟ್ಟಿಗೆ ಗತಿ ಕಾಣಿಸಲು ಯೋಜನೆ ರೂಪಿಸಿದ. ಈ ವಿಚಾರವನ್ನು ಸಫ್ವಾನ್ ಸುಹಾಸ್ ಶೆಟ್ಟಿಯಿಂದ ಹತ್ಯೆಗೀಡಾಗಿದ್ದ ಫಾಸಿಲ್‌ನ ಸಹೋದರ ಆದಿಲ್‌ಗೆ ತಿಳಿಸಿ ಸಹಕಾರ ಕೋರಿದ್ದ. ಆಗ ಆದಿಲ್ 5 ಲಕ್ಷ ರೂ. ನೀಡುವ ಭರವಸೆ ನೀಡಿದ್ದ ಅಲ್ಲದೇ, 2 ಲಕ್ಷ ರೂ.ಗಳನ್ನು ನೀಡಿದ್ದ. ತದನಂತರ ಯೋಜನೆ ರೂಪಿಸಿದ ಸಫ್ವಾನ್ ತನ್ನ ಸಹಚರರಾದ ಶಾಂತಿಗುಡ್ಡೆಯ ನಿಯಾಝ್, ಕಳವಾರು ಖಿರ್ಸುಗುಡ್ಡೆಯ ಕಲಂದರ್ ಶಾಫಿ, ದುಬೈನಲ್ಲಿ ಉದ್ಯೋಗದಲ್ಲಿದ್ದು, ಊರಿಗೆ ಬಂದಿದ್ದ ಮಹಮ್ಮದ್ ಮುಝಮ್ಮಿಲ್, ಚಿಕ್ಕಮಂಗಳೂರು ಜಿಲ್ಲೆಯ ಕಲಶದ ಚಾಲಕ ವೃತ್ತಿಯ ರಂಜಿತ್, ಶಾಮೀಯಾನ ಹೆಲ್ಪರ್ ಆಗಿದ್ದ ಕಲಶದ ನಾಗರಾಜ್, ಜೋಕಟ್ಟೆಯ ಆದಿಲ್ ಮೆಹರೂಫ್, ಅಜರುದ್ದೀನ್ ಯಾನೆ ಹಜಾದ್ ಕಳವಾರು ಆಶ್ರಯ ಕಾಲನಿ, ಅಬ್ದುಲ್ ಖಾದರ್ ಯಾನೆ ನೌಫಾಲ್ ಬದ್ರಿಯಾನಗರ ಬೆಳಪು ಮತ್ತು ನೌಶಾದ್ ಯಾನೆ ವಾಮಂಜೂರು ನೌಶಾದ್ ಯಾನೆ ಚೊಟ್ಟೆ ನೌಶಾದ್ ಅವರನ್ನು ಬಂಧಿಸಲಾಗಿದೆ. ಈ ಬಂಧಿತರ ಪೈಕಿ ನೌಶಾದ್ ಯಾನೆ ವಾಮಂಜೂರು ನೌಶಾದ್ ಈ ಹಿಂದೆ ಪಿಎಫ್‌ಐ ಸಂಘಟನೆಯಲ್ಲಿ ಸಕ್ರಿಯನಾಗಿದ್ದವನು.

2006ರಲ್ಲಿ ಹಿಂದೂ ಸಂಘಟನೆಗಳ ಮುಖಂಡ ಸುಖಾನಂದ

☞ 14




ಅಬ್ದುಲ್ ಖಖದಿರ್, ನೌಷದ್ ಹಾಗೂ ಅಜರುದ್ದೀನ್



ಸುಹಾಸ್ ಹತ್ಯೆಯ ಹಂತಕರಾದ ಅಬ್ದುಲ್ ಸಫ್ವಾನ್, ನಿಯಾಜ್, ಮೊಹಮ್ಮದ್ ಮುಸಮ್ಮೀರ್, ಕಲಂದರ್ ಶಾಫಿ, ಆದಿಲ್ ಮೆಹರೂಫ್, ನಾಗರಾಜ್ ಮೊಹಮ್ಮದ್ ರಿಜ್ವಾನ್ ಹಾಗೂ ರಂಜಿತ್

# ಭಾವಪೂರ್ಣ ಶ್ರದ್ಧಾಂಜಲಿ

ಪತ್ರಕರ್ತ ಮಿತ್ರ ನವೀನ್ ಕುಮಾರ್ ಕಜೆ ಕಳೆದ ಭಾನುವಾರ ಹೃದಯಾಘಾತಕ್ಕೀಡಾಗಿ ನಿಧನರಾಗಿದ್ದಾರೆ. ಶನಿವಾರ ರಾತ್ರಿ ಮಾಮೂಲಿಯಾಗೇ ಊಟ ಮಾಡಿ ಮಲಗಿದವರು, ಬೆಳಿಗ್ಗೆ ಎದ್ದಿಲ್ಲ! ಮಲಗಿರುವಾಗಲೇ ಕೊನೆಯುಸಿರು ಎಳೆದಿದ್ದಾರೆ. ಹೀಗೂ ಒಂದು ಅನಿರೀಕ್ಷಿತ ಸಾವು ಬರಬಹುದು ಅನ್ನೋದು ಈಗ ಸಾಮಾನ್ಯವಾಗಿಬಿಟ್ಟಿದೆ. ಮನುಷ್ಯನ ಜೀವ ಎಷ್ಟು ಕನಿಷ್ಠ ಮಟ್ಟಕ್ಕೆ ಇಳಿದಿದೆ ಎಂಬುದಕ್ಕೆ ನವೀನ್ ಹಠಾತ್ ಸಾವು ಒಂದು ನಿದರ್ಶನವಷ್ಟೇ. ಇದೇನೇ ಇರಲಿ, ನವೀನ್ ಜೀವನದ ಶೂನ್ಯವಸ್ಥೆಯಲ್ಲಿ ಬದುಕು ಕಟ್ಟಿಕೊಂಡದ್ದು ಇದೆಯಲ್ಲ, ಅದು ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕ ಹಾಗೂ ಮಾರ್ಗದರ್ಶಿ.



35 ವರ್ಷಗಳ ಹಿಂದೆ ತನ್ನ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕು ಪಂಜಾ ಗ್ರಾಮದಿಂದ ಮೈಸೂರಿಗೆ ಉದರ ನಿಮಿತ್ತ ಬಂದಾಗ ನವೀನ್‌ಗೆ ಎಲ್ಲಿ ಹೇಗೆ ಬದುಕು ಕಟ್ಟಿಕೊಳ್ಳಬೇಕೆಂಬ ಗುರಿಯೂ ಇರಲಿಲ್ಲ, ನೆಲೆಯೂ ಇರಲಿಲ್ಲ. ಹೀಗಾಗಿ ನವೀನ್ ಮಾಡದ ಉದ್ಯೋಗವಿಲ್ಲ, ಉದರನಿಮಿತ್ತಂ ಬಹುಕೃತ ವೇಷಂ ಎಂಬಂತೆ ಹಲವಾರು ಕೆಲಸ ಮಾಡಿದ. ಆದರೆ ನವೀನ್ ಗೆ ಕೈ ಹಿಡಿದದ್ದು ಕ್ಯಾಮೆರಾ. ಈಗ್ಗೆ 30 ವರ್ಷಗಳ ಹಿಂದೆ ಉದಯವಾಣಿ (ಹಾಲಿ ಇದ್ದದ್ದು ಹೊಸ ದಿಗಂತ) ದಿನಪತ್ರಿಕೆಯ ಹಿರಿಯ ಪತ್ರಕರ್ತ ಕೆ.ಜೆ. ಕುಮಾರ್ ಕೊಟ್ಟ ಸ್ಟಿಲ್ ಕ್ಯಾಮರಾದಲ್ಲಿ ಛಾಯಾಚಿತ್ರಕಾರನಾಗಿ ವೃತ್ತಿ ಬದುಕು ಆರಂಭಿಸಿದರು. ಆರಂಭದಲ್ಲಿ ಪತ್ರಿಕಾ ಛಾಯಾಚಿತ್ರಕಾರನಾಗಲು ಕೆಲಕಾಲ ಪ್ರಯತ್ನಿಸಿ ಸೋತ ನಂತರ ಖಾಸಗಿ ಛಾಯಾಚಿತ್ರಕಾರನಾಗಿ ವೃತ್ತಿ ಬದುಕು ಆರಂಭಿಸಿ ಇಂದಿನವರೆಗೂ, ಅದನ್ನೇ ಉಸಿರಾಗಿಸಿಕೊಂಡಿದ್ದರು. ಆ ಏದುಸಿರಿನಲ್ಲೇ ಪತ್ನಿ, ಮಕ್ಕಳ ಸಂಸಾರ ಮುನ್ನಡೆಸಿದರು. ಒಬ್ಬ ಯಶಸ್ವಿ ಗಂಡನ ಹಿಂದೆ ಪತ್ನಿ ಇರುತ್ತಾಳೆ ಅನ್ನುತ್ತಾರೆ. ಹಾಗೇ, ಒಂದು ಯಶಸ್ವಿ ಸಂಸಾರದ ಹಿಂದೆಯೂ ಸುಗುಣೆಯಾದವಳಿರುತ್ತಾಳೆ ಎಂಬುದು ಅಷ್ಟೇ ಸತ್ಯ. ಶ್ರೀಮತಿ ಕಜೆ ಅನಿಶ್ಚಿತ ಆದಾಯದಲ್ಲಿ ಬೇಸತ್ತು ಗೊಣಗದೆ, ಇರುವಷ್ಟರಲ್ಲೇ ಗಂಡ ಮತ್ತು ಮಕ್ಕಳ ಸಂಸಾರ ಸರಿದೂಗಿಸಿದ್ದರು. ಇದರಿಂದ ನವೀನ್ ಜೀವನದ ಅರ್ಧ ಕಷ್ಟ ಜಯಿಸಿದ್ದರು. ಇನ್ನುಳಿದರ್ಧ ಅವನ ಇಬ್ಬರೂ ಮಕ್ಕಳು ಪೂರೈಸಿದ್ದರು. ಅಲ್ಲಿಗೆ ಅವನ ಸಂಸಾರ ಪರಿಪೂರ್ಣ ನೆಮ್ಮದಿಯ ಹಾದಿಯತ್ತ ಸಾಗುತ್ತಿತ್ತು. ಆತನ ಇಬ್ಬರೂ ಮಕ್ಕಳು ವಿದ್ಯೆಯಲ್ಲಿ ಮುಂದಿದ್ದರು. ಅವರ ವಿದ್ಯಾಭ್ಯಾಸಕ್ಕೆ ಆರ್ಥಿಕವಾಗಿ ಬಸವಳಿದಾಗ ನಾವು ಸ್ನೇಹಿತರು ನಮ್ಮ ಕೈಲಾದಷ್ಟು ಸಹಾಯ ಮಾಡಿದ್ದೆವು. ಸಾಲದಾದಾಗ ಹಿರಿಯ ಪತ್ರಕರ್ತ ಎಸ್. ಪ್ರಕಾಶ್‌ಬಾಬು, ಮಾಜಿ ಲೋಕಾಯುಕ್ತ ಸಂತೋಷ ಹೆಗ್ಡೆ, ಕಾಗಲ್ಕರ್ ಮತ್ತಿತರ ದಾನಿಗಳಿಂದ ನೆರವು ಕೊಡಿಸಿದ್ದೆವು. ಮಗಳು ರಕ್ಷಾ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂಸಿಎನಲ್ಲಿ ಶೇ.92ರಷ್ಟು ಅಂಕ ಪಡೆದು, ಅಲ್ಲೇ ಉಪನ್ಯಾಸಕಿಯಾಗಿ ತಕ್ಷಣವೇ ನೇಮಕವಾದಳು! ಈಗ್ಗೆ ಆರು ತಿಂಗಳ ಹಿಂದೆ ಮಗಳು ಸಂಬಳ ತರುತ್ತಿರುವುದರಿಂದ ನನ್ನ ಆರ್ಥಿಕ ಸಂಕಷ್ಟ ನಿವಾರಣೆ ಆಯಿತು. ಎಂಬಿಎ ಮಾಡುತ್ತಿರುವ ಮಗನ ವಿದ್ಯಾಭ್ಯಾಸವನ್ನು ಅವಳೇ ನೋಡಿಕೊಳ್ಳುತ್ತಾಳೆ. ಇನ್ನೂ ಯಾರ ಬಳಿಯೂ ಹಣದ ನೆರವು ಕೇಳುವ ಅವಶ್ಯಕತೆ ಬರುವುದಿಲ್ಲ ಅಂತ ಆನಂದದಿಂದ ಹೇಳಿಕೊಂಡಿದ್ದರು ಕಜೆ.

ಅವರ ಮಾತಲ್ಲಿ ಜೀವನ ಸಾರ್ಥಕತೆಯ ನೆಮ್ಮದಿ ಭಾವ ಇಣುಕು ಹಾಕುತ್ತಿತ್ತು. ಇದೇ ಹುಮ್ಮಸ್ಸಿನಲ್ಲಿ ಕಿರು ಹಾಸ್ಯ ಚಿತ್ರಗಳನ್ನು ನಿರ್ಮಿಸಿ ನಿರ್ದೇಶಿಸಿ ಯುಟ್ಯೂಬ್ ನಲ್ಲಿ ಹಾಕುವ ಪರಿಪಾಠ ಬೆಳೆಸಿಕೊಂಡಿದ್ದರು. ಮೊನ್ನೆ ಶುಕ್ರವಾರವಷ್ಟೇ, ಮುಂದಿನ ಕಿರು ಚಿತ್ರದ ಥ್ಯಾಂಕ್ಸ್ ಕಾರ್ಡ್‌ನಲ್ಲಿ ನನ್ನ ಹೆಸರು ಹಾಕುತ್ತೇನೆ ಎಂದಿದ್ದರು. ಹಾಕಳಪ್ಪ ಅಂದಿದ್ದೆ. ಆದರೆ ಭಾನುವಾರ ಬೆಳ್ಳಂ ಬೆಳಿಗ್ಗೆ 6.30ಕ್ಕೆ ನವೀನ್ ಮೊಬೈಲ್‌ನಿಂದ ಕಾಲ್ ಬಂದಾಗ ಆಶ್ಚರ್ಯವಾಗಿತ್ತು. ಅವರ ಮಗ ಅಳುತ್ತ, ಅಪ್ಪ ರಾತ್ರಿ ಮಲಗಿದವರು ಬೆಳಿಗ್ಗೆ ಎದ್ದಿಲ್ಲ, ಕಾವೇರಿ ಆಸ್ಪತ್ರೆಗೆ ಕರೆ ತಂದಾಗ ಅಲ್ಲಿ ಜೀವ ಹೋಗಿದೆ ಅನ್ನುತ್ತಿದ್ದಾರೆ, ಬೇಗ ಬನ್ನಿ ಅಂಕಲ್ ಅಂದ!

ಅಣ್ಣನ ಮಗನ ಬೀಗರ ಔತಣ ಕೂಟಕ್ಕೆ ಹೋಗಲು ಅಣಿಯಾಗುತ್ತಿದ್ದ ನಾನೂ ಗೆಳೆಯ ರತ್ನಮ್ ಸ್ಟುಡಿಯೋ ಶಿವು ಜೊತೆ ಹೋಗಿ ಅಂತಿಮ ನಮನ ಸಲ್ಲಿಸಿ, ಅವರ ಹುಟ್ಟೂರಿಗೆ ಪಾರ್ಥಿವ ಶರೀರ ಕಳುಹಿಸಿಕೊಟ್ಟೆವು. ಭಾರವಾದ ಹೃದಯದಿಂದ ಮನೆಗೆ ಬರುವಾಗ ಅನ್ನಿಸಿದ್ದು ಮನುಷ್ಯನ ಜೀವ ಅದೆಷ್ಟು ಕ್ಷಣಿಕ ಅಂತ. ಮನುಷ್ಯ ಬಾಂಧವ್ಯಕ್ಕೆ ಮನುಷ್ಯ ಕೊಡುವ ಬೆಲೆ ಏನೂ? ಎಂದು ಯೋಚಿಸಿದಾಗ ಗೆಳೆಯ ರತ್ನಮ್ ಶಿವು ನಿಜಕ್ಕೂ ರತ್ನದಂತೆ ಕಂಡರು. ಪರಿಚಯವೇ ಇಲ್ಲದ ನವೀನ್ ತನ್ನಂತೆ ಒಬ್ಬ ಛಾಯಾಚಿತ್ರಕಾರ, ಅದರಲ್ಲೂ ಒಬ್ಬ ಮನುಷ್ಯ ಅಂತ ಮುಂಜಾನೆ ಸುಖ ನಿದ್ದೆ ಮರೆತು, ಕಾರು ಓಡಿಸಿಕೊಂಡು ಬಂದ ಅವರ ಹೃದಯ ವೈಶಾಲ್ಯತೆ ನನ್ನ ಮನಸ್ಸನ್ನು ಆರ್ದ್ರಗೊಳಿಸಿತು. ಜೀವ ಪರಿಮಿತ - ಜೀವನ ಅಪರಿಮಿತ. ಅದೂ ಅಪರಿಮಿತ ಬದುಕಿನಲ್ಲಿ ಪರಿಮಿತಿಯ ಆಪ್ತರಿದ್ದರೂ ಪರಿಪೂರ್ಣ ನಿರಾಳತೆ ಮೂಡಿಸುತ್ತೆ. ಹೋಗಿ ಬನ್ನಿ ನವೀನ್, ನಿಮ್ಮ ಬಾಳನೌಕೆ ಅರ್ಧ ಮಾರ್ಗದಲ್ಲೇ ನಿಲ್ಲುವುದಿಲ್ಲ. ನೀವು ಉಟ್ಟು ಹಾಕುತ್ತಿದ್ದ ಕೋಲನ್ನು ಹಿಡಿದು ಉಟ್ಟು ಹಾಕಿ ಸಾಗುವ ಬಲವನ್ನು ನಿಮ್ಮ ಮಗಳಿಗೆ ತುಂಬಿದ್ದೀರಿ, ಆಕೆ ಹೆಸರಿಗೆ ತಕ್ಕಂತೆ ನಿಮ್ಮ ಸಂಸಾರಕ್ಕೆ ರಕ್ಷೆ ಆಗಿರುತ್ತಾಳೆ. ಆರಾಮವಾಗಿ ಹೋಗಿಬನ್ನಿ, ನಿಮ್ಮ ಆತ್ಮಕ್ಕೆ ಶಾಂತಿ ಸಿಗಲಿ...

ಕಚಗುಳಿ

# ಗಂಡ ಅಲ್ಲ ಬ್ರೋಕರ್

ಟಿ.ವಿ. ಚಾನಲ್‌ವೊಂದರಲ್ಲಿ ಏರ್ಪಡಿಸಿದ್ದ ಆದರ್ಶ ದಂಪತಿ ಸ್ಪರ್ಧೆಯಲ್ಲಿ ಮೊದಲ ಸ್ಥಾನದಲ್ಲಿ ವಿಜೇತರಾಗಿ, ಎಲ್ಲರ ಗಮನ ಸೆಳೆದಿದ್ದರು ಮತ್ತು ಒಂದು ಲಕ್ಷ ರೂಪಾಯಿ ನಗದು ಬಹುಮಾನ ಸಹ ಅವರಿಗೆ ಬಂದಿತು.

ಗಂಡ – ಮಧುಸೂದನ. ಹೆಂಡತಿ ಮಂದಾರ ಮಾಲ. ಗಂಡ ಮಧುಸೂದನ ಪ್ರೈವೇಟ್ ಕಂಪನಿಯೊಂದರಲ್ಲಿ ಸಾಮಾನ್ಯ ಕ್ಲರ್ಕ್ ಆಗಿದ್ದಳು. ಸಂಬಳ ತುಂಬಾ ಕಡಿಮೆ. ಹೆಂಡತಿ ಚೆಲುವೆ ನಿಜ. ಆದರೆ ಬುದ್ಧಿವಂತೆ ಅಲ್ಲ. ಅವಳೂ ಸಹ ವಾಸ ಇರುವ ಬೀದಿಯಲ್ಲಿ ಮನೆಯ ಕ್ರಾಸ್‌ನಲ್ಲಿದ್ದ ಪ್ರೈವೇಟ್ ಶಾಲೆಗೆ ಹೋಗುತ್ತಿದ್ದಳು. ಅವಳ ಸಂಬಳ ಸಹ ತುಂಬಾ ಕಡಿಮೆ. ಈ ಚೆಲುವೆಯರಲ್ಲಿ ಚೆಲುವೆ ಸಾಮಾನ್ಯರಲ್ಲಿ ತೀರಾ ಸಾಮಾನ್ಯ ಆಗಿರುವ ಮಧುಸೂದನನನ್ನು ಯಾಕೆ ವಿವಾಹವಾದಳು ಅಂತ ಗೊತ್ತಿಲ್ಲ. ಅವನ ಬಾಹ್ಯರೂಪದ ಆಕರ್ಷಣೆಗೆ ಒಳಗಾಗಿ, ಅವನ ಹೀನಾಯ ಆರ್ಥಿಕ ಸ್ಥಿತಿ ಗೊತ್ತಿದ್ದರೂ ಸಹ, ಹೆತ್ತವರನ್ನು ವಿರೋಧಿಸಿ ಮದುವೆ ಆಗಿದ್ದಳು. ಆದರ್ಶ ದಂಪತಿ ಸ್ಪರ್ಧೆಯಲ್ಲಿ ಪ್ರಚಾರ ಪಡೆದಿದ್ದರೂ ಸಹ ತವರಿನವರು ಅಭಿನಂದಿಸಲಿಲ್ಲ ಎಂದು ಹೇಳಬಹುದು. ಇತ್ತೀಚೆಗೆ ಗಂಡನಲ್ಲಿ ಆಗಿದ್ದ ಬದಲಾವಣೆಯನ್ನು ಗುರುತಿಸಿದ್ದಳು.

ಆ ಬದಲಾವಣೆ ಏನು? ಹಣ... ವಿಪರೀತ ಹಣ ಬೇಗ ಮಾಡಬೇಕು. ಕಷ್ಟಪಡದೆ ತುಂಬಾ ಸುಲಭವಾಗಿ ತುಂಬಾ ಆದಾಯ ಬರುವ ರೀತಿ ಏನಾದರೂ ಮಾಡಬೇಕು. ಹೆಂಡತಿಯ ಜೊತೆ ಯಾವಾಗಲು ಸಹ ಹಣದ ವಿಚಾರ ಮಾತಾಡಿ ಅವಳಿಗೆ ಬೇಸರ, ಕೋಪ ಬರುವಂತೆ ಮಾಡಿಬಿಡುತ್ತಿದ್ದನು.

ಪ್ರಾರಂಭದಲ್ಲಿ ಅಂದುಕೊಂಡಿದ್ದೇನು? ಪಾಪ... ಬುದ್ಧಿ ತಿಳಿದಾಗಲಿಂದ ಬಡತನದಲ್ಲಿ ಬೆಳೆದಿರೋದ್ರಿಂದ ಸಹಜವಾಗಿಯೇ ಹಣದ ವ್ಯಾಮೋಹ ಉಂಟಾಗಿದೆ ಎಂದುಕೊಂಡಿದ್ದಳು. ಯಾವಾಗಲು ಅಡ್ಡದಾರಿಯಲ್ಲಿ ಸಂಪಾದನೆ ಮಾಡುವ ವಿಚಾರವನ್ನೇ ಮಾತಾಡುತ್ತಿದ್ದನು. ಅವಳು ರೇಗಾಡಿದ್ದಳು. ಬೈದು ಬುದ್ಧಿ ಹೇಳಿದ್ದಳು. ಆದರೆ ಅವನು ಬದಲಾಗಿರಲಿಲ್ಲ.

●●●

ಪ್ರೈವೇಟ್ ಶಾಲೆಯ ಪ್ರೆಸಿಡೆಂಟ್ ಚಂಗಪ್ಪ ಮಹಾನ್ ಚಪಲಗಾರ. ತೆಳ್ಳಗೆ-ಬೆಳ್ಳಗಿರುವ ಯುವತಿಯರಿಗೆ ತನ್ನ ಶಾಲೆಯಲ್ಲಿ ಕೆಲಸ ಕೊಟ್ಟಿದ್ದನು. ಕೆಲವರಿಗೆ ಹಣದ ಆಸೆ, ಆಮಿಷ ತೋರಿಸಿ ಒಲಿಸಿಕೊಂಡಿದ್ದನು. ಅವರನ್ನು ಬೇರೆ ಊರಿಗೆ ಹನಿಮೂನ್‌ಗೆ ಕರೆದುಕೊಂಡು ಹೋಗಿ ಮಜಾ ಮಾಡಿಕೊಂಡು ಬರುತ್ತಿದ್ದನು. ಆದರೆ ಎಲ್ಲರೂ ಆ ರೀತಿ ಇರಲು ಸಾಧ್ಯವೆ? ಇವನ ಕಿರುಕುಳ ತಡೆಯಲಾರದೆ ಕೆಲಸ ಬಿಟ್ಟಿದ್ದರು. ಇತ್ತೀಚೆಗೆ ಎರಡು ತಿಂಗಳಿಂದ ಚೆಲುವೆ ಮಂದಾರ ಮಾಲ ಟೀಚರ್ ಆಗಿ ಸೇರಿದ್ದಾಳೆ. ಅವಳ ಸೌಂದರ್ಯದಿಂದ ರೋಮಾಂಚನ ಉಂಟಾಗಿತ್ತು.

ತಥ್ ತೇರಿಕೆ... ಇಂತಹ ಅಪರೂಪಿನ ಚೆಲುವೆನ ಅನುಭವಿಸದಿದ್ದರೆ ಬದುಕಿದ್ದು ಏನು ಸಾರ್ಥಕ. ಇಷ್ಟೊಂದು ಹಣ ಸಂಪಾದನೆ ಮಾಡಿರೋದು ಯಾಕೆ? ಇವಳು ಆಗಾಗ ರಹಸ್ಯ ರತಿಯಾಗಿ ಸುಖ ಕೊಡುತ್ತಿದ್ದರೆ ನಾನು ಎಷ್ಟು ಲಕ್ಷ ಬೇಕಾದರೂ ಕೊಡ್ತೀನಿ ಎಂದು ಆಟ ಪ್ರಾರಂಭ ಮಾಡಿದ್ದನು. ಅವಳು ಒಪ್ಪಿರಲಿಲ್ಲ. ನಯವಾಗಿ ವಿರೋಧಿಸಿದ್ದಳು. ಕಿರುಕುಳ ವಿಪರೀತವಾದಾಗ ಗಂಡನಿಗೆ ಹೇಳಿದ್ದಳು. ನಾಳೆಯಿಂದ ಕೆಲಸಕ್ಕೆ ಹೋಗಲ್ಲ ಎಂದಿದ್ದಳು.

ಗಂಡನ ಮುಖ ಅರಳಿತ್ತು. ಏನೋ ಆಲೋಚನೆ ಮಿಂಚಿದ್ದರಿಂದ ಕಣ್ಣುಗಳು ಮಿನುಗಿದರು. ಅವನು ಹೇಳಿದ್ದೇನು?

"ಮಾಲ... ನೀನು ಸೌಂದರ್ಯ ರತಿ ಆಗಿರೋದ್ರಿಂದ ಆ ಪ್ರೆಸಿಡೆಂಟ್ ಇಷ್ಟಪಟ್ಟಿದ್ದಾರೆ. ಇದರಲ್ಲಿ ಅವರ ತಪ್ಪೇನಿದೆ. ಪ್ರತಿ ಸಾವಿರ ರೂಪಾಯಿಗೆ ಕಷ್ಟಪಡುತ್ತಿರುವ ನೀನು ಸ್ವಲ್ಪ ಬದಲಾಗಬೇಕು."

ಅವಳು ಗಾಬರಿಯಾದಳು.

"ನೀವು.... ನೀವು ಏನು ಹೇಳ್ತಾ ಇದ್ದೀರ? ಗಂಡನಾಗಿ ಈ ಮಾತಾಡಲು ನಾಚಿಕೆ ಆಗೋಲ್ವ? ಬದಲಾಗೋದು ಅಂದರೇನು?"

ಅವನು ಕೂಡಲೇ ಮಾತಿನ ಶೈಲಿಯನ್ನು ಬದಲಿಸುತ್ತಾ "ಏ ತಪ್ಪು ತಿಳಿಯಬೇಡ. ನಾನು ಆ ಅರ್ಥದಲ್ಲಿ ಹೇಳಿಲ್ಲ. ಆದರೆ ಕೆಲಸ ಬಿಟ್ಟರೆ ತೊಂದರೆ ಆಗುತ್ತದೆ."

"ಆ ಕಾಮುಕನ ಕಿರುಕುಳ ಸಹಿಸಲಾರೆ."

"ನಿನ್ನ ತಂಟೆಗೆ ಬರದಂತೆ ನಾನು ಬುದ್ಧಿವಂತಿಕೆಯಿಂದ ಆಟ ಆಡ್ತೀನಿ."

"ಪ್ರೆಸಿಡೆಂಟ್ ಪ್ರಭಾವಶಾಲಿ ರಾಜಕಾರಣಿಗಳ ಸಂಕಟ ಇರುವ ವ್ಯಕ್ತಿ. ರೌಡಿಗಳನ್ನು ಸಹ ಸಾಕಿಕೊಂಡಿದ್ದಾನೆ. ನೀವು ಅವನ ತಂಟೆಗೆ ಹೋಗಬೇಡಿ."

"ನಾನು ಆಗಲೇ ಹೇಳಲಿಲ್ವ. ನಾನು ಬುದ್ಧಿವಂತಿಕೆಯಿಂದ ಅವನಿಗೆ ಗೊತ್ತಾಗದ ರೀತಿ ಆಟ ಆಡಿ ನಿನ್ನ ತಂಟೆಗೆ ಬರದಂತೆ ಮಾಡ್ತೀನಿ."

"ಈ ತಿಂಗಳು ಪೂರ್ತಿ ಹೋಗ್ತೀನಿ. ಸಂಬಳ ತಗೊಂಡ ಮೇಲೆ ಗುಡ್‌ಬೈ ಹೇಳ್ತೀನಿ."

ಅವನಿಂದ ಪ್ರತಿಕ್ರಿಯೆ ಬರಲಿಲ್ಲ. ಏನೋ ಪ್ಲಾನ್ ಮಾಡುತ್ತಿದ್ದಾನೆ. ಅವನೀಗ "ಓಕೆ ನಿನಗೆ ಅಲ್ಲಿ ಕೆಲಸ ಮಾಡಲು ಆಗದಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಬಾ. ಬೇರೆ ಎಲ್ಲಾದರೂ ಕೆಲಸ ನೋಡಿದರಾಯಿತು."

●●●

ಚಂಗಪ್ಪನ ಕಾರಿಗೆ ಒಬ್ಬ ವ್ಯಕ್ತಿಗೆ ಎದುರಾಗಿ ಬಂದು "ನಮಸ್ಕಾರ ಸಾರ್ ನಾನು ನಿಮ್ಮ ಜೊತೆ ಪರ್ಸನಲ್ ಆಗಿ ಮಾತಾಡಬೇಕು" ಎಂದರು.

ಚಂಗಪ್ಪ "ನೀನ್ಯಾರು ಅಂತ ಗೊತ್ತಿಲ್ಲ. ನಿನ್ನ ಜೊತೆ ಪರ್ಸನಲ್ ಏನಿರುತ್ತೆ."

"ನಾನ್ಯಾರು ಅಂತ ಗೊತ್ತಾದರೆ ಮಾತಾಡಲು ಅವಕಾಶ ಕೊಡ್ತೀರ?"

"ಓ... ಹೌದಾ... ಯಾರು ನೀನು?"

ಅವನು ಹೇಳಿದನು.

ಚಂಗಪ್ಪನ ಮುಖ ಅರಳಿತು. "ಡ್ರೈವರ್ ನೀನು ಸ್ವಲ್ಪ ಹೊತ್ತು ಹೊರಗೆ ಹೋಗಿರು" ಎಂದು ಹೇಳಿ ಅವನನ್ನು ಕಾರಲ್ಲಿ ಕೂರಿಸಿಕೊಂಡನು.

ಇಬ್ಬರೂ ಮಾತಾಡುತ್ತಿದ್ದಾರೆ.

●●●

ಅವಳಿಗೆ ನಂಬಿಕೆ ಬರುತ್ತಿಲ್ಲ. ಇದು ಹೇಗೆ ಸಾಧ್ಯ ಆಗಿದೆ? ಇಷ್ಟೊಂದು ಹಣ ಹೇಗೆ ಬಂತು. ಅನುಮಾನಕ್ಕೆ ಕಾರಣ ಏನು? ವಿವಾಹವಾಗಿ ಮೊದಲ ವರ್ಷದ ವೆಡ್ಡಿಂಗ್ ಆ್ಯನಿವರ್ಸರಿಯನ್ನು ತುಂಬಾ ವೈಭವದಿಂದ ಆಚರಿಸಲು ಎಲ್ಲಾ ತಂದಿದ್ದಾನೆ. ಮೈಸೂರು ಸಿಲ್ಕ್ ಸೀರೆ, ಸೊಗಸಾದ ಉಂಗುರ, ನಾಲ್ಕು ಚಿನ್ನದ ಬಳೆಗಳು, ಮಲ್ಲಿಗೆ-ಕನಕಾಂಬರ, ಸಿಹಿತಿಂಡಿಗಳು.

ಅವನು ಈಗ ಹೆಂಡತಿಯ ಕೈಗೆ ಎರಡು ಲಕ್ಷ ರೂಪಾಯಿ ನಗದು ಹಣವನ್ನು ಕೊಟ್ಟಾಗ ಅವಳು ಪರಮಾಶ್ಚರ್ಯಗೊಂಡಳು. "ರೀ... ಇದೆಲ್ಲಾ ಏನು? ಇಷ್ಟೊಂದು ಹಣ ಎಲ್ಲಿಂದ ಬಂತು?"

"ನಿನಗೆ ಹೇಳಿರಲಿಲ್ಲ ನಾನು ರಿಯಲ್ ಎಸ್ಟೇಟ್ ಬಿಜಿನೆಸ್ ಮಾಡುತ್ತಿದ್ದೆ. ಎರಡು ಕೋಟಿಗಳ ಜಮೀನಿನ ಮಾರಾಟವಾಗಿ ನನಗೆ ತುಂಬಾ ಕಮೀಷನ್ ಬಂತು."

ಅವಳು ಸಂತೋಷ, ಆಶ್ಚರ್ಯದಿಂದ "ಏನು ನೀವು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೀರ. ಹಾಗಾದರೆ ನನಗ್ಯಾಕೆ ಹೇಳಲಿಲ್ಲ" ಎಂದಳು.

"ವೆಡ್ಡಿಂಗ್ ಆ್ಯನಿವರ್ಸರಿಗೆ ನಿನಗೆ ಸರ್‌ಪ್ರೈಸ್ ಆಗಿ ಗಿಫ್ಟ್ ಕೊಟ್ಟು ಆಮೇಲೆ ಹೇಳಿದರಾಯಿತು ಅಂತ ಗುಟ್ಟು ಮಾಡಿದ್ದೆ. ನನಗೆ ಇನ್ನು ಮುಂದೆ ಇಂತಹ ವ್ಯವಹಾರಗಳಿಂದ ತುಂಬಾ ಹಣ ಬರುತ್ತೆ. ನಾವು ಶ್ರೀಮಂತಿಕೆಯ ವೈಭವದಿಂದ ಜೀವನ ಮಾಡಬಹುದು" ಎಂದು ಹೇಳಿದನು.

ಅವಳಿಗೆ ತುಂಬಾ ಖುಷಿಯಾಗಿದ್ದರಿಂದ ಗಂಡನನ್ನು ತಬ್ಬಿಕೊಂಡು ಶಬ್ದ ಬರುವ ರೀತಿ ಚುಂಬಿಸಿದಳು. ಜೋಡಿ ಮಂಚಕ್ಕೆ ಅವನೇ ತುಂಬಾ ಆಸಕ್ತಿಯಿಂದ ಹೂವಿನ ಅಲಂಕಾರ ಮಾಡಿದನು. ಅವಳಿಗೆ ಗಂಡನ ಬಗ್ಗೆ ವಿಶೇಷ ಪ್ರೀತಿ ಮತ್ತು ಅಭಿಮಾನ ಉಂಟಾಗಿದೆ. ಈ ರಾತ್ರಿ ಪೂರ್ತಿ ಗಂಡ ನನ್ನನ್ನು ಆ ಸುಖದ ಕಡಲಲ್ಲಿ ತೇಲಾಡಿಸುತ್ತಾರೆ ಎಂಬ ಕಲ್ಪನೆಯಿಂದ ಅವಳ ಮೈ ಬೆಚ್ಚಗಾಯಿತು.

ಅವಳು ಮುಖ ತೊಳೆದು, ಲೈಟ್ ಆಗಿ ಮೇಕಪ್ ಮಾಡಿಕೊಂಡಳು. ಗಂಡ ತಂದಿದ್ದ ಹೊಸ ಸೀರೆ ಉಟ್ಟು ಮಲ್ಲಿಗೆ, ಕನಕಾಂಬರವನ್ನು ಮುಡಿದು ರೆಡಿಯಾದಳು.

ಮಧುಸೂದನ ಹೆಂಡತಿಯ ಸೌಂದರ್ಯವನ್ನು ಕಾಮಪರವಶನಾದವನ ರೀತಿ ನಟಿಸುತ್ತಾ ಹೊಗಳಿದನು.

ಕೇರಳಪುರದ ಸ್ಟಾರ್ ಮಿಲಿಟರಿ ಹೋಟೆಲ್‌ನಿಂದ ನಾನ್‌ವೆಜ್ ಊಟ ಮತ್ತು ಸ್ಪೆಷಲ್ ಐಸ್‌ಕ್ರೀಂ ತಂದಿದ್ದಾನೆ. ಅವಳಿಗೆ ಐಸ್‌ಕ್ರೀಂ ತುಂಬಾ ಇಷ್ಟ. ಅವಳು ಊಟ ಮಾಡುವ ಮೊದಲೇ ಐಸ್‌ಕ್ರೀಂ ತಿಂದು ಚಪ್ಪರಿಸಿದಳು. "ರೀ... ಇದರಲ್ಲಿ ಬೇರೆ ಏನೋ ವಾಸನೆ ಬರುತ್ತಿದೆ."

"ಐಸ್‌ಕ್ರೀಂ ಫಾರಿನ್ ಫ್ಲೇವರ್ ಹಾಕಿದ್ದಾರೆ. ತುಂಬಾ ಸೊಗಸಾಗಿರುತ್ತೆ."

ಅವಳು ಸ್ವಲ್ಪ ಊಟ ಮಾಡಿದಳು. ಆದರೆ ಅವಳಲ್ಲಿ ಬದಲಾವಣೆ ಆಗಲಾರಂಭಿಸಿತು. ಮೈ ಹಗುರವಾಗಿದೆ. ಕಡಿಮೆ ಪ್ರಮಾಗಿದಲ್ಲಿ ಮಾದಕತೆಯ ಅಮಲು ತಲೆಗೇರುತ್ತಿದೆ. ಅವಳನ್ನು ತಬ್ಬಿಕೊಂಡು ಮುದ್ದಾಡುತ್ತಾ ಬೆಡ್‌ರೂಮಿಗೆ ಕರೆತಂದು ಮಲಗಿಸಿ ಹೊಸ ಸೀರೆ, ರವಿಕೆ ಮತ್ತು ಪೆಟಿಕೋಟ್ ಅನ್ನು ತೆಗೆದನು.

ಅಬ್ಬ... ಎಂತಹ ಸುಖ! ಅವಳು ಅಮಲಿನಲ್ಲಿದ್ದರೂ ಸಹ ಸುಖದ ಅನುಭವ ಚೆನ್ನಾಗಿ ಆಗುತ್ತಿದೆ. ಅವಳು ಸ್ಪಂದಿಸುತ್ತಿದ್ದಾಳೆ. ವಿಕೃತ ಕಾಮದಾಟ ಆಡುತ್ತಿದ್ದರೂ ಸಹ, ಹೇಸಿಗೆ, ಅಸಹ್ಯ ಉಂಟಾಗುವ ಚಪಲದಾಟ ಆಡುತ್ತಿದ್ದರೂ ವಿರೋಧಿಸುವ ಸ್ಥಿತಿಯಲ್ಲಿ ಇರಲಿಲ್ಲ. ರಾತ್ರಿಪೂರ್ತಿ ಅವಳ ಸುಂದರವಾದ ದೇಹದ ಮೇಲೆ ಕಾಮದ ದಾಳಿ ಮಾಡಿ ಮಜಾ ಮಾಡಲಾಗಿದೆ.

ಬೆಳಗಿನ ಒಂಭತ್ತು ಗಂಟೆ. ಅವಳಿಗೆ ಎಚ್ಚರವಾಗಿದೆ. ಪೂರ್ಣ ಬೆತ್ತಲಾಗಿದ್ದಾಳೆ. ಹಾಲಿನ ಕೆನೆಯ ಬಣ್ಣದ ದೇಹದ ಕೆಲವು ಕಡೆ ಕಚ್ಚಿರುವ ಗಾಯಗಳಾಗಿವೆ, ಎದೆ ಸೌಂದರ್ಯ ಬಾತುಗೊಂಡಿದೆ.

ಗಂಡ ಮಧುಸೂದನ ಕಾಫಿ ಲೋಟ ಹಿಡಿದು ಬಂದಾಗ ರೇಗಾಡಿದಳು. "ನನಗ್ಯಾಕೆ ಅಮಲು ಬಂತು. ನೀವ್ಯಾಕೆ ಇಷ್ಟು ಕಾಮ ಸನ್ನಿ ಹಿಡಿದವರಂತೆ ಕಚ್ಚಿ, ಗಾಯ ಮಾಡಿದ್ದೀರ. ನೀವು ಯಾವತ್ತೂ ಈ ರೀತಿ ಕೆಟ್ಟ ವರ್ತನೆ ಮಾಡಿರಲಿಲ್ಲ" ಎಂದಳು.

"ಐಸ್‌ಕ್ರೀಂ ಜಾಸ್ತಿ ತಿಂದಿದ್ದೀಯ. ನೆನ್ನೆ ರಾತ್ರಿ ಹೇಳಿರಲಿಲ್ವ. ಅದರಲ್ಲಿ ಫಾರಿನ್ ಫ್ಲೇವರ್ ತುಂಬಾ ಜಾಸ್ತಿ ಇತ್ತು ಅಂತ. ನಿನಗೆ ಇಷ್ಟ ಅಂತ ತುಂಬಾ ತಿಂದೆ. ಇನ್ನು ಮುಂದೆ ನಿನಗೆ ಬರೀ ಲೋಕಲ್ ಐಸ್‌ಕ್ರೀಂ ತಂದುಕೊಡ್ತೀನಿ."

ಅವಳು ರೇಗಾಡಿದಳು.

"ಆ ದರಿದ್ರ ಐಸ್‌ಕ್ರೀಂ ಬೇಡ."

"ನೆನ್ನೆ ನೀನು ತುಂಬಾ... ತುಂಬಾ ಸೆಕ್ಸಿಯಾಗಿ ಕಾಣುತ್ತಿದ್ದೆ. ನನಗೆ ಕಾಮದ ಉದ್ರೇಕ ವಿಪರೀತವಾಗಿದ್ದರಿಂದ ಒರಟಾಗಿ ವರ್ತಿಸಿದೆ. ಸಾರಿ... ಸಾರಿ ನನ್ನ ಬಂಗಾರ. ಇನ್ನು ಮುಂದೆ ಆ ರೀತಿ ಆಗೋಲ್ಲ" ಎಂದು ಅವಳನ್ನು ತಬ್ಬಿಕೊಂಡು ಸಂತೈಸಿದನು.

●●●

ನಾಲ್ಕು ದಿನಗಳ ಕಾಲ ಸೆಕ್ಸ್ ಆಟ ಬೇಡ ಎಂದಿದ್ದಳು. ಗಾಯಗಳು ವಾಸಿಯಾಗಿ ನಾನು ಚೇತರಿಸಿಕೊಳ್ಳಬೇಕು ಎಂದಿದ್ದಳು.

ಎರಡು ದಿನ ಕಳೆಯಿತು. ಅವನು ಹೆಂಡತಿಯನ್ನು ಗೋಗರೆದು ಬೇಡಿಕೊಂಡನು. ಅವಳು ಕಂಡೀಷನ್ ಹಾಕಿದಳು. ಅಮಲೇರುವ ಪದಾರ್ಥ ಕೊಡಬಾರದು ಮತ್ತು ನೀವು ಒರಟಾಗಿ ವರ್ತಿಸಬಾರದು ಎಂದಳು. ಮಧುಸೂದನ ಒಪ್ಪಿಕೊಂಡನು.

ರಾತ್ರಿ ಒಂಭತ್ತು ಗಂಟೆ. ಅವಳು ಪ್ರತಿದಿವಸ ರಾತ್ರಿ ಮಲಗುವ ಮೊದಲು ಕೇಸರಿ ಹಾಲನ್ನು ಕುಡಿಯುತ್ತಾಳೆ. ಮಧುಸೂದನ ತಾನೇ ಅವಳಿಗೆ ಕೇಸರಿ ಬೆರೆಸಿರುವ ಹಾಲನ್ನು ತಂದುಕೊಟ್ಟನು. ಅವಳು ಹಾಲು ಕುಡಿದಳು. ಈಗ ಅವಳೊಂದಿಗೆ ಬೆಡ್‌ರೂಮಿಗೆ ಬಂದು ರೋಮಾನ್ಸ್ ಪ್ರಾರಂಭ ಮಾಡಿದನು. ಕೆಲವೇ ಕ್ಷಣಗಳಲ್ಲಿ ಅವಳು ಗಾಢವಾದ ನಿದ್ರೆಗೆ ಒಳಗಾದಳು.

ಬೆಳಗಿನ ಎಂಟು ಗಂಟೆಗೆ ಅವಳಿಗೆ ಎಚ್ಚರವಾಯಿತು. ಗಂಡ-ಹೆಂಡತಿ ಬೆತ್ತಲಾಗಿ ತಬ್ಬಿಕೊಂಡು ಮಲಗಿದ್ದಾರೆ. ಸಂಭೋಗ ನಡೆದಿರುವುದು ವೀರ್ಯಕಲೆಯ ಅಂಟಿನಿಂದ ಗೊತ್ತಾಗಿದೆ. ಏನೋ ಅನುಮಾನ ಬರುತ್ತಿದೆ. ನನಗ್ಯಾಕೆ ಸುಖದ ಅನುಭವ ಆಗಲಿಲ್ಲ. ಉದ್ರೇಕಕಾರಿ ಕಾಮದಾಟ ಆಡುತ್ತಿದ್ದರೂ ಎಚ್ಚರವಾಗದಷ್ಟು ಗಾಢವಾದ ನಿದ್ರೆ ಯಾಕೆ ಬಂತು? ಗಂಡನನ್ನು ಕೇಳಲಿಲ್ಲ. ಅವಳಿಗೆ ಈಗ ಎಲ್ಲೋ ಒಂದು ಕಡೆ ಅನುಮಾನ ಕಾಡುತ್ತಿದೆ.

●●●

ಅವಳು ಶಾಲೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಪ್ರೆಸಿಡೆಂಟ್ ವಿಪರೀತ ಲೈಂಗಿಕ ಕಿರುಕುಳ ಕೊಡುತ್ತಿದ್ದನು ಮತ್ತು ಅವಳನ್ನು ಹನಿಮೂನ್ ಟ್ರಿಪ್‌ಗೆ ಬಾ ಅಂತ ಒತ್ತಾಯ ಮಾಡುತ್ತಿದ್ದರಿಂದ ಕೆಲಸ ಬಿಟ್ಟಿದ್ದಳು. ಅವಳೀಗ ಗಂಡ ಕೆಲಸಕ್ಕೆ ಮಾಡುತ್ತಿರುವ ಕಂಪನಿಯಲ್ಲಿ ಸೇರಬೇಕು ಎಂದು ತೀರ್ಮಾನ ಮಾಡಿ ಅದಕ್ಕಾಗಿ ಗಂಡನ ಜೊತೆ ಹೋಗುತ್ತಿದ್ದಾಳೆ.

ಆಕಸ್ಮಿಕವಾಗಿ ಎದುರಾದನು ಶಾಲೆಯ ಪ್ರೆಸಿಡೆಂಟ್. ಇವಳ ಕಡೆ ನೋಡಿ ಏನೋ ಒಂದು ರೀತಿ ನಗಾಡಿದನು.

ಅವಳ ಮುಖ ಕೆಂಪಾಯಿತು.

ಮಧುಸೂದನ ಅವಳನ್ನು ಅಲ್ಲಿಂದ ಬೇಗ ಕರೆದುಕೊಂಡು ಹೊರಟನು.

●●●

ಕಂಪನಿ ಬಾಸ್ ಬಾಬುರಾವ್ ಇವಳ ಸೌಂದರ್ಯ ಕಂಡು ಬೆರಗಾದನು. ಅವಳಿಗೆ ತುಂಬಾ ಸಂಬಳ ಫಿಕ್ಸ್ ಮಾಡಿ, ಚೆನ್ನಾಗಿ ಟ್ರೈನಿಂಗ್ ಕೊಡಲು ಮ್ಯಾನೇಜರ್‌ಗೆ ಹೇಳಿದನು. ಅವಳ ಮೇಲೆ ರೇಗಾಡಬೇಡಿ. ಅವಳು ನಿಧಾನವಾಗಿ ಕೆಲಸ ಕಲಿಯಲಿ ಎಂದಿದ್ದನು.

ಬಾಸ್‌ಗೆ ಚೆಲುವೆಯರ ಚಪಲ ಜಾಸ್ತಿ ಇದೆ ಎಂದು ಗೊತ್ತಿದ್ದರಿಂದ ಒಳಗೊಳಗೆ ನಗಾಡಿಕೊಂಡರು.

ಎರಡು ದಿನಗಳಾಗಿದೆ. ಕಂಪನಿ ಬಾಸ್ ಏನಾದರೂ ನೆಪ (ಕೆಲಸದ) ಮಾಡಿಕೊಂಡು ಅವಳನ್ನು ಚೇಂಬರ್‌ಗೆ ಕರೆಸಿಕೊಳ್ಳುತ್ತಾನೆ ಮತ್ತು ಅವಳ ದೇಹ ಸೌಂದರ್ಯವನ್ನು ಹತ್ತಿರದಿಂದ ನೋಡಿ ಆರಾಧಿಸುತ್ತಾ ವ್ಯವಹಾರದ ವಿಚಾರ ಕಡಿಮೆ ಮಾತಾಡಿ, ಹಣ ಮತ್ತು ಶ್ರೀಂತಿಕೆಯ ವೈಭವದ ವಿಚಾರವಾಗಿ ಮಾತಾಡುತ್ತಾನೆ.

ಅವಳಿಗೆ ಅರ್ಥವಾಗಿದೆ.

ಸ್ಕೂಲ್ ಪ್ರೆಸಿಡೆಂಟ್ ರೀತಿ ಕಂಪನಿ ಬಾಸ್ ಸಹ ಹೆಣ್ಣುಗಳ ಚಪಲಗಾರ. ನಾನು ತುಂಬಾ ಎಚ್ಚರಿಕೆಯಿಂದ ಇರಬೇಕು ಎಂದು ತೀರ್ಮಾನ ಮಾಡಿದ್ದಾಳೆ.

●●●

ನ್ಯೂವ್ ಈಯರ್ ಡೇ ಫಂಕ್ಷನ್ ಅನ್ನು ಕಂಪನಿ ಬಾಸ್ ತುಂಬಾ ವೈಭವ ಮತ್ತು ಆಡಂಬರದಿಂದ ಆಚರಿಸಿದರು. ಕಂಪನಿ ಆಫೀಸ್‌ನ ಕೆಲಸಗಾರರನ್ನು ಪಾರ್ಟಿಗೆ ಆಹ್ವಾನಿಸಲಾಗಿತ್ತು. ಗುಂಡು-ತುಂಡಿನ ಪಾರ್ಟಿ.

ಕಂಪನಿಯ ಮಹಿಳಾ ಉದ್ಯೋಗಿಗಳು ಇವರ ಜೊತೆ ಆತ್ಮೀಯವಾಗಿ ಬೆರೆತಿದ್ದರು. ಮಾಲ ಹೇಳಿದ್ದಳು "ನಂಗೆ ಕುಡಿತದ ಅಭ್ಯಾಸ ಇಲ್ಲ ಬೇಡ... ಒತ್ತಾಯ ಮಾಡಬೇಡಿ" ಎಂದಿದ್ದಳು.

ಆದರೂ ತುಂಬಾ ಬಲವಂತ ಮಾಡಿ, ಬಿಯರ್ ಮತ್ತು ವಿಸ್ಕಿ ಕಾಕ್‌ಟೈಲ್ ಮಾಡಿ ಕುಡಿಸಿದ್ದರು.

ಅವಳಿಗೆ ಅಮಲೇರಿತ್ತು! ಗಂಡ ತಬ್ಬಿಕೊಂಡು ಕರೆದುಕೊಂಡು ಹೋಗುತ್ತಿರುವುದು ಅವಳ ಗಮನಕ್ಕೆ ಬಂದಿತ್ತು.

ಬೆಳಗಿನ ಎಳೂವರೆ. ಅವಳಿಗೆ ಎಚ್ಚರವಾಗಿದೆ. ಅವಳು ಮನೆಯ ಮಂಚದಲ್ಲಿ ಬೆತ್ತಲಾಗಿ ಮಲಗಿದ್ದಾಳೆ. ಆಗ ಅವಳ ದೃಷ್ಟಿಗೆ ಬಿದ್ದಿತು. ಟೀಪಾಯಿಯ ಮೇಲೆ ಇದ್ದ ಗೋಲ್ಡನ್ ರಿಸ್ಟ್ ವಾಚ್ ಮತ್ತು ಮೊಬೈಲ್ ಹ್ಯಾಂಡ್‌ಸೆಟ್! ಕಂಪನಿ ಬಾಸ್ ನದ್ದು ಎಂದು ಅವಳಿಗೆ ಖಚಿತವಾಗಿ ಗೊತ್ತಾಗಿದೆ. ಅವಳು ಗಂಡನ ಜೊತೆ ಜಗಳ ಆಡಿ ಬಾಯಿ ಬಿಡಿಸಿದಳು.

ಸತ್ಯ ಬಹಿರಂಗ ಆಗಿದೆ. ಲಕ್ಷಗಳನ್ನು ಸಂಪಾದಿಸಿ ಬೇಗ ಶ್ರೀಮಂತನಾಗಬೇಕು ಅಂತ ಗಂಡ, ಹೆಂಡತಿಯನ್ನು ಕಾಮುಕ ಶ್ರೀಮಂತರ ಜೊತೆ ಮಲಗಿಸುತ್ತಿದ್ದನು. ಅವಳಿಗೆ ಬೇರೆ ಬೇರೆ ರೀತಿಯಲ್ಲಿ ಮತ್ತು ಬರುವಂತೆ ಮಾಡಿ ಬೇರೆ ಬೇರೆ ಗಂಡಸರಿಗೆ ಅವಕಾಶ ಮಾಡಿಕೊಡುತ್ತಿದ್ದನು.

ಮಾಲ ಗಂಡನಿಂದ ದೂರಾಗಿದ್ದಾಳೆ.

ಡೈವೋರ್ಸ್‌ಗೆ ಅರ್ಜಿ ಹಾಕಿದ್ದಾಳೆ.

# ಮೈಸೂರಿನ ಹನಿಟ್ರ್ಯಾಪ್ ಅಡ್ಡಾದಲ್ಲಿ ಖತರ್‌ನಾಕ್ ಪೊಲೀಸ್ ಪೇದೆ

9 ☞

ಲಕ್ಷಾಂತರ ರೂಪಾಯಿಯನ್ನು ಅವರಿಂದ ಕೀಳುತ್ತಾರೆ. ಇವರ ವಯ್ಯಾರಕ್ಕೆ ಮರುಳಾದವರ ಬದುಕೇ ಬರ್ಬಾತ್ ಆಗುತ್ತದೆ.

ಹನಿಟ್ರ್ಯಾಪ್ ದಂಧೆಯನ್ನು ಮನೆಯಲ್ಲಿಯೇ ಹೈಫೈ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಹೆಂಗಸರು ಮತ್ತು ಗಿರಾಕಿಗಳನ್ನು ಹಿಡಿದು ತರುತ್ತಿದ್ದ ತಲೆ ಹಿಡುಕರೇ ರಾಜಾರೋಷವಾಗಿ ಮಾಡುತ್ತಿದ್ದರು. ಇದೀಗ ಹಾಗಿಲ್ಲ








ಗ್ರಾಮೀಣ ಮಟ್ಟದ ಹುಡುಗಿ ಮತ್ತು ಒಂದಷ್ಟು ಮಂದಿ ಸೇರಿಕೊಂಡು ಮಾಡಲು ಶುರು ಮಾಡಿದ್ದಾರೆ. ಹನಿಟ್ರ್ಯಾಪ್‌ನಲ್ಲಿ ಬಹಳಷ್ಟು ವಿಧಗಳಿದ್ದು ಕೆಲವರು ಯುವತಿಯರನ್ನು ಮುಂದೆ ಬಿಟ್ಟು ಆ ಮೂಲಕ ಗಂಡಸರನ್ನು ತಾವಿದ್ದ ಸ್ಥಳಕ್ಕೆ ಕರೆಯಿಸಿಕೊಂಡು ಯುವತಿಯರ ಜತೆಗೆ ಇದ್ದಾಗ ಎಂಟ್ರಿ ಕೊಟ್ಟು ಆತನನ್ನು ಹೆದರಿಸಿ, ಬೆದರಿಸಿ ಆತ ಯುವತಿ ಜತೆಗಿರುವ ವೀಡಿಯೋ ಮಾಡಿ ಹಣ ವಸೂಲಿ ಮಾಡುವುದು, ಇನ್ನು ವೀಡಿಯೋ ಕಾಲ್ ಮಾಡುತ್ತಾ ಎದುರಿನ ವ್ಯಕ್ತಿಯನ್ನು ಮಾತಿನಿಂದಲೇ ಉದ್ರೇಕಿಸಿ ಆತನ ಬೆತ್ತಲೆ ಚಿತ್ರವನ್ನು ಸೆರೆ ಹಿಡಿದು ಬಳಿಕ ಅದನ್ನು ಆತನಿಗೆ ಕಳುಹಿಸಿ ಹಣ ಪೀಕುವುದು ಹೀಗೆ ಹಲವು ರೀತಿಯಲ್ಲಿ ಹನಿಟ್ರ್ಯಾಪ್ ಮೂಲಕ ಹಣ ಕೀಳುವುದು ನಡೆಯುತ್ತಿದೆ.

ಇನ್ನು ಹುಡುಗಿ ವಿಚಾರದಲ್ಲಿ ಬೆತ್ತಲೆಯಾದ ಗಂಡಸರು ಮಾನ ಮರ್ಯಾದೆಗೆ ಹೆದರುವುದರಿಂದ ಕೇಳಿದಷ್ಟು ಹಣ ನೀಡುವುದಲ್ಲದೆ, ದೂರು ನೀಡಿದರೆ ಮರ್ಯಾದೆ ಮಣ್ಣು ಪಾಲಾಗುತ್ತದೆ ಎಂಬ ಭಯದಿಂದ ತೆಪ್ಪಗಿರುತ್ತಾರೆ. ಇದು ದಂಧೆ ನಡೆಸುವವರಿಗೆ ಟಾನಿಕ್ ಆಗಿದೆ. ಹೀಗಾಗಿ ನಾವು ಸಿಕ್ಕಿ ಬೀಳಲ್ಲ ಎಂಬ ಧೈರ್ಯದಿಂದಲೇ ಆಗಾಗ್ಗೆ ಹೊಸದೊಂದು ಮಿಕಗಳನ್ನು ಹುಡುಕುತ್ತಾ ಹೋಗುತ್ತಾರೆ. ಇದೀಗ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ಹನಿಟ್ರ್ಯಾಪ್ ಪ್ರಕರಣ ಬೆಳಕಿಗೆ ಬಂದಿದೆ. ಇದು ನಿಜಕ್ಕೂ ಸಮಾಜ ಅಚ್ಚರಿ ಪಡುವ ವಿಚಾರವೇ. ಏಕೆಂದರೆ ನಗರ ಪ್ರದೇಶಗಳಿಂದ ಗ್ರಾಮೀಣ ಪ್ರದೇಶಗಳಿಗೂ ಹಬ್ಬಿರುವುದು ಯೋಚಿಸುವ ವಿಚಾರವೇ. ಅಷ್ಟೇ ಅಲ್ಲದೆ ಈ ದಂಧೆಯಲ್ಲಿ ಪೊಲೀಸ್ ಪೇದೆಯೂ ಭಾಗಿಯಾಗಿರುವುದು ಪೊಲೀಸ್ ಇಲಾಖೆ ಮತ್ತು ಸರ್ಕಾರಕ್ಕೆ ಆಗಿರುವ ಅವಮಾನ ಎಂದರೆ ತಪ್ಪಾಗಲಾರದು.

ಇಷ್ಟಕ್ಕೂ ಏನಿದು ಹನಿಟ್ರ್ಯಾಪ್ ಪ್ರಕರಣ? ನಡೆದಿದ್ದೇನು? ಎಂಬುದನ್ನು ನೋಡುತ್ತಾ ಹೋದರೆ ಯುವತಿಯನ್ನು ಬಳಸಿಕೊಂಡು ಬಟ್ಟೆ ವ್ಯಾಪಾರಿಯನ್ನು ಆಕೆಯ ಮಗ್ಗುಲಿಗೆ ಕೆಡವಿ ಆತನಿಂದ 10 ಲಕ್ಷ ವಸೂಲಿ ಮಾಡಲು ಮುಂದಾಗಿರುವುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ. ಈ ಜಾಲದ ಆರೋಪಿಗಳಲ್ಲಿ ಸಮಾಜದ ಅಂಕುಡೊಂಕು ತಿದ್ದಿ ಆರೋಪಿಗಳನ್ನು ಮಟ್ಟ ಹಾಕಬೇಕಾದ ಪೊಲೀಸ್ ಪೇದೆಯೇ ಭಾಗಿಯಾಗಿರುವುದು ಮತ್ತೊಂದು ಆಘಾತಕಾರಿ ಸುದ್ದಿಯಾಗಿದೆ.

ಅವಳು 23 ವರ್ಷದ ಸುಂದರ ಯುವತಿ, ಮುಂದಿನ ಸುಂದರ ಬದುಕನ್ನು ಕಟ್ಟಿಕೊಳ್ಳುವ ವಯಸ್ಸಿನಲ್ಲಿಯೇ ಆಕೆ ಅಡ್ಡದಾರಿಯಿಂದ ಲಕ್ಷ, ಲಕ್ಷ ಪೀಕಿ ಜಾಲಿಯಾಗಿರುವ ಕನಸು ಕಂಡಿದ್ದಳು. ಆಕೆಗೆ ಹನಿಟ್ರ್ಯಾಪ್‌ನಂತಹ ಕೃತ್ಯಕ್ಕೆ ಕೈಹಾಕಲು ಜತೆಗಿದ್ದ ಖತರ್‌ನಾಕ್ ಮೂರ್ತಿ, ಮಾಕನಹಳ್ಳಿ ಪಾಳ್ಯ ನಿವಾಸಿ, ಹುಣಸೂರು ಗ್ರಾಮಾಂತರ ಠಾಣೆ ಪೊಲೀಸ್ ಪೇದೆ ಶಿವಣ್ಣ ಹಾಗೂ ಗಣೇಶ್ ಗೌಡ ಕುಮ್ಮಕ್ಕು ನೀಡಿದ್ದರು. ಅವಳನ್ನು ಮುಂದಿಟ್ಟುಕೊಂಡೇ 10ಲಕ್ಷ ಹಣವನ್ನು ಬಗಲಿಗೆ ಹಾಕಿಕೊಳ್ಳಲು ತಯಾರಿ ನಡೆಸಿದ್ದರು. ಅದರಂತೆ ಪಿರಿಯಾಪಟ್ಟಣ ಬಳಿಯ ಕಂಪಲಾಪುರದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ದಿನೇಶ್ ಕುಮಾರ್‌ನನ್ನು ಆರೋಪಿಗಳು ಟಾರ್ಗೆಟ್ ಮಾಡಿದ್ದರು.

ಆ ಯುವತಿ ಕಂಪಲಾಪುರದಲ್ಲಿದ್ದ ದಿನೇಶ್ ಕುಮಾರ್‌ನ ಬಟ್ಟೆ ಅಂಗಡಿಗೆ ಹೋಗಿ ಬಟ್ಟೆ ಖರೀದಿಸಿದ್ದಲ್ಲದೆ ದಿನೇಶ್ ಕುಮಾರನ ಮೊಬೈಲ್ ನಂಬರ್ ಪಡೆದುಕೊಂಡು ಪರಿಚಯ ಮಾಡಿಕೊಂಡಿದ್ದಳು. ಹೀಗೆ ಇಬ್ಬರ ನಡುವೆ ಮೊಬೈಲ್ ನಂಬರ್ ವಿನಿಮಯವಾಗಿತ್ತು. ಬಳಿಕ ಅವಳೇ ಚಾಟಿಂಗ್ ಶುರು ಮಾಡಿದ್ದಳು. ನಂತರ ಆಕೆ ಆತನೊಂದಿಗೆ ತುಂಬಾ ಕ್ಲೋಸ್ ಆಗಿ ಮಾತನಾಡುತ್ತಾ ಬಗಲಿಗೆ ಬೀಳಿಸಿಕೊಂಡಿದ್ದಳು. ಇಬ್ಬರು ತುಂಬಾ ಸಲಿಗೆಯಿಂದ ಮಾತನಾಡುತ್ತಾ ಮನೆ ತನಕ ಬರುವಷ್ಟರ ಮಟ್ಟಿಗೆ ನಂಬಿಕೆ ಮೂಡಿತ್ತು. ಮಿಕ ಬೀಳುತ್ತಿದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಜತೆಗಿದ್ದ ಮೂರ್ತಿ, ಪೇದೆ ಶಿವಣ್ಣ ಹಾಗೂ ಗಣೇಶ್ ಗೌಡರಿಗೆ ಮಾಹಿತಿ ನೀಡಿದ್ದಾಳೆ. ಎಲ್ಲರೂ ಸೇರಿ ಬಟ್ಟೆ ವ್ಯಾಪಾರಿ ದಿನೇಶ್ ಕುಮಾರ್‌ನನ್ನು ಬಲೆಗೆ ಕೆಡವಿ ಹಣ ವಸೂಲಿ ಮಾಡಲು ಸಜ್ಜಾಗಿದ್ದಾರೆ.

ಜೂನ್ 14ರಂದು ಮುಹೂರ್ತ ಫಿಕ್ಸ್ ಮಾಡಿದ ತಂಡ ಅವನನ್ನು ಕರೆಯಿಸಿಕೊಳ್ಳಲು ಸ್ಕೆಚ್ ಹಾಕಿತ್ತು. ಅವಳು ವಾಟ್ಸಾಪ್ ಮೂಲಕ ಚಾಟಿಂಗ್ ಮಾಡುತ್ತಾ ನಾನು ಚಿಕ್ಕಮ್ಮನ ಮನೆ ಮರಡಿಯೂರು ಗ್ರಾಮದಲ್ಲಿದ್ದು ಮನೆಯಲ್ಲಿ ಯಾರೂ ಇಲ್ಲ ನಾನು ಕಳಿಸುವ ಲೋಕೇಷನ್‌ಗೆ ಬನ್ನಿ ಎಂದು ದಿನೇಶ್ ಕುಮಾರ್‌ನನ್ನು ಕರೆದಿದ್ದಾಳೆ. ಒಬ್ಬಳೇ ಇದ್ದಾಳೆ ಎಂದಾಗ ಆತನ ಮೈಮನಸ್ಸು ಪುಳಕಗೊಂಡಿದ್ದಾಳೆ. ಒಬ್ಬಳೇ ಇದ್ದು ನನ್ನನ್ನು ಕರೆದಿದ್ದಾಳೆ ಎಂದರೆ ಮಜಾ ಮಾಡಲೇ ಇರಬಹುದೆಂದು ಖುಷಿ ಖುಷಿಯಾಗಿ ಅವಳು ಹೇಳಿದ ಸ್ಥಳಕ್ಕೆ ಹೋಗಿದ್ದಾನೆ. ಅವಳಿದ್ದ ಮನೆಗೆ ಹೋದವನನ್ನು ಆಕೆ ಖುಷಿಯಿಂದಲೇ ಬರಮಾಡಿಕೊಂಡಿದ್ದಾಳೆ.

ಮನೆಯ ಕೊಠಡಿಗೆ ಕರೆದೊಯ್ದು ಅವನನ್ನು ಲೈಂಗಿಕ ಕ್ರಿಯೆಗೆ ಪ್ರಚೋದಿಸಿದ್ದಾಳೆ. ಇದೇ ವೇಳೆ ಅದೇ ಮನೆಯಲ್ಲಿದ್ದ ಮೂರ್ತಿ ಮತ್ತು ಪೇದೆ ಶಿವಣ್ಣ ಅಲ್ಲಿಗೆ ಬಂದು ಇಲ್ಲಿ ಅನೈತಿಕ ಚಟುವಟಿಕೆ ಮೇಲೆ ದಾಳಿ ಎಂಬಂತೆ ನಾಟಕ ಮಾಡಿ ದಿನೇಶ್ ಕುಮಾರ್‌ಗೆ ಥಳಿಸಿದ್ದಲ್ಲದೆ, ಅವನು ಅವಳ ಜತೆಗಿರುವ ಫೋಟೋ, ವೀಡಿಯೋ ಮಾಡಿದ್ದಾರೆ. ಅಲ್ಲದೆ ಇದನ್ನು ಪೊಲೀಸ್ ಸ್ಟೇಷನ್‌ಗೆ ಕೊಡುವುದಾಗಿ ನಿನ್ನನ್ನು ಒದ್ದು ಒಳಗೆ ಹಾಕುವುದಾಗಿ ಬೆದರಿಸಿದ್ದಾರೆ. ಮಾನ ಮರ್ಯಾದೆಗೆ ಅಂಜಿದ ಆತ ಬಿಟ್ಟು ಬಿಡುವಂತೆ ಬೇಡಿಕೊಂಡಿದ್ದಾನೆ. ಈ ವೇಳೆ ಅವರು ಬೆದರಿಸಿ 10 ಲಕ್ಷ ಕೊಟ್ಟರೆ ಬಿಡುವುದಾಗಿ ಹೇಳಿದ್ದಾರೆ. ಇಲ್ಲದೆ ಹೋದರೆ ಒಳಗೆ ಹಾಕುವುದಲ್ಲದೆ ವೀಡಿಯೋ ವೈರಲ್ ಮಾಡುವುದಾಗಿ ಬೆದರಿಸಿದ್ದಾರೆ.

ಹೆದರಿದ ದಿನೇಶ್ ಕುಮಾರ್ ತನ್ನ ಸಹೋದರ ಮಹೇಂದ್ರ ಚೌದರಿಗೆ ಫೋನ್ ಮಾಡಿ 10 ಲಕ್ಷ ರೂ. ಹಣವನ್ನು ತೆಗೆದುಕೊಂಡು ಬಂದು ಪೊಲೀಸ್ ಪೇದೆ ಶಿವಣ್ಣನಿಗೆ ನೀಡುವಂತೆ ಹೇಳಿದ್ದಾನೆ. ಆದರೆ ಹಣವನ್ನು ತೆಗೆದುಕೊಂಡು ಹೋಗುವ ಮುನ್ನ ದಿನೇಶನ ಸಹೋದರ ಮಹೇಂದ್ರ ಚೌದರಿಗೆ ಅನುಮಾನ ಬಂದಿದ್ದು ಆತ ನೇರವಾಗಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಇನ್ಸ್‌ಪೆಕ್ಟರ್ ದೀಪಕ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ☯

# ಸುಹಾಸ್ ಹತ್ಯೆ ತನಿಖೆ ಎನ್‌ಐಎ ಹೆಗಲಿಗೆ!

12 ☞

ಶೆಟ್ಟಿ ಅವರನ್ನು ಹೊಸಬೆಟ್ಟುವಿನ ಮಾರ್ಬಲ್ ಟ್ರೇಡ್ ಅಂಗಡಿಯ ಬಾಗಿಲಲ್ಲಿ ಹಾಡುಹಗಲೇ ಕೊಲೆಗೈದ ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದವನು. ಆ ಹತ್ಯೆಯನ್ನು ಪಿಎಫ್‌ಐ ಸಂಘಟನೆಯೇ ಬಜಪೆಯಲ್ಲಿ ನಡೆದಿದ್ದ ಶಾರದೋತ್ಸವದ ವಿವಾದದ ಹಿನ್ನೆಲೆಯಲ್ಲಿ ಆಯೋಜಿಸಿತ್ತು ಮತ್ತು ಯಶಸ್ವಿಯಾಗಿತ್ತು. ಪೊಲೀಸರು ಎಲ್ಲಾ ಆರೋಪಿಗಳನ್ನು ಬಂಧಿಸಿದ್ದರು. ಪ್ರಮುಖ ಆರೋಪಿಗಳಿಬ್ಬರಾದ ಮುಲ್ಕಿ ರಫೀಕ್ ಮತ್ತು ಬುಲೆಟ್ ಸುಧೀರ್ ಅವರನ್ನು ಎನ್‌ಕೌಂಟರ್ ಮಾಡಲಾಗಿತ್ತು. ಈ ಪ್ರಕರಣದ ಆರೋಪಿಗಳು ಸಾಕ್ಷ್ಯಾಧಾರಗಳ ಕೊರತೆಯಿಂದ ನ್ಯಾಯಾಲಯದಿಂದ ಖುಲಾಸೆ ಯಾಗಿದ್ದರು.

ತದನಂತರ ಚೊಟ್ಟೆ ನೌಶಾದ್ ಹಾಸನದಲ್ಲಿ ಹೋಟೆಲ್ ಮಾಡಿಕೊಂಡು ನಿಷೇಧಿತ ಪಿಎಫ್‌ಐ ಸಂಘಟನೆಯೊಂದಿಗೆ ಸಕ್ರಿಯನಾಗಿದ್ದ. ಆತ ಬಜಪೆ ಕಿನ್ನಿಪದವಿನ ತರುಣಿಯೊಬ್ಬಳನ್ನು ವಿವಾಹವಾಗಿದ್ದ, ಆಗಿಂದಾಗ ಬಜಪೆಗೆ ಬರುತ್ತಿದ್ದ ಮತ್ತು ಇಲ್ಲಿನ ಕೆಲವು ಕ್ರಿಮಿನಲ್‌ಗಳೊಂದಿಗೆ ಸಂಪರ್ಕ ಹೊಂದಿದ್ದ. ಈ ಸಂಪರ್ಕದ ಕೊಂಡಿಯಾಗಿಯೇ ನೌಶಾದ್‌ಗೆ ಶಾಂತಿಗುಡ್ಡೆಯ ನೌಫಾಲ್‌ನ ಪರಿಚಯವಾಗಿತ್ತು ಮತ್ತು ಆತ ಕೂಡಾ ಕೊಲೆಯೂ ಸೇರಿದಂತೆ ಕೆಲವು ಕ್ರಿಮಿನಲ್ ಪ್ರಕರಣಗಳಲ್ಲಿ ಒಳಗೊಂಡಿದ್ದ. ಇವರಿಬ್ಬರೂ ಸೇರಿಕೊಂಡು ಭಜರಂಗದಳದ ಕಾರ್ಯಕರ್ತರಾಗಿದ್ದ ಸುಹಾಸ್ ಶೆಟ್ಟಿಗೆ ಮುಹೂರ್ತ ಇಟ್ಟಿದ್ದರು ಮತ್ತು ಅದರಲ್ಲಿ ಯಶಸ್ವಿಯಾಗಿದ್ದರು.

ಯಾವಾಗ ಚೊಟ್ಟೆ ನೌಶಾದ್‌ನನ್ನು ಸಿಸಿಬಿ ಪೊಲೀಸರು ಎತ್ತಾಕಿಕೊಂಡು ಬಂದರೋ ಆಗ ಈ ಹತ್ಯೆಯ ಹಿಂದೆ ನಿಷೇಧಿತ ಪಿಎಫ್‌ಐ ಸಂಘಟನೆಯ ಕೈವಾಡ ಖಚಿತವಾಗಿತ್ತು. ಇದನ್ನೇ ಮುಖ್ಯವಾಗಿ ಇಟ್ಟುಕೊಂಡು ಜಿಲ್ಲೆಯ ಬಿಜೆಪಿ ಶಾಸಕರು, ಸಂಸದರು, ಸುಹಾಸ್ ಶೆಟ್ಟಿಯ ಹೆತ್ತವರನ್ನು ಸೇರಿಸಿಕೊಂಡು ರಾಜ್ಯಪಾಲರಿಗೆ ವಿಸ್ತೃತವಾದಂತಹ ಮನವಿಯನ್ನು ಸಲ್ಲಿಸಿದರು. ಅವರು ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ಒಪ್ಪಿಸಬೇಕು ಎಂದು ಕೇಂದ್ರ ಗೃಹ ಇಲಾಖೆಗೆ ಶಿಫಾರಸು ಮಾಡಿದರು. ಅದನ್ನು ಕೇಂದ್ರ ಗೃಹ ಇಲಾಖೆ ಮನ್ನಿಸಿ ಎನ್‌ಐಎ ತನಿಖೆಗೆ ಆದೇಶ ಹೊರಡಿಸಿದೆ. ಈಗಾಗಲೇ ತನಿಖೆ ಆರಂಭವಾಗಿದೆ. ಈ ಹತ್ಯಾ ಪ್ರಕರಣದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಯಾರೆಲ್ಲ ಶಾಮೀಲಾಗಿದ್ದಾರೋ ಯಾರೆಲ್ಲ ಹಣಕಾಸಿನ ನೆರವು ಒದಗಿಸಿದ್ದಾರೋ ಅವರೆಲ್ಲರಿಗೂ ಎನ್‌ಐಎ ಅಧಿಕಾರಿಗಳು ಬಲೆ ಬೀಸಲಿದ್ದಾರೆ.

ಈ ಹಿಂದೆ ಪ್ರವೀಣ್ ನೆಟ್ಟಾರು ಪ್ರಕರಣವನ್ನು ಎನ್‌ಐಎ ತನಿಖೆ ನಡೆಸಿತ್ತು. ಕೇವಲ ಮೂರು ಮಂದಿ ನೇರವಾಗಿ ಭಾಗಿಯಾಗಿದ್ದ ಈ ಪ್ರಕರಣದಲ್ಲಿ ಒಟ್ಟು 27 ಮಂದಿಯನ್ನು ಎನ್‌ಐಎ ಬಂಧಿಸಿ ಜೈಲಿಗಟ್ಟಿದೆ. ಇನ್ನೂ ಮೂವರಿಗಾಗಿ ಶೋಧ ನಡೆಸುತ್ತಿದೆ. ಅವರೂ ಸೆರೆ ಸಿಕ್ಕಿದ ಸಂದರ್ಭದಲ್ಲಿ ಅವರಿಗೆ ಯಾರೆಲ್ಲ ಸಹಾಯ ಸಹಕಾರ ನೀಡಿದ್ದಾರೋ ಅವರನ್ನು ಆ ಕೊಲೆ ಪ್ರಕರಣದಲ್ಲಿ ಎನ್‌ಐಎ ಬಂಧಿಸಲಿದೆ. ಅದೇ ರೀತಿ ಸುಹಾಸ್ ಶೆಟ್ಟಿ ಕೊಲೆ ಪ್ರಕರಣದಲ್ಲೂ ಕನಿಷ್ಠ 25ಕ್ಕೂ ಹೆಚ್ಚು ಮಂದಿ ಜೈಲು ಪಾಲಾಗುವುದರಲ್ಲಿ ಸಂಶಯವಿಲ್ಲ. ಎನ್‌ಐಎ ಅಧಿಕಾರಿಗಳ ಎದುರು ಪರೋಟ ಕಥೆ ಹೇಳಿದರೆ ಅದು ನಂಬುವಂತಹದ್ದಲ್ಲ. ಈ ಪ್ರಕರಣದ ಪ್ರಮುಖ ಆರೋಪಿಗಳನ್ನು



ಸುಹಾಸ್ ಶೆಟ್ಟಿಯ ಮೃತದೇಹ


ಪೊಲೀಸರಿಗೆ ಸರೆಂಡರ್ ಮಾಡಿಸಲಾಗಿದೆ ಎನ್ನುವಂತಹ ಮಾಹಿತಿಗಳಿವೆ. ಆ ವಿಚಾರ ತನಿಖೆಯಲ್ಲಿ ಬೆಳಕಿಗೆ ಬಂದರೆ ಕೆಲವು ಪೊಲೀಸ್ ಅಧಿಕಾರಿಗಳೂ ಎನ್‌ಐಎ ತನಿಖೆಗೆ ಒಳಪಡಲಿದ್ದಾರೆ. ☯

# ಶಿವಣ್ಣನ ಸಂಭ್ರಮಿಸೋಣ!

ಈಯಪ್ಪ ಒಂಥರ ಮ್ಯಾಗ್ನೆಟಿಕ್ ಪರ್ವ. ವಯಸ್ಸಾಗ್ತಾ ಆಗ್ತಾ, ಅದೆಷ್ಟು ಮಾಗ್ತಿದ್ದಾರೋ. ತೀರದ ಸೆಳೆತ. ಜೆನ್ಯೂನೆಸ್ ಅನ್ನೋದು ವ್ಯಕ್ತಿಯ ನಿಜವಾದ ಸೌಂದರ್ಯ. ಬಹುಶಃ, ಅದೇ ಇರಬಹುದು ಇವರ ವ್ಯಕ್ತಿತ್ವಕ್ಕೆ ಇಷ್ಟೊಂದು ಬ್ಯೂಟಿ ತುಂಬಿರೋದು. ಸ್ಯಾಂಡಲ್ ವುಡ್‌ನಲ್ಲಿ ಶಿವಣ್ಣ ಒಬ್ಬರಿಗೇ ಇಂಥ ವ್ಯಕ್ತಿತ್ವ ಇರೋದು. ನಿಮಗೆ ನೀವೇ ಸಾಟಿ ಶಿವಣ್ಣ...

ನಾನು ಇತ್ತೀಚೆಗೆ ಕೆಲಸದ ನಿಮಿತ್ತ ರಾಯಚೂರಿಗೆ ಭೇಟಿ ಕೊಟ್ಟಾಗ, ಅಲ್ಲಿನ ದೇವದಾಸಿ ಸಮುದಾಯದ ಹೆಣ್ಮಕ್ಕಳನ್ನ ಮಾತಾಡಿಸ್ತಾ ಇದ್ದಾಗ, ಒಂದು ಅಪರೂಪದ ವಿಷಯ ಗೊತ್ತಾಯ್ತು. ಪುನೀತ್ ಸರ್ ನೆಡೆಸುತ್ತಿದ್ದ ಒಂದು ಚಾರಿಟೇಬಲ್ ಟ್ರಸ್ಟ್ ಮುಖಾಂತರ, ಅದೆಷ್ಟೋ ದೇವದಾಸಿ ಕುಟುಂಬದ ಕುಡಿಗಳು, ಈ ಜಾಲದಿಂದ ಮುಕ್ತಿ ಪಡೆದು, ಎಜುಕೇಶನ್ ಮುಂದುವರೆಸಿ, ವಿವಿಧ ಉದ್ಯೋಗ ಗಿಟ್ಟಿಸಿಕೊಂಡು ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. (ಕಲಬುರ್ಗಿ, ರಾಯಚೂರು ಭಾಗದಲ್ಲಿ ಈಗ ದೇವದಾಸಿ ಪದ್ಧತಿ ಆಲ್‌ಮೋಸ್ಟ್ ಕೊನೆಯಾಗಿದೆ ಅನ್ನೋದು ಅಲ್ಲಿನ ಕೆಲವು ನಂಬಲರ್ಹ ಸಾಮಾಜಿಕ ಕಾರ್ಯಕರ್ತರಿಂದ ಗೊತ್ತಾಯ್ತು)

ಆ ಟ್ರಸ್ಟಿನ ಜವಾಬ್ದಾರಿಯನ್ನ ಈಗ ಶಿವಣ್ಣ ಮತ್ತು ಗೀತಾ ಮೇಡಮ್ ಮುಂದುವರೆಸಿಕೊಂಡು ಹೋಗ್ತಿದ್ದಾರೆ ಅಂತಲೂ ಗೊತ್ತಾಯ್ತು! ಈ ವಿಚಾರ ನನಗೆ ಈ ಮೊದಲು ಗೊತ್ತಿರಲಿಲ್ಲ. ಕೇಳಿದ ಕ್ಷಣ ಕಣ್ಣಾಲಿಗಳು ಒದ್ದೆಯಾದ್ವು. ಇವ್ರ ಆರೋಗ್ಯ, ಆಯಸ್ಸು ಇನ್ನಷ್ಟು ಗಟ್ಟಿಯಾಗಿರಲಿ.




ಅಂದಹಾಗೆ, ಶಿವಣ್ಣ ಸ್ಯಾಂಡಲ್ ವುಡ್‌ಗೆ ಎಂಟ್ರಿ ಕೊಟ್ಟು 40 ವರ್ಷ ಆದವು. ಯಡವಟ್ಟು ಕಮಲ್ ಹಾಸನ್ ಗಲಾಟೆಯಲ್ಲಿ ನಾವ್ಯಾರು ಶಿವಣ್ಣನನ್ನು ಸಂಭ್ರಮಿಸಲೇ ಇಲ್ಲ! ಒಂದಂತೂ ಸತ್ಯ.

ಅಪ್ಪನ ಹೆಸರು ಸಿನಿಮಾ ಉದ್ಯಮಕ್ಕೆ ಕಾಲಿಡಲು 'ರೆಡ್ ಕಾರ್ಪೆಟ್' ಆಗಿರಬಹುದು. ಆದರೆ ಮೂರು ತಲೆಮಾರುಗಳ ಪ್ರೇಕ್ಷಕರಿಗೆ 'ಸೂಪರ್ ಸ್ಟಾರ್' ಆಗಿ ಉಳಿದು, ನಾಲ್ಕನೆ ತಲೆಮಾರಿಗೆ ಮುಂದುವರೆಯಲು ಯಾರಿಗೂ ಅಪ್ಪನ ಹೆಸರೂ ಸಹಾಯ ಮಾಡುವುದಿಲ್ಲ. ಸಿನಿಮಾ ಉದ್ಯಮ ಮಾತ್ರ ಅಲ್ಲ, ಯಾವ ಉದ್ಯಮದಲ್ಲೂ ಅಪ್ಪ ಎಷ್ಟೇ ಹಣ ಮತ್ತು ಹೆಸರು ಮಾಡಿಟ್ಟಿದ್ದರೂ ಅದನ್ನು ಉಳಿಸಿಕೊಂಡು, ಮುಂದುವರೆಸಿಕೊಂಡು ಹೋಗಲು ಮಕ್ಕಳಲ್ಲಿ ಸ್ವಂತ ಪ್ರತಿಭೆ ಇದ್ದರೆ ಮಾತ್ರ ಸಾಧ್ಯ.

ಧೀರೂಭಾಯಿ ಅಂಬಾನಿಯ ಇಬ್ಬರ ಮಕ್ಕಳಲ್ಲಿ ಒಬ್ಬ ಮಗ ಮಾತ್ರ ಅಪ್ಪನನ್ನು ಮೀರಿಸುವ ಯಶಸ್ಸು ಕಂಡಿರುವುದು. ಭಾರತೀಯ ಚಿತ್ರರಂಗದ ಲೆಜೆಂಡುಗಳ ಮಕ್ಕಳಲ್ಲಿ ಗೆದ್ದ ಮಕ್ಕಳಿಗಿಂತ, ಸೋತ ಮಕ್ಕಳೇ ಹೆಚ್ಚು. ತನ್ನತನ ಹಾಗೂ ಸತ್ವ ಇಲ್ಲದಿದ್ದರೆ ರಾಜ್‌ಕುಮಾರ್ ಹೆಸರಿನಿಂದಲೇ ಶಿವರಾಜ್ ಕುಮಾರ್ ಇಷ್ಟು ದೂರ ಕ್ರಮಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗೆ ರಾಜ್‌ಕುಮಾರ್ ಹೆಸರಿನಿಂದ ಸೂಪರ್ ಸ್ಟಾರುಗಳಾಗಲು ಸಾಧ್ಯವಿದ್ದರೆ ಆ ಕುಟುಂಬದಿಂದ ಕನಿಷ್ಟ 10 ಜನ ಸೂಪರ್ ಸ್ಟಾರುಗಳಾಗಬೇಕಿತ್ತು. ಆದರೆ ಪ್ರೇಕ್ಷಕರ ಮನಸ್ಸನ್ನು ಗೆದ್ದಿದ್ದು ಶಿವಣ್ಣ ಮತ್ತು ಅಪ್ಪು ಮಾತ್ರ.


ತಮಿಳು ಸೂಪರ್ ಸ್ಟಾರ್ ರಜನಿಕಾಂತ್ ಹೇಳ್ತಾರೆ; ಒಬ್ಬ ರಾಜ್‌ಕುಮಾರ್ ಹತ್ತು ಎಂಜಿಆರ್ ಮತ್ತು ಶಿವಾಜಿ ಗಣೇಶನ್ ಅವರಿಗೆ ಸಮ ಅಂತ. ಒಬ್ಬ ಶಿವಣ್ಣ ಸರಳತೆ ಹಾಗೂ ಸಜ್ಜನಿಕೆಯಲ್ಲಿ ಹತ್ತು ಕಮಲ್ ಹಾಸನರಿಗೆ ಸಮ. ಆ ಕಾರಣದಿಂದಲೇ ಕನ್ನಡ ಚಿತ್ರೋದ್ಯಮದಲ್ಲಿ ಶಿವಣ್ಣನ ಪ್ರತಿಭೆಗಿಂತ ಅವರಿಗಿರುವ ಮಾರ್ಕೆಟ್ ಹಾಗೂ ಹೆಸರನ್ನೆ ಹೆಚ್ಚಾಗಿ ದುಡಿಸಿಕೊಳ್ಳಲಾಗಿದೆ.

ಕನ್ನಡ ಚಿತ್ರರಂಗದ ಮಾರುಕಟ್ಟೆ ಮೊದಲಿನಿಂದಲೂ ಒಂದು ಚೌಕಟ್ಟಿನೊಳಗೆ ಉಳಿದುಕೊಂಡ ಕಾರಣ ಶಿವಣ್ಣನಂತಹ ಪ್ರತಿಭೆ ಕರ್ನಾಟಕದ ಆಚೆಗೆ ಪರಿಚಯ ಆಗಲಿಲ್ಲ. ಆದರೆ ಶಿವಣ್ಣ ಭಾರತ ಚಿತ್ರರಂಗದ ಯಾವ ನಟರಿಗೂ ಕಮ್ಮಿಯಿಲ್ಲದವರು. ಸಿನಿಮಾ ಕ್ರೇಜು ಬಹಳ ಕಡಿಮೆ ಇರುವ ಕರ್ನಾಟಕದಲ್ಲಿ, ಕಂಡವರಿಗೆಲ್ಲ ಜೈಕಾರ ಹಾಕದ, ತಲೆಯ ಮೇಲೆ ಕೂರಿಸಿಕೊಳ್ಳದ, ಅಳೆದು ತೂಗಿ ಒಪ್ಪಿಕೊಳ್ಳುವ ಜನರ ನಾಡಿನಲ್ಲಿ ನಲವತ್ತು ವರ್ಷ 'ಸೂಪರ್ ಸ್ಟಾರ್' ಆಗಿ ಉಳಿದಿರುವುದೇ ಅದಕ್ಕೆ ಸಾಕ್ಷಿ. ಈ ಸಂದರ್ಭದಲ್ಲಿ ಕನ್ನಡ ಚಿತ್ರರಂಗದವರು ಶಿವಣ್ಣನನ್ನು ಅದ್ದೂರಿಯಾಗಿ ಸಂಭ್ರಮಿಸಬೇಕು. ಸದ್ಯಕ್ಕೆ ಬೇರೆ ಭಾಷೆಯ ಜನಪ್ರಿಯ ನಟರು ಶಿವಣ್ಣನ ನಲವತ್ತು ವರ್ಷಗಳ ವೃತ್ತಿಜೀವನದ ಪ್ರಯಾಣಕ್ಕೆ ಅಭಿನಂದಿಸಿ ಸಂಭ್ರಮಿಸುತ್ತಿದ್ದಾರೆ.

ಈ ನಲವತ್ತು ವರ್ಷಗಳಲ್ಲಿ ಶಿವಣ್ಣ ಪ್ರತಿನಿಧಿಸಿದ್ದು ರಾಜ್‌ಕುಮಾರ್ ಪರಂಪರೆಯನ್ನಲ್ಲ, ಕರ್ನಾಟಕದ ಸಾಂಸ್ಕೃತಿಕ ಭಾಗವಾದ ಸಿನಿಮಾ ಉದ್ಯಮವನ್ನು. ಮೊನ್ನೆಗೂ, ನೆನ್ನೆಗೂ, ಇಂದಿಗೂ, ನಾಳೆಗೂ ಶಿವಣ್ಣ ಪ್ರತಿನಿಧಿಸುವುದು ಅದನ್ನೇ. ರಾಜ್‌ಕುಮಾರ್ ಇಲ್ಲದಿದ್ದರೆ... ಎಂಬ ಕೊಂಕು ಯಾಕೆ...? ರಾಜ್‌ಕುಮಾರ್ ಇಲ್ಲದಿದ್ದರೆ ಕನ್ನಡ ಹಾಗೂ ಕರ್ನಾಟಕದ ಸಂಸ್ಕೃತಿಯ ಒಂದು ಭಾಗವಾಗಿ ಶಿವಣ್ಣ ಇದ್ದಾರೆ. ಕನ್ನಡಿಗರು ಯಾವ ಕಾರಣಕ್ಕೂ ಶಿವಣ್ಣನನ್ನು ಬಿಟ್ಟುಕೊಡುವುದು ಸಾಧ್ಯವೇ ಇಲ್ಲ.. ಏನಂತೀರಿ...

# ನಮ್ಮ 'ಬೇಡರ ಕಣ್ಣಪ್ಪ'ನಿಗೂ ಈ ಕಣ್ಣಪ್ಪನಿಗೂ ಹೋಲಿಕೆಯೇ ಇಲ್ಲಾ!

ಮಂಚು ವಿಷ್ಣು ನಟನೆಯ ಬಹು ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾ 'ಕಣ್ಣಪ್ಪ' ಚಿತ್ರದ ಟ್ರೇಲರ್ ಜೂನ್ 14ರಂದು ಬಿಡುಗಡೆ ಆಗಿದೆ. ಟ್ರೇಲರ್‌ನಲ್ಲೇ ಎಲ್ಲ ಅತಿಥಿ ಪಾತ್ರಗಳ ದರ್ಶನವನ್ನು ಮಾಡಿಸಿದ್ದಾರೆ. ಕನ್ನಡಿಗರು ನೋಡಿದ 'ಬೇಡರ ಕಣ್ಣಪ್ಪ', 'ಶಿವ ಮೆಚ್ಚಿದ ಕಣ್ಣಪ್ಪ'ನಿಗೂ ತೆಲುಗರ 'ಕಣ್ಣಪ್ಪ'ನಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದು ಟ್ರೇಲರ್ ನೋಡಿದಾಗಲೇ ತಿಳಿಯುತ್ತದೆ.




ತೆಲುಗಿನ ಈ ಕಣ್ಣಪ್ಪ ಭಕ್ತ ಕಣ್ಣಪ್ಪನಲ್ಲ, ಮಾಸ್ ಹೀರೋ ಕಣ್ಣಪ್ಪ! ಕಣ್ಣಪ್ಪ ಎಂದೊಡನೆ ಕನ್ನಡಿಗರಿಗೆ ನೆನಪಾಗುವುದು ಡಾ. ರಾಜ್‌ಕುಮಾರ್ ಅವರು ಮೊಟ್ಟ ಮೊದಲು ನಾಯಕ ನಟರಾಗಿ ನಟಿಸಿದ 'ಬೇಡರ ಕಣ್ಣಪ್ಪ' ಸಿನಿಮಾ. ಮೇಯಪ್ಪನ್ ನಿರ್ಮಾಣ ಹಾಗೂ ಹೆಚ್.ಎಲ್.ಎನ್. ಸಿಂಹ ನಿರ್ದೇಶನದ ಬೇಡರ ಕಣ್ಣಪ್ಪ ರಾಜ್ ಕುಮಾರ್ ಅವರ ಅಭಿನಯದಲ್ಲಿ ಅದ್ಭುತವಾಗಿ ಮೂಡಿ ಬಂದಿತ್ತು. ಭಕ್ತಿರಸವನ್ನೇ ಹೊಂದಿದ್ದ ಆ ಸಿನಿಮಾ 1954 ರಲ್ಲಿ ಬಿಡುಗಡೆ ಆಗಿತ್ತು. ಆ ಸಿನಿಮಾ ಬಿಡುಗಡೆ ಆಗಿ 70 ವರ್ಷವಾದರೂ ಜನಮಾನಸದೊಳಗೆ ಇನ್ನೂ ಹಚ್ಚ ಹಸಿರಾಗಿ ಉಳಿದಿದೆ. ಅದೇ ಸಿನಿಮಾವನ್ನು ಆಧರಿಸಿ ಶಿವ 'ಮೆಚ್ಚಿದ ಕಣ್ಣಪ್ಪ' ನಿರ್ಮಿಸಲಾಗಿತ್ತು.




ಈ ಸಿನಿಮಾನಲ್ಲಿ ಶಿವರಾಜ್ ಕುಮಾರ್ ಬೇಡರ ಕಣ್ಣಪ್ಪನಾಗಿ ಪಾತ್ರದಲ್ಲಿ ನಟಿಸಿದ್ದರು. ಅಷ್ಟೇನೂ ಹಿಟ್ ಆಗಿರಲಿಲ್ಲ. ವಿಶೇಷವೇನೆಂದರೆ, ಅಂದು ಕಣ್ಣಪ್ಪನಾಗಿ ಅಭಿನಯಿಸಿದ್ದ ರಾಜ್, ಮಗನಿಗಾಗಿ ಪುನರ್ ನಿರ್ಮಿಸಿದ್ದ ಈ ಚಿತ್ರದಲ್ಲಿ ಶಿವನ ಪಾತ್ರ ನಿರ್ವಹಿಸಿದ್ದರು! ಇದೀಗ ನೆರೆಯ ತೆಲುಗು ಚಿತ್ರರಂಗದಲ್ಲಿ ಇದೇ ಬೇಡರ ಕಣ್ಣಪ್ಪ ಕಥೆಯನ್ನು ಇಟ್ಟುಕೊಂಡು ಕಣ್ಣಪ್ಪ ಚಿತ್ರಿಸಿದ್ದಾರೆ. ಇದು ಪ್ಯಾನ್ ಇಂಡಿಯಾ ದುನಿಯಾ ಅಲ್ವಾ, ಆ ಸ್ಟೈಲ್‌ಗೆ ತಕ್ಕಂತೆ ಕಣ್ಣಪ್ಪನನ್ನು ಆಕ್ಷನ್ ಹೀರೋ, ಮಾಸ್ ಹೀರೋ ಮಾಡಿ ಆಧುನಿಕ ಕಣ್ಣಪ್ಪನನ್ನಾಗಿಸಿದ್ದಾರೆ!

ಮಂಚು ಮನೋಜ್ 'ಕಣ್ಣಪ್ಪ'ನಾಗಿ ವಿಜೃಂಭಿಸಿರುವ ಈ ಸಿನಿಮಾದ ಟ್ರೇಲರ್ ಜೂನ್ 14 ರಂದು ರಿಲೀಸ್ ಆಗಿದೆ. ಈ ಸಿನಿಮಾವನ್ನು ಗೆಲ್ಲಿಸಿಯೇ ತೀರಬೇಕು ಎಂಬ ಹಠದಲ್ಲಿ ಹಲವು ಸ್ಟಾರ್ ನಟರನ್ನು ಅತಿಥಿ ಪಾತ್ರಗಳಿಗೆ ಹಾಕಿಕೊಳ್ಳಲಾಗಿದೆ. ತಂದೆ ಮೋಹನ್ ಬಾಬು ಜೊತೆಗೆ 'ಬಾಹುಬಲಿ'ಪ್ರಭಾಸ್, ಅಕ್ಷಯ್ ಕುಮಾರ್, ಮೋಹನ್‌ಲಾಲ್, ದೇವರಾಜ್, ಶರತ್ ಕುಮಾರ್ ಇನ್ನೂ ಹಲವರು ಈ ಸಿನಿಮಾದ ಅತಿಥಿ ಪಾತ್ರಗಳಲ್ಲಿ ನಟಿಸಿದ್ದಾರೆ. ಇವರು ಟ್ರೇಲರ್‌ನಲ್ಲಿಯೂ ಕಾಣಿಸಿಕೊಂಡಿದ್ದಾರೆ.

ಕನ್ನಡಿಗರು ನೋಡಿರುವ ಕಣ್ಣಪ್ಪನಿಗೂ ತೆಲುಗಿನವರ ಈಗಿನ ಕಣ್ಣಪ್ಪನಿಗೂ ಅಜಗಜಾಂತರ ವ್ಯತ್ಯಾಸವಿದೆ. ತೆಲುಗರು ಕಣ್ಣಪ್ಪನನ್ನು ಮಾಸ್ ಹೀರೋ, ಆಕ್ಷನ್ ಹೀರೋ ಆಗಿ ತೋರಿಸಲು ಏನೇನೋ ಕಸರತ್ತು ಮಾಡಿರುವುದು ಟ್ರೇಲರ್‌ನಿಂದಲೇ ಎದ್ದು ಕಾಣುತ್ತಿದೆ. ಚಿತ್ರ-ವಿಚಿತ್ರ ಮುಖವಾಡಗಳನ್ನು ಹೊಂದಿರುವ ವಿಲನ್‌ಗಳು, ವಾಯು ಲಿಂಗ... ಹೀಗೇ ಏನೇನೋ ಇದೆ. ವಾಯುಲಿಂಗದ ಕಲ್ಪನೆ ಇದೇ ಮೊದಲಿರಬೇಕು! ಆ ವಾಯುಲಿಂಗವನ್ನು ತನ್ನ ಬುಡಕಟ್ಟಿಗಾಗಿ ಕಾವಲು ಕಾಯುತ್ತಿರುವ ಬೇಡರ ಕಣ್ಣಪ್ಪನಾಗಿ ವಿಷ್ಣು ಮಂಚು ಒಂಥರ ಸಸ್ಪೆನ್ಸ್ ಹುಟ್ಟುಹಾಕಿದ್ದಾರೆ. ಈ ಸಿನಿಮಾನಲ್ಲಿ ನವನಟಿ ಪ್ರೀತಿ ಮುಕುಂದನ್ ನಾಯಕಿಯಾಗಿ ನಟಿಸಿದ್ದು, ಭಕ್ತಿರಸದ ಸಿನಿಮಾನಲ್ಲಿಯೂ ಸಖತ್ ಗ್ಲಾಮರಸ್ ಆಗಿ ಮಿಂಚುತ್ತಿದ್ದಾಳೆ!! ಇನ್ನುಳಿದಂತೆ, ಹಿರಿಯ ಹಾಸ್ಯನಟರಾದ ಬ್ರಹ್ಮಾನಂದಂ, ವೆಂಕಟ್ ಪ್ರಭು ಅವರುಗಳು ಹಾಸ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಮೊದಲೇ ತಿಳಿಸಿದಂತೆ 'ಕಣ್ಣಪ್ಪ' ಪ್ಯಾನ್ ಇಂಡಿಯಾ ಸಿನಿಮಾ ಆಗಿದ್ದು ಇದನ್ನು ಮುಖೇಶ್ ಕುಮಾರ್ ಸಿಂಗ್ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾಕ್ಕೆ ಮಂಚು ವಿಷ್ಣು ಮತ್ತು ಮೋಹನ್‌ಬಾಬು ಬಂಡವಾಳ ಹೂಡಿದ್ದಾರೆ. ಕತೆ ಬರೆದಿರುವುದು ಮಂಚು ವಿಷ್ಣು ಅವರೇ! ಸಂಗೀತ ನೀಡಿರುವುದು ಸ್ಟಿಫನ್ ದೇವಸ್ಸಿ. ಇಂತಿರ್ಪ ಕಣ್ಣಪ್ಪ ಇದೇ ಜೂನ್ 27ಕ್ಕೆ ಬಿಡುಗಡೆ ಆಗಲಿದೆ.

ಅಂದಹಾಗೆ, ಈ ಚಿತ್ರದಲ್ಲಿ ನಮ್ಮ ಸ್ಯಾಂಡಲ್ ವುಡ್ ಸೂಪರ್ ಸ್ಟಾ ಶಿವಣ್ಣ ಶಿವನಾಗಿ, ಸುಧಾರಾಣಿ ಪಾರ್ವತಿಯಾಗಿ ನಟಿಸಬೇಕಿತ್ತು. ಡೇಟ್ಸ್ ಸಮಸ್ಯೆಯಿಂದಾಗಿ ಶಿವಣ್ಣ ಹೋಗಲಿಲ್ಲ, ಶಿವಣ್ಣ ಇಲ್ಲಾ ಎಂಬ ಕಾರಣಕ್ಕೆ ಸುಧಾರಾಣಿಯೂ ಹೋಗಲಿಲ್ಲ. ಈಗ ಬಿಡುಗಡೆ ಆಗಿರುವ ಟ್ರೇಲರ್ ನೋಡಿದರೆ, ಇವರಿಬ್ಬರೂ ನಟಿಸದಿದ್ದುದೇ ಒಳ್ಳೆಯದಾಯ್ತು ಅನ್ನಿಸುತ್ತಿದೆ!!

# ಮಲ್ಟಿಪ್ಲೆಕ್ಸ್‌ಗಳಲ್ಲಿ ಕನ್ನಡ ಸಿನಿಮಾಗಳಿಗೆ ದ್ರೋಹ!

ಕನ್ನಡದ ಚಿತ್ರಗಳಿಗೆ ಕರ್ನಾಟಕದಲ್ಲಿಯೇ ನೆಲೆ ಇಲ್ಲ.. ಎಂದಾದರೆ, ಕನ್ನಡಿಗರು ನಾವ್ಯಾಕೆ ಇರಬೇಕು? ಈ ಸಮಸ್ಯೆ ಇಂದು ನಿನ್ನೆಯದ್ದಲ್ಲ, ಅನಾದಿಕಾಲದಿಂದಲೂ ಪರಭಾಷಾ ಸಿನಿಮಾಗಳ ಹಾವಳಿಯಿಂದ ನಮ್ಮ ಹೀರೋಗಳು, ನಿರ್ಮಾಪಕರು ಹಾಗೂ ನಿರ್ದೇಶಕರು ನೋವುಣ್ಣುತ್ತಲೇ ಇದ್ದಾರೆ. ಥೀಯೇಟರ್ ವಿಚಾರದಲ್ಲಿ ಬಾಯಿ ಬಡಿದುಕೊಳ್ಳುತ್ತಲೇ ಇದ್ದಾರೆ. ಆದರೆ ಕೇಳಿಸಿಕೊಳ್ಳುವವರು ಯಾರೂ ಇಲ್ಲ! ಕನ್ನಡ ಚಿತ್ರರಂಗ ಹಾಗೂ ಕನ್ನಡ ಕಲಾಪ್ರೇಮಿಗಳ ಈ ದಿವ್ಯ ಮೌನದ ಪ್ರತಿಫಲವೆನ್ನುವಂತೆ ಇದೀಗ ಮತ್ತೊಂದು ಕನ್ನಡ ಚಿತ್ರದ ಕಗ್ಗೊಲೆಯಾಗುತ್ತಿದೆ!



ವಿನೋದ್ ಪ್ರಭಾಕರ್, ಸೋನಲ್ ಅಭಿನಯದ 'ಮಾದೇವ' ಎರಡನೇ ವಾರದಲ್ಲಿ ಅದ್ಭುತ ಪ್ರದರ್ಶನ ಕಾಣುತ್ತಿದ್ದರೂ ಈ ಮಲ್ಟಿಪ್ಲೆಕ್ಸ್ ಮಂದಿ ಅದನ್ನು ಎತ್ತಿಟ್ಟು, ತೆಲುಗು, ಹಿಂದಿ ಚಿತ್ರಗಳಿಗೆ ಜಾಗ ಮಾಡಿಕೊಟ್ಟಿದ್ದಾರೆ! ಮೂರು ನಾಲ್ಕು ಪ್ರದರ್ಶನವಿದ್ದ ಜಾಗದಲ್ಲಿ 'ಮಾದೇವ' ನಿಗೆ ಒಂದೇ ಒಂದು ಶೋ ಕೊಟ್ಟಿದ್ದಾರೆ! ಹೀಗಾದರೆ, ಕನ್ನಡ ಸಿನಿಮಾ ಹಾಗೂ ನಮ್ಮ ನಿರ್ಮಾಪಕರ ಗತಿ ಏನು?! ಅಪರೂಪಕ್ಕೆ ಒಮ್ಮೆ ಮಾತ್ರ ಇಂಥ ಗೆಲುವು ದಕ್ಕುವುದು. ಈ ಗೆಲುವನ್ನು ಸಂಭ್ರಮಿಸುವ ಅದೃಷ್ಟ ನಮ್ಮ ಕನ್ನಡದ ಹೀರೋಗಳಿಗಿಲ್ವ?!



ವಿನೋದ್ ಪ್ರಭಾಕರ್ ಈ ಅನ್ಯಾಯದ ವಿರುದ್ಧ ಚಲನಚಿತ್ರ ವಾಣಿಜ್ಯ ಮಂಡಳಿಗೆ ತೆರಳಿ ದೂರಿದ್ದಾರೆ. ಅಧ್ಯಕ್ಷರಾದ ನರಸಿಂಹಲು ಮಲ್ಟಿಪ್ಲೆಕ್ಸ್‌ಗಳ ವಿರುದ್ಧ ಇನ್ನೂ ಯಾವ ಕ್ರಮವನ್ನು ಜರುಗಿಸಿದಂತೆ ಕಾಣಿಸುತ್ತಿಲ್ಲ! ಮರಿ ಟೈಗರ್ ವಿನೋದ್ ಹಿರಿಯ ನಟ ಟೈಗರ್ ಪ್ರಭಾಕರ್ ಅವರ ಮಗ ಎಂಬ ಕಾರಣಕ್ಕಾದರೂ ಸ್ವಲ್ಪ ಕರುಣೆ ಬೇಡ್ವಾ..??!

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 15.6.2025

# 'ಬಿಗ್‌ಬಾಸ್' ಸೀಸನ್-12 ಹೋಸ್ಟ್ ಯಾರು ಗೊತ್ತ?!



ಬಿಗ್‌ಬಾಸ್ ಕನ್ನಡ ರಿಯಾಲಿಟಿ ಶೋ ಕಿರುತೆರೆ ಲೋಕದಲ್ಲಿಯೇ ಅತಿದೊಡ್ಡ ಶೋ ಆಗಿರುವುದು ನಿಮಗೆಲ್ಲ ಗೊತ್ತೇ ಇದೆ. ಇದಕ್ಕೆ ಭಾರಿ ಟಿಆರ್‌ಪಿ ಬರುತ್ತದೆ. ಈ ಶೋ 11 ವರ್ಷಗಳನ್ನ ಪೂರೈಸಿದ್ದು, ಈ ಹನ್ನೊಂದು ವರ್ಷಗಳಲ್ಲೂ ಕಿಚ್ಚ ಸುದೀಪ್ ಅವರೇ ನಿರೂಪಣೆ ಮಾಡುತ್ತ ಬಂದಿದ್ದಾರೆ. ಒಂದರ್ಥದಲ್ಲಿ ಕನ್ನಡದಲ್ಲಿ ಬಿಗ್‌ಬಾಸ್ ಶೋ ಬಿಗ್ ಹಿಟ್ ಆಗಲು ಪ್ರಮುಖ ಕಾರಣನೇ ಕಿಚ್ಚ ಸುದೀಪ್ ಅಂದ್ರೂ ತಪ್ಪಾಗಲ್ಲ! ಬಿಗ್‌ಬಾಸ್ ಕನ್ನಡ ರಿಯಾಲಿಟಿ ಶೋ ನಿರೂಪಕರಾಗಿ ಸುದೀಪ್ ಕೂಡ ಇನ್ನೂ ಹೆಚ್ಚಿನ ಅಭಿಮಾನಿಗಳನ್ನ ಗಳಿಸಿದ್ದಾರೆ.

ಹೀಗಿರುವಾಗ, ಕಳೆದ ಬಿಗ್‌ಬಾಸ್ ಸೀಸನ್ 11 ನಡೆಯುತ್ತಿರುವಾಗಲೇ ಸುದೀಪ್ ಅವರು ಬಿಗ್‌ಬಾಸ್‌ಗೆ ವಿದಾಯ ಹೇಳಿದ್ದರು! ನಾನು ಮುಂದಿನ ಸೀಸನ್‌ಗೆ ನಿರೂಪಕನಾಗಿ ಬರೋದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದರು. ಮಾತ್ರವಲ್ಲ, ಸೀಸನ್ 11ರ ಫಿನಾಲೆ ವೇಳೆ ಸೋಷಿಯಲ್ ಮೀಡಿಯಾದಲ್ಲಿ 'ಇದು ನನ್ನ ಕೊನೇ ಬಿಗ್‌ಬಾಸ್ ಫಿನಾಲೆ' ಎಂದು ಪೋಸ್ಟ್ ಹಾಕಿದ್ದರು.ವಿಷಯ ಹೀಗಿದ್ದರೂ ಕಲರ್ಸ್ ಕನ್ನಡದವರು ಮಾತ್ರ ಹೇಗಾದರೂ ಮಾಡಿ ಕಿಚ್ಚ ಸುದೀಪ್ ಅವರನ್ನೇ 12ನೇ ಸೀಸನ್‌ಗೂ ಕರೆದುಕೊಂಡು ಬರಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ!

ಅಷ್ಟಕ್ಕೂ ಸುದೀಪ್ ಬಿಗ್‌ಬಾಸ್‌ಗೆ 'ಗುಡ್ ಬೈಭಿ ಹೇಳಿದ್ದೇಕೆ? ಈ ಬಗ್ಗೆ ಬಿಗ್ಬಾಸ್ ಆಯೋಜಕರು ತುಟಿ ಬಿಚ್ಚುತ್ತಿಲ್ಲ! ಒಂದು ಮೂಲದ ಪ್ರಕಾರ, ಬಿಗ್‌ಬಾಸ್‌ನಿಂದ ಅವರಿಗೆ ತುಂಬ ವರ್ಕ್ ಜಾಸ್ತಿ ಆಗ್ತಿದೆಯಂತೆ. ನೆಮ್ಮದಿಯಾಗಿ ಸಿನಿಮಾ ಮಾಡಲು ಸಾಧ್ಯವಾಗುತ್ತಿಲ್ಲವಂತೆ. ಯಾವುದೇ ಸಿನಿಮಾ ಶೂಟಿಂಗ್‌ನಲ್ಲಿದ್ದರೂ, ಶುಕ್ರವಾರ ಬಂತು ಅಂದ್ರೆ, ಬೆಂಗಳೂರಿಗೆ ಬರಬೇಕು, ಇದರಿಂದ ಅವರಿಗೆ ಬಹಳ ಕಷ್ಟವಾಗುತ್ತಿದೆಯಂತೆ.

ಬೇರೆ ಇನ್ನೊಂದು ಮೂಲದ ಪ್ರಕಾರ, ಬಿಗ್‌ಬಾಸ್‌ಕನ್ನಡದಲ್ಲಿ ಪರಭಾಷಿಕರ ಪ್ರಭಾವ ಜಾಸ್ತಿಯಾಗಿದೆ! ಆದ್ದರಿಂದಲೇ ಸುದೀಪ್ ಬೇಸರಿಸಿಕೊಂಡು ಹೊರ ನಡೆದಿದ್ದಾರೆ ಎಂದು ತಿಳಿದು ಬಂದಿದೆ. ಇದೀಗ ಬಿಗ್‌ಬಾಸ್ ಸೀಸನ್ 12 ಶುರುವಾಗುವ ಸಿದ್ಧತೆ ನಡೆಯುತ್ತಿವೆ. ಕಿಚ್ಚ ಸುದೀಪ್ ಅವರೇ ನಿರೂಪಕರಾಗಿ ಮುಂದುವರಿಯಬೇಕು ಎಂಬುದು ಅಭಿಮಾನಿಗಳ ಆಸೆಯೂ ಹೌದು. ಕಲರ್ಸ್ ಕನ್ನಡದವರು ಹೇಗಾದ್ರು ಮಾಡಿ ಕಿಚ್ಚಸುದೀಪ್ ಅವ್ರನ್ನ ಮನವೊಲಿಸಲು ಪ್ರಯತ್ನಿಸುತ್ತಿದ್ದಾರೆ! ಈ ಕೆಲಸದಲ್ಲಿ ಅವರು ಮತ್ತು ಆಯೋಜಕರು ಯಶಸ್ವಿಯಾಗಿದ್ದಾರೆ ಕೂಡ ಎಂದು ಸುದ್ದಿ ಹಬ್ಬಿದೆ!

ಸುದೀಪ್ ಕೂಡ ಕೆಲವು ಷರತ್ತು ಹಾಕಿ, ಅದಕ್ಕೆ ಒಪ್ಪಿದರೆ ಮಾತ್ರ ನಂತರ ನಿರೂಪಣೆಯಲ್ಲಿ ಮುಂದುವರಿಯಲು ಒಪ್ಪಿಕೊಂಡಿದ್ದಾರೆ ಎಂದು ಹೇಳಲಾಗ್ತಿದೆ! ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು, ಒಳ್ಳೆಯ ಲೀಗಲ್ ಟೀಮ್ ಇರಬೇಕು, ವಿವಾದಿತ ಸ್ಪರ್ಧಿಗಳನ್ನ ಆರಿಸಬಾರದು! ಎಂಬಿತ್ಯಾದಿ ಕಂಡಿಷನ್ ಹಾಕಿದ್ದಾರೆ ಎಂದು ತಿಳಿದು ಬಂದಿದೆ. ಈ ವಿಷಯವನ್ನ ಕಿಚ್ಚನ ಫ್ಯಾನ್ಸ್ ಸಿಕ್ಕಾಪಟ್ಟೆ ಶೇರ್ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಕಲರ್ಸ್ ಕನ್ನಡ ಮಂಡದಿಯಾಗಲಿ, ಬಿಗ್‌ಬಾಸ್ ಸಂಯೋಜಕರಾಗಲಿ ಇನ್ನೂ ಅಧಿಕೃತ ಮಾಹಿತಿ ಪ್ರಕಟಿಸಿಲ್ಲ. ಹೀಗಾಗಿ, ಇದು ನಿಜಾನಾ... ಸುಳ್ಳಾ... ಕ್ಲಾರಿಟಿ ಸಿಗುತ್ತಿಲ್ಲ!!

ಅಂದಹಾಗೆ, ಈ ಭಾರಿ ಬಿಗ್ ಬಾಸ್ ಆಯೋಜಕರು ಬಹಳ ಬುದ್ಧಿವಂತಿಕೆಯಿಂದ ಸ್ಪರ್ಧಿಗಳ ಆಯ್ಕೆಯಲ್ಲಿ ತೊಡಗಿದ್ದಾರೆ. ಒಂದಷ್ಟು ಹೆಸರುಗಳು ಸೋರಿಕೆಯಾಗಿವೆ!

**ಮಡೆನೂರು ಮನು :** ಅತ್ಯಾಚಾರ, ಗರ್ಭಪಾತದ ಆರೋಪದ ಮೇಲೆ ಇತ್ತೀಚೆಗಷ್ಟೇ ಜೈಲಿಗೆ ಹೋಗಿ ಬಂದವರು ಮಡೆನೂರು ಮನು. ಶಿವಣ್ಣ, ಧ್ರುವ ಸರ್ಜಾ, ದರ್ಶನ್ ಬಗ್ಗೆ ಮಡೆನೂರು ಮನು ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಸಹ ವೈರಲ್ ಆಗಿತ್ತು. ಇಂದಿನ ಕಾಂಟ್ರೋವರ್ಸಿಯಲ್ ಹೀರೋ ಮಡೆನೂರ್ ಮನು 'ಬಿಗ್‌ಬಾಸ್' ಶೋಗೆ ಬಂದ್ರೆ ಅದರ ಖದರ್ರೆ ಬೇರೆ. ಸೋ, ಅವರ ಆಯ್ಕೆ ಆಗಿದೆ!

**ಮಿಂಚು ಡುಮ್ಮಿ :** 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಹಾಗೂ ಮನು ಅವರನ್ನು ಅನ್ಯಾಯವಾಗಿ ಜೈಲಿಗೆ ಕಳುಹಿಸಿದ ಮಿಂಚು ಎರಡನೇ ಆಯ್ಕೆ! ಮಡೆನೂರು ಮನು ಜೊತೆಗೆ ಸ್ಕ್ರೀನ್ ಶೇರ್, ಸ್ಕಿನ್ ಶೇರ್ ಮಾಡಿ ಈಗ ಕಿಲಾಡಿ ಆಟ ಆಡಿರೋ ಮಿಂಚು 'ಬಿಗ್‌ಬಾಸ್' ಮನೆಯಲ್ಲಿ ಮನು ಎದುರು ನಿಂತರೆ ಹೇಗಿರುತ್ತೆ?!

**ವರುಣ್ ಆರಾಧ್ಯ :** 'ಬೃಂದಾವನ' ಸೀರಿಯಲ್ ಹೀರೋ ವರುಣ್ ಆರಾಧ್ಯ ಸೋಷಿಯಲ್ ಮೀಡಿಯಾದಲ್ಲೂ ಆಕ್ಟಿವ್ ಆಗಿದ್ದಾರೆ. ಈಗ ವರುಣ್ ಆರಾಧ್ಯಗೆ 'ಬಿಗ್‌ಬಾಸ್' ಕಡೆಯಿಂದ ಆಫರ್ ಹೋಗಿದೆಯಂತೆ!

**ವರ್ಷಾ ಕಾವೇರಿ :** ಬೃಂದಾವನದ ರಾಧೆ ಕೃಷ್ಣ ಎಂದೇ ಫೇಮಸ್ ಆಗಿರುವ ವರುಣ್ ಆರಾಧ್ಯ - ವರ್ಷಾ ಕಾವೇರಿ ಮಧ್ಯೆ ಬ್ರೆಕಪ್ ಆಗಿತ್ತು! ಎಂದೋ ದೂರವಾಗಿ ಕೊತ ಕೊತ ಕುಡಿಯುತ್ತಿರೋ ಜೋಡಿ 'ಬಿಗ್‌ಬಾಸ್' ಮನೆಯಲ್ಲಿಮುಖಾಮುಖಿಯಾದರೆ?! ಸೋ, ವರ್ಷಾ ಕಾವೇರಿ ಆಯ್ಕೆ ಕಸರತ್ತು ನಡೆದಿದೆ!

**ಕಿಪಿ ಕೀರ್ತಿ-ಮುತ್ತು :** ಸೋಷಿಯಲ್ ಮೀಡಿಯಾದಲ್ಲಿ ಸಕ್ರಿಯರಾಗಿರುವವರಿಗೆ ವಂಡರ್ ಗರ್ಲ್ ಕಿಪಿ ಕೀರ್ತಿ ಮತ್ತು 'ಮುತ್ತು' ಲವ್ ಸ್ಟೋರಿ-ಬ್ರೆಕಪ್ ಬಗ್ಗೆ ಗೊತ್ತೇ ಇರುತ್ತದೆ. ಒಂದು ವೇಳೆ ಕಿಪಿ ಕೀರ್ತಿ ಮತ್ತು ಮಾಜಿ ಲವ್ವರ್ ಮುತ್ತು 'ಬಿಗ್‌ಬಾಸ್' ಮನೆಯೊಳಗೆ ಬಂದರೆ ಹೇಗಿರಬಹುದು... ಇವರಿಬ್ಬರ ಆಯ್ಕೆ ಆಗಿದೆ!




## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ - ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೋರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ಧವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

**ಸಂಪರ್ಕಕ್ಕಾಗಿ**

**9513892666, 8884452699** policenewsreporter@gmail.com


Vol. 41 No. 02 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com